ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 40 | ಸೆಪ್ಟೆಂಬರ್ 27–ಅಕ್ಟೋಬರ್ 3, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



## ಮನುವಾದಿಗಳ ಅಧಿಕಾರ ಮತ್ತು ಅಸ್ಪೃಶ್ಯತೆ



## ನೌಕರಿ ಹೆಸರಲ್ಲಿ ಮೋಸ



## ಕೇರಳದಲ್ಲಿ ಕೋಮು ವಿಭಜನೆಗೆ ನಕಾರ

## AUKUS : ಶೀತಸಮರ 2.0ದ ಹೊಸ ರಂಪ

AUSTRALIA-UK-US FORM MILITARY PACT




## ಸಂಪತ್ತಿನ ವರ್ಗಾವಣೆಗೆ ಕೆಟ್ಟ ಬ್ಯಾಂಕ್




## ಅಕ್ಟೋಬರ್ 7: ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ

ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಕರೆ

# ‘ಭಾರತ ಬಂದ್’:ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಬೆಂಬಲ

## “ರೈತರ ಹೋರಾಟ ಭಾರತದ ಜನತೆಯ ವಿಶಾಲ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಒಂದು ಆಂದೋಲನವಾಗಿ ಬಿಟ್ಟಿದೆ”

**ಕೇಂದ್ರ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ವಲಯವಾರು ಒಕ್ಕೂಟಗಳ ಜಂಟಿ ವೇದಿಕೆ ಮತ್ತು ಸಂಘಗಳು ಸಂಯುಕ್ತ ಕಿಸಾನ್ ಮೋರ್ಚಾ ದ ಸಪ್ಟಂಬರ್27ರ ‘ಭಾರತ ಬಂದ್’ ಕರೆಗೆ ಬೆಂಬಲ ವ್ಯಕ್ತಪಡಿಸಿದೆ.**

ಸಪ್ಟಂಬರ್ 17ರಂದು ಜಂಟಿ ವೇದಿಕೆ ನೀಡಿರುವ ಹೇಳಿಕೆಯಲ್ಲಿ ಕಳೆದ 9 ತಿಂಗಳಿಗಿಂತಲೂ ಹೆಚ್ಚು ಸಮಯದಿಂದ ಮೂರು ಕೃಷಿ ಕಾಯ್ದೆಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯ ವಿರುದ್ಧ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸುತ್ತಿರುವ ರೈತರನ್ನು ಅಭಿನಂದಿಸಿರುವ ಜಂಟಿ ವೇದಿಕೆ, ಸಪ್ಟಂಬರ್ 5ರಂದು ಉತ್ತರಪ್ರದೇಶದ ಮುಝಫ್ಫರ್‌ನಗರದಲ್ಲಿ ಮಹಾಪಂಚಾಯತ್‌ನ ಬೃಹತ್ ರ್‍ಯಾಲಿ , ಮತ್ತು ‘ಮಿಶನ್ ಉತ್ತರಪ್ರದೇಶ” ಹಾಗೂ ‘ಮಿಷನ್ ಉತ್ತರಾಖಂಡ’ ಆರಂಭಿಸಿರುವುದಕ್ಕೂ ಅಭಿನಂದನೆ ಸಲ್ಲಿಸಿದೆ.

ಈ ಎರಡು ರಾಜ್ಯಗಳಲ್ಲಿರುವ ಸರಕಾರಗಳು ರೈತ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ನವ–ಉದಾರವಾದಿ ಧೋರಣೆಗಳನ್ನು ಅನುಸರಿಸುತ್ತಿವೆ, ಮಾತ್ರವಲ್ಲದೆ, ಜನಗಳನ್ನು ಮತ್ತು ಸಮಾಜವನ್ನು ಕೋಮು ಆಧಾರದಲ್ಲಿ ಧ್ರುವೀಕರಿಸಿ, ವಿಭಜನೆಗಳನ್ನು ಉಂಟು ಮಾಡಲು, ಹಾಗೂ ಐಕ್ಯ ಹೋರಾಟಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿವೆ. ಆದ್ದರಿಂದ ಇವುಗಳನ್ನು ಸೋಲಿಸಲು ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ.

ಕೇಂದ್ರ ಸರಕಾರದ ಎರಡನೇ ಅವಧಿಯ ವರ್ತನೆಯನ್ನು ಕಂಡರೆ ಶ್ರಮಜೀವಿ ಜನಗಳಿಗೆ ಏನು ಬೇಕು ಎಂಬುದು ಅದಕ್ಕೆ ಬೇಕಾಗಿಯೇ ಇಲ್ಲ ಮಾತ್ರವಲ್ಲ, ತನ್ನ ಕಾರ್ಪೊರೇಟ್–ಪರ ಅಜೆಂಡಾವನ್ನು ಇಂದೇ ಈ ಸಾಂಕ್ರಾಮಿಕದ ಅವಧಿಯನ್ನು ಉದ್ದೇಶಪೂರ್ವಕವಾಗಿ ಬಳಸಿಕೊಂಡು ತರಾತುರಿಯಲ್ಲಿ ಜಾರಿಗೊಳಿಸಬೇಕು, ನಾಳೆಯೆಂದರೆ ಅವಕಾಶ ಸಿಗದು ಎಂದು ಭಾವಿಸಿದಂತಿದೆ ಎಂದಿರುವ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ‘ರಾಷ್ಟ್ರೀಯ ನಗದೀಕರಣ ಕ್ರಮಸರಣಿ’ಯನ್ನು ಖಂಡಿಸುವಲ್ಲಿ ಎಸ್‌ಕೆಎಂನೊಂದಿಗೆ ದನಿಗೂಡಿಸಿದೆ. ಇದು ಜನಗಳ ಸಂಪತ್ತನ್ನು ತನ್ನ ಕಾರ್ಪೊರೇಟ್ ಬಂಟರಿಗೆ ವಹಿಸಿಕೊಡಲಿಕ್ಕಾಗಿ, ಈಗಾಗಲೇ ಅಹನೀಯವಾಗಿರುವ ಬೆಲೆಯೇರಿಕೆಯನ್ನು ಮತ್ತಷ್ಟು ಹೆಚ್ಚಿಸಿ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹಾಕುವದು ಖಂಡಿತ ಎಂದು ಅದು ಹೇಳಿದೆ.

**ಈ ಸರಕಾರದ ಇತ್ತೀಚಿನ ಆಘಾತಕಾರಿ ನಡೆ ಎಂದರೆ ಕಾರ್ಮಿಕರ ಭವಿಷ್ಯನಿಧಿಯುಲ್ಲಿ ಜಮಾ ಆಗಿರುವ ಬಡ್ಡಿಯ ಮೇಲೂ ತೆರಿಗೆ ಹಾಕುವುದು** ಎಂದು ಈ ಜಂಟಿ ವೇದಿಕೆಯ ಹೇಳಿಕೆಯಲ್ಲಿ ಟಿಪ್ಪಣಿ ಮಾಡಲಾಗಿದೆ.

ಕಾರ್ಮಿಕ ಸಂಘಗಳಿಂದ ಮತ್ತು ಇತರ ಶ್ರಮಜೀವಿ ಜನವಿಭಾಗಗಳಿಂದಲೂ, ಕೃಷಿ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರಿಂದಲೂ ರೈತರ ಈ ಚಳುವಳಿಗೆ ವ್ಯಾಪಕ ಬೆಂಬಲವಿದೆ. ರೈತರ ಈ ಹೋರಾಟ ಭಾರತದ ಜನತೆಯ ವಿಶಾಲ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಒಂದು ಆಂದೋಲನವಾಗಿ ಬಿಟ್ಟಿದೆ ಎಂದು ಜಂಟಿ ವೇದಿಕೆ ವರ್ಣಿಸಿದೆ.

ಹರ್ಯಾಣದ ಕರ್ನಾಲ್‌ನಲ್ಲಿನ ಇತ್ತಿಚಿನ ಘಟನೆಗಳು ಅಲ್ಲಿನ ಆಳುವ ಪಕ್ಷದ ನಿಜ ಮುಖವನ್ನು ತೊರಿಸಿದೆ ಎಂದು ಖಂಡಿಸಿರುವ ಜಂಟಿ ವೇದಿಕೆ ಅಮಾನುಷ ಲಾಠೀ ಪ್ರಹಾರಕ್ಕೆ ಕಾರಣರಾದ ಸರಕಾರಿ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳ್ಳಬೇಕು, ಬಾಧಿತರಾದವರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ನಡೆದ ಮಿನಿ ಸಚಿವಾಲಯ ಮುತ್ತಿಗೆಯ ಕಾರ್ಯಕ್ರಮವನ್ನು ಬೆಂಬಲಿಸಿದೆ.

ಎಸ್‌ಕೆಎಂ ಕಾರ್ಮಿಕ–ವಿರೋಧಿ ಕಾರ್ಮಿಕ ಸಂಹಿತೆಗಳ ವಿರುದ್ಧ ಕಾರ್ಮಿಕ ವರ್ಗದ ಹೋರಾಟವನ್ನು ಬೆಂಬಲಿಸುತ್ತಿರುವ ಬಗ್ಗೆ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಕೃತಜ್ಞತೆ ವ್ಯಕ್ತಪಡಿಸುತ್ತ ಸಪ್ಟಂಬರ್ 27 ರ ಭಾರತ ಬಂದ್ ಕರೆಯನ್ನು, ಸ್ವತಃ ಹೋರಾಟದಲ್ಲಿರುವ, ನಾಲ್ಕು ಕಾರ್ಮಿಕ ಸಂಹಿತೆಗಳು, ಎಲ್ಲ ಕ್ಷೇತ್ರಗಳಲ್ಲಿನ ಎಲ್ಲ ಸಾರ್ವಜನಿಕ ವಲಯದ ಎಲ್ಲ ಉದ್ದಿಮೆಗಳ ಸಾರಾಸಗಟು ಖಾಸಗೀಕರಣರ ವಿರುದ್ಧ ಹೋರಾಟ ನಡೆಸುತ್ತಿರುವ ಕಾರ್ಮಿಕ ಸಂಘಟನೆಗಳು ಸಂಪೂರ್ಣವಾಗಿ ಬೆಂಬಲಿಸುತ್ತವೆ ಎಂದು ಜಂಟಿ ವೇದಿಕೆ ಹೇಳಿದೆ. ಕಾರ್ಮಿಕ ಸಂಘಟನೆಗಳೂ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು, ಮನರೇಗ ಬಜೆಟನ್ನು ಹೆಚ್ಚಿಸಬೇಕು ಎಂದೂ ಆಗ್ರಹಿಸುತ್ತಿವೆ. ಆದ್ದರಿಂದ ಸೌಹಾರ್ದ ಕಾರ್ಯಾಚರಣೆಗಳ ಮೂಲಕ ಈ ಕಾರ್ಯಾಚರಣೆ ಸಂಪೂರ್ಣವಾಗಿ ಯಶಸ್ವಿಯಾಗುವಂತೆ ಖಾತ್ರಿಪಡಿಸುತ್ತವೆ.

**ಸಪ್ಟಂಬರ್ 27ರ ಭಾರತ ಬಂದ್, ಸಮಾಜದ ಬೆನ್ನೆಲುಬಾಗಿರುವ ಎರಡು ಪ್ರಮುಖ ವರ್ಗಗಳು, ರೈತಾಪಿ ಮತ್ತು ಕಾರ್ಮಿಕ ವರ್ಗ ಜನ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳನ್ನು ವಿರೋಧಿಸುವಲ್ಲಿ ಒಂದಾಗಿ ನಿಲ್ಲುತ್ತವೆ ಎಂಬ ಗಟ್ಟಿ ಸಂದೇಶವನ್ನು ಆಳುವ ಸರಕಾರಕ್ಕೆ ಕೊಡುತ್ತದೆ.** ಕಾರ್ಪೊರೇಟ್ ಲೂಟಿಗೆ ಮತ್ತು ಅವರಿಗೆ ನಿಧಿಗಳನ್ನು ಒದಗಿಸುವ ದೇಶ–ವಿದೇಶಗಳ ಅವರ ಧಣಿಗಳಿಗೆ ಸೌಕರ್ಯ ಒದಗಿಸಲು ಕೋಮುಧ್ರುವೀಕರಣದ ಕುತಂತ್ರಗಳಿಗೆ ಈ ದೇಶದ ದೇಶಪ್ರೇಮಿ ಜನತೆ ಅವಕಾಶ ಕೊಡುವುದಿಲ್ಲ ಎಂಬ ಬಲವಾದ ಸಂದೇಶವನ್ನು ಈ ಕಾರ್ಯಾಚರಣೆ ಕೊಡಲಿದೆ.

**ಈ ಐಕ್ಯ ಹೋರಾಟ ಮೂರು ಕೃಷಿ ಕಾಯ್ದೆಗಳು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳು ರದ್ದಾಗುವ ವರೆಗೂ, ಮತ್ತು ದೇಶವನ್ನು ಖಾಸಗೀಕರಣ ಹಾಗೂ ನಗದೀಕರಣದ ಮೂಲಕ ಮಾರುವ ಪ್ರಯತ್ನಗಳನ್ನು ನಿಲ್ಲಿಸುವ ವರೆಗೂ ಮುಂದುವರೆಯುತ್ತದೆ** ಕಾರ್ಮಿಕ ಸಂಘಟನೆಗಳ ವೇದಿಕೆ ಆಶ್ವಾಸನೆ ನೀಡಿದೆ.

ಐಎನ್‌ಟಿಯುಸಿ, ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಕಾರ್ಮಿಕರ ಮತ್ತು ನೌಕರರ ಒಕ್ಕೂಟಗಳು ಈ ಜಂಟಿ ಹೇಳಿಕೆಗೆ ಸಹಿ ಹಾಕಿವೆ.

# ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಬೆಂಬಲ

ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟ(ಎಐಬಿಒಸಿ) ಸಂಯುಕ್ತ ಕಿಸಾನ್ ಮೋರ್ಚಾದ ಭಾರತ ಬಂದ್ ಕರೆಗೆ ಬೆಂಬಲ ಸೂಚಿಸಿದೆ. ತನ್ನ ಎಲ್ಲ ಸಂಯೋಜಿತ ಘಟಕಗಳು ಮತ್ತು ರಾಜ್ಯ ಘಟಕಗಳು ಇದಕ್ಕೆ ಸೌಹಾರ್ದದ ಕಾಯಾಚರಣೆಗಳಲ್ಲಿ ಭಾಗವಹಿಸುತ್ತವೆ ಎಂದು ಹೇಳಿರುವ ಅದು ಭಾರತ ಸರಕಾರ ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಬೇಕು, ರೈತ–ವಿರೋಧಿ ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದೆ.

ಈ ತಿಂಗಳ ಆರಂಭದಲ್ಲಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ(ಎನ್‌ಎಸ್‌ಎಸ್) ಸಮಘಟನೆ “ಭೂಮಿ ಮತ್ತು ಜಾನುವಾರು ಹಿಡುವಳಿಗಳು ಮತ್ತು ಕೃಷಿ ಕುಟುಂಬಗಳ ಸನ್ನಿವೇಶ ಅಂದಾಜು” ವರದಿ ಬಿಡುಗಡೆಯಾಗಿದ್ದು, ಅದರ ಪ್ರಕಾರ **“2022ರೊಳಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ” ಗುರಿ ಈಡೇರುವ ಸಾಧ್ಯತೆಯೇ ಇಲ್ಲ. ಬದಲಾಗಿ, ಕೃಷಿ ಕುಟುಂಬಗಳ ಸರಾಸರಿ ಸಾಲ 2013ರಲ್ಲಿ ಇದ್ದ ರೂ.47000 ದಿಂದ 2018ರಲ್ಲಿ ರೂ.74121 ಕ್ಕೇರಿದೆ.** ಇದು ಕೃಷಿಯಲ್ಲಿನ ಹತಾಶ ಸ್ಥಿತಿಯ ಸಂಕೇತ ಎಂದು ಎಲ್ಲರಿಗೂ ಗೊತ್ತಿದೆ. ಈ ಹಿನ್ನೆಲೆಯಲ್ಲಿ, ಕೃಷಿ ಉತ್ಪಾದನೆ ಮತ್ತು ಮಾರಾಟದಲ್ಲಿ ದೊಡ್ಡ ಕಾರ್ಪೊರೇಟ್ ಗುಂಪುಗಳಿಗೆ ಮುಕ್ತ ಅವಕಾಶ ಕೊಡುವುದು, ಸಾರ್ವಜನಿಕ ಖರೀದಿಯನ್ನು ಹಾಗೂ ಅಗತ್ಯ ಸರಕುಗಳ ದಾಸ್ತಾನು ನಿಯಮಾವಳಿಗಳನ್ನು ದುರ್ಬಲಗೊಳಿಸುವುದು ರೈತರ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಎಂದು ಸರಕಾರವನ್ನು ಎಐಬಿಒಸಿ ಎಚ್ಚರಿಸಿದೆ.

# ಖಾಸಗಿ ಟೆಲಿಕಾಂ ಕಂಪನಿಗಳಿಗೆ 1.31 ಲಕ್ಷ ಕೋಟಿ ರೂ. ಬಕ್ಷೀಸು ನೀಡುವ ಸರಕಾರದ ‘ಭವ್ಯ ಸುಧಾರಣೆ’: ಸಿಐಟಿಯು ಖಂಡನೆ

ಕೇಂದ್ರ ಸರಕಾರ ದೂರಸಂಪರ್ಕ ವಲಯದ ಸುಧಾರಣೆಗಳ ಹೆಸರಿನಲ್ಲಿ ಕೈಗೊಂಡಿರುವ ನಿರ್ಧಾರ ಸಾರ್ವಜನಿಕ ವಲಯದ ಬಿ.ಎಸ್.ಎನ್.ಎಲ್. ಮತ್ತು ಎಂ.ಟಿ.ಎನ್.ಎಲ್. ವಿರುದ್ಧ ಯಾವುದೇ ನಾಚಿಕೆಯಿಲ್ಲದೆ ತಾರತಮ್ಯ ಮಾಡುತ್ತಿದೆ, 1.31 ಲಕ್ಷ ಕೋಟಿ ರೂ.ಗಳ ಆದಾಯ ಖಾಸಗಿ ದೂರಸಂಪರ್ಕ ಕಂಪನಿಗಳ ಪಾಲಾಗುವಂತೆ ಮಾಡುತ್ತಿದೆ, ಇದು ಅತ್ಯಂತ ಖಂಡನಾರ್ಹ ಎಂದು ಸಿಐಟಿಯು ಹೇಳಿದೆ.

ಕೇಂದ್ರ ಸಂಪುಟ, ಖಾಸಗಿ ಕಂಪನಿಗಳು ತೆರಬೇಕಾಗಿದ್ದ 1.31ಲಕ್ಷ ಕೊಟಿ ರೂ.ಗಳನ್ನು ಪಾವತಿ ಮಾಡುವುದನ್ನು ನಾಲ್ಕು ವರ್ಷ ಮುಂದೂಡುವುದಕ್ಕೆ ಅವಕಾಶ ಕೊಡಲು ನಿರ್ಧರಿಸಿದೆ. ಇದು ಅಂತಿಮವಾಗಿ ಜನಗಳಿಗೆ ಸೇರಿದ ಹಣ. ಸುಪ್ರಿಂ ಕೋರ್ಟ್ ಇದು ಈ ಖಾಸಗಿ ಕಂಪನಿಗಳು ತೆರಬೇಕಾದ ಹಣ ಎಂಬುದನ್ನು ಎತ್ತಿಹಿಡಿದಿದ್ದು, ಅದನ್ನೂ ಉಪೇಕ್ಷಿಸಿ ಈ ನಿರ್ಣಯವನ್ನು ಸರಕಾರ ಕೈಗೊಂಡಿದೆ.

ಇದಲ್ಲದೆ, ನಾಲ್ಕು ವರ್ಷಗಳ ನಂತರವೂ ಈ ಬಾಕಿಯನ್ನು ತೆರಲಾಗದಿದ್ದರೆ, ಅವನ್ನೆಲ್ಲ ಇಕ್ವಿಟಿಯಾಗಿ ಪರಿವರ್ತಿಸಲಾಗುವುದು ಎಂದೂ ಕೇಂದ್ರ ಸರಕಾರ ಹೇಳಿದೆ.

ಒಂದೆಡೆಯಲ್ಲಿ ಖಾಸಗಿ ಕಂಪನಿಗಳಿಗೆ ಈ ಭಾರೀ ಬಕ್ಷೀಸನ್ನು ಕೊಟ್ಟು ರಾಷ್ಟ್ರೀಯ ಬೊಕ್ಕಸಕ್ಕೆ ಭಾರೀ ನಷ್ಟ ಉಂಟು ಮಾಡುವಾಗಲೇ, ಬಿ.ಎಸ್.ಎನ್.ಎಲ್.ಗೆ ಸರಕಾರ ತೆರಬೇಕಾದ ರೂ. 39,000 ಕೋಟಿ ರೂ.ಗಳನ್ನು ಕೊಡದೆ ಅದು ತನ್ನ ಕಾರ್ಯನಿರ್ವಹಣಾ ದಕ್ಷತೆಯನ್ನು ಮತ್ತು ಸಂಪರ್ಕ ಜಾಲವನ್ನು ವಿಸ್ತರಿಸಲಾಗದಂತೆ ಅಡ್ಡಿಯುಂಟು ಮಾಡಿದೆ, ಈ ಮೂಲಕ ಕೂಡ ಖಾಸಗಿ ವಲಯದ ದೂರಸಂಪರ್ಕ ಕಂಪನಿಗಳಿಗೆ ಪ್ರಯೋಜನ ದಕ್ಕುವಂತೆ ಮಾಡಲಾಗುತ್ತಿದೆ ಎಂದು ಸಿಐಟಿಯು ಬಲವಾಗಿ ಟೀಕಿಸಿದೆ.

ಇಷ್ಟೇ ಅಲ್ಲ, ಭಾರೀ ದೊಡ್ಡ ಟೆಲಿಕಾಂ ವಲಯದ ಸುಧಾರಣೆ ಎಂದು ಹೇಳಲಾಗುವ ಇದರಲ್ಲಿ ಬಿ.ಎಸ್.ಎನ್.ಎಲ್. ಮತ್ತು ಎಂ.ಟಿ.ಎನ್.ಎಲ್. ಗಳು 4ಜಿ ಸೇವೆಗಳೂ ಸೇರಿದಂತೆ ತಮ್ಮ ಸೇವೆಗಳನ್ನು ಉತ್ತಮಪಡಿಸಲು ಯಾವುದೇ ನೆರವನ್ನು ನೀಡಿಲ್ಲ. ಈಗಾಗಲೇ ಸರಕಾರ ಬಿ.ಎಸ್.ಎನ್.ಎಲ್. ತನ್ನ ಆಯ್ಕೆಯ ಮೂಲಗಳಿಂದ 4ಜಿ ಸಾಧನಗಳನ್ನು ಖರೀದಿಸದಂತೆ ಅಡ್ಡಗಾಲು ಹಾಕಿದೆ. ಕೇವಲ ದೇಶೀ ಮೂಲಗಳಿಂದಲೇ ಖರೀದಿಸಬೇಕು ಎಂದು ವಿಧಿಸಿರುವ ಸರಕಾರ ಖಾಸಗಿ ಕಂಪನಿಗಳು ಮಾತ್ರ ಜಾಗತಿಕ ಮಾರಾಟಗಾರರಿಂದ ಇಂತಹ ಸಾಧನಗಳನ್ನು ಖರೀದಿಸಲು ಮುಕ್ತ ಅವಕಾಶ ನೀಡಿದೆ. ಯಾವುದೇ ಭಾರತೀಯ ಕಂಪನಿಯ ಬಳಿ ಸಾಬೀತಾದ 4ಜಿ ತಂತ್ರಜ್ಞಾನವಿಲ್ಲ. ಈ ಮೂಲಕ ಸರಕಾರ ಉದ್ದೇಶಪೂರ್ವಕವಾಗಿಯೆ ಬಿ.ಎಸ್.ಎನ್.ಎಲ್. 4ಜಿ ಸೇವೆಗಳನ್ನು ಆರಂಭಿಸುವಲ್ಲಿ ಅಡ್ಡಿ–ಆತಂಕಗಳನ್ನೊಡ್ಡಿದೆ. ಇದಲ್ಲದೆ, 100% ಎಫ್‌ಡಿಐ ಗೆ ಅವಕಾಶ ಕೊಟ್ಟು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಟೆಲಿಕಾಂ ವಲಯವನ್ನು ಸಂಪೂರ್ಣವಾಗಿ ವಹಿಸಿಕೊಳ್ಳಲು ಬಿಟ್ಟಿದೆ. ಇದು ರಾಷ್ಟ್ರೀಯ ಭದ್ರತೆಯ ಮೇಲೂ ದುಷ್ಪರಿಣಾಮ ಬೀರುವಂತದ್ದು ಎಂದು ಸಿಐಟಿಯು ಟೀಕಿಸಿದೆ.

ಟೆಲಿಕಾಂ ವಲಯದಲ್ಲಿ ಇಂತಹ ನಾಚಿಕೆಗೆಟ್ಟ ತಾರತಮ್ಯಪೂರ್ಣ ಧೋರಣೆ ಈ ರಾಷ್ಟ್ರೀಯ ಆಸ್ತಿಗಳ, ಅದರಲ್ಲೂ ಮೂಲರಚನಾ ಆಸ್ತಿಗಳ ಸಂಪೂರ್ಣ ಖಾಸಗೀಕರಣದ , ಮತ್ತು ಸಾರ್ವಜನಿಕ ಖಜಾನೆಯಿಂದ ದೇಶಿ–ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಗೆ ಹಣ ಹರಿದುಹೋಗಲು ಬಿಡುವ ಈ ಕೆಂದ್ರ ಸರಕಾರದ ಭವ್ಯ ಯೋಜನೆಯ ಅಭಿನ್ನ ಅಂಗ ಎಂದು ಬಲವಾಗಿ ಟೀಕಿಸಿರುವ ಸಿಐಟಿಯು ಸರಕಾರದ ಇಂತಹ ಸಾರ್ವಜನಿಕ ವಲಯ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಹುನ್ನಾರಗಳನ್ನು ವಿರೋಧಿಸಬೇಕು ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

## ಕೊವಿಡ್ ಪರಿಹಾರದ ಹೊಣೆ ಕೇಂದ್ರ ಸರಕಾರದ್ದು

ಕೊವಿಡ್ ಸಾವುಗಳ ಸಂಕಟಕ್ಕೆ ಈಡಾದ ಕುಟುಂಬಗಳಿಗೆ ರೂ.50,000 ಪರಿಹಾರ ನೀಡಬೇಕೆಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಶಿಫಾರಸು ಮಾಡಿರುವುದಾಗಿ ಕೇಂದ್ರ ಸರಕಾರ ಸುಪ್ರಿಂ ಕೊರ್ಟಿಗೆ ಮಾಹಿತಿ ನೀಡಿದೆ. ಆದರೆ ಈ ಮೊತ್ತವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್)ಯಿಂದ ರಾಜ್ಯ ಸರಕಾರಗಳು ಕೊಡಬೇಕಾಗಿದೆ.

ಕೊವಿಡ್ ಸಾವುಗಳಿಗೆ ಪರಿಹಾರದ ವೆಚ್ಚವನ್ನು ರಾಜ್ಯ ಸರಕಾರದ ಮೇಲೆ ಹೊರಿಸುವುದು ಸರಿಯಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಎಸ್‌ಡಿಆರ್‌ಎಫ್ ಕೊವಿಡ್‌ನ್ನು ನಿಭಾಯಿಸುವುದು ಸೇರಿದಂತೆ ಇತರೆಲ್ಲ ಸಾಂಕ್ರಾಮಿಕ ಸಂಬಂಧಿ ವೆಚ್ಚಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಅಲ್ಲದೆ ರಾಜ್ಯ ಸರಕಾರಗಳು ಗಂಭೀರ ಸಂಪನ್ಮೂಲ ಕೊರತೆಯನ್ನು ಎದುರಿಸುತ್ತಿವೆ.

ಕೊವಿಡ್ ಸಾಂಕ್ರಾಮಿಕದ ನಿರ್ವಹಣೆ ಪ್ರಥಮತಃ ರಾಜ್ಯ ಸರಕಾರಗಳೊಂದಿಗೆ ಒಂದು ಕೇಂದ್ರ ಸರಕಾರದ ಪ್ರಯತ್ನ. ಸಾಂಕ್ರಾಮಿಕವನ್ನು ಎದುರಿಸುವ ಎಲ್ಲ ನಿಯಮ ಸಂಹಿತೆಗಳನ್ನು ಮತ್ತು ಮಾರ್ಗದರ್ಶನಗಳನ್ನು ಕೇಂದ್ರಸ ಅಧಿಕಾರಿಗಳ ಮೂಲಕವೇ ರೂಪೀಕರಿಸಲಾಗುತ್ತಿದೆ. ಆದ್ದರಿಂದ ಕೇಂದ್ರ ಸರಕಾರ ಕೊವಿಡ್ ಬಾಧಿತರಿಗೆ ಪರಿಹಾರವನ್ನು ಒದಗಿಸುವ ಪ್ರಮುಖ ಹೊಣೆಯನ್ನು ಕೇಂದ್ರ ಸರಕಾರವೆ ಹೊರಬೇಕಾಗುತ್ತದೆ. ಸುರಿಂ ಕೋರ್ಟ್ ಇನ್ನೂ ಈ ಪ್ರಕರಣದಲ್ಲಿ ಅಂತಿಮ ಆದೇಶಗಳನ್ನು ನೀಡಿಲ್ಲ. ಪ್ರಾಥಮಿಕ ಹೊಣೆ ಕೇಂದ್ರ ಸರಕಾರದ್ದು ಎಂಬುದನ್ನು ಖಾತ್ರಿಪಡಿಸಬೇಕು ಮತ್ತು ಪರಿಹಾರ ಮೊತ್ತವನ್ನು ಗಮನಾರ್ಹವಾಗಿ ಹೆಚ್ಚಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಂಪಾದಕೀಯ

# ಮನುವಾದಿಗಳ ಅಧಿಕಾರ ಇರುವ ವರೆಗೂ ಅಸ್ಪೃಶ್ಯತೆ ಆಚರಣೆ ನಿಲ್ಲದು

ಅಮಾನವೀಯವಾದ ಅಸ್ಪೃಶ್ಯತಾ ಆಚರಣೆಯ ಪ್ರಕರಣವೊಂದು ಕುಷ್ಟಗಿ ತಾಲೂಕಿನ ಮಿಯಾಪುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚನ್ನದಾಸರ ಸಮುದಾಯಕ್ಕೆ ಸೇರಿದ ಎರಡು ವರ್ಷದ ಪುಟ್ಟ ಮಗುವೊಂದು ಆಟವಾಡುತ್ತಾ ಆಂಜನೇಯ ದೇವಾಲಯ ಪ್ರವೇಶಿಸಿದೆ. ಇದನ್ನು ಗಮನಿಸಿದ ಮಗುವಿನ ತಂದೆ ಒಳಗೆ ಹೋಗಿ ಮಗುವನ್ನು ಎತ್ತಿಕೊಂಡು ಬಂದಿದ್ದರು. ಇದನ್ನು ನೋಡಿದ ದೇವಸ್ಥಾನದ ಅರ್ಚಕ ಮತ್ತು ಗ್ರಾಮದ ಕೆಲ ಸವರ್ಣೀಯರು ಆಕ್ಷೇಪ ಎತ್ತಿದರು. ನಂತರ ಸಭೆ ಸೇರಿದ ಮುಖಂಡರು ಮಗುವಿನ ಪಾಲಕರಿಗೆ 25 ಸಾವಿರ ರೂ. ದಂಡ ವಿಧಿಸಿದರು. ದೇವಸ್ಥಾನ ಅಪವಿತ್ರಗೊಂಡಿದೆ ಎಂದೂ, ಶುದ್ದೀಕರಣಕ್ಕೆ ಹೋಮ ಹವನ ಮಾಡಿಸಬೇಕಾಗುವುದೆಂದೂ, ಅದಕ್ಕಾಗಿ ಬೇಕಾಗುವ ಹಣವನ್ನು ಸಹ ಮಗುವಿನ ಪಾಲಕರು ನೀಡಬೇಕೆಂದು ದೇವಸ್ಥಾನದ ಅರ್ಚಕರು ಸೂಚಿಸಿದರು.

ಮುಗ್ಧ ಮಗುವಿನ ಪಾಲಕರಿಗೆ ದಂಡ ವಿಧಿಸಿದ ಘಟನೆ ನಡೆದದ್ದು ಸೆ. 4 ರಂದು ಚನ್ನದಾಸರ ಸಮುದಾಯದವರು ದೂರು ನೀಡಿರಲಿಲ್ಲ. ತಮ್ಮದು ಕಡಿಮೆ ಜನಸಂಖ್ಯೆ ಹೊಂದಿರುವ ಸಮಾಜ. ದೂರು ನೀಡಿದರೆ ತಮಗೆ ತೊಂದರೆಯಾದಿತು ಎಂಬ ಭಯದಿಂದ ಅವರು ದೂರು ನೀಡಿರಲಿಲ್ಲ. ಆದರೆ ವಿಷಯ ತಿಳಿದ ವಿವಿಧ ಪ್ರಗತಿಪರ ಸಂಘಟನೆಗಳು ಈ ಅಸ್ಪೃಶ್ಯತಾ ಆಚರಣೆಯನ್ನು ಖಂಡಿಸಿ ಪ್ರತಿಭಟಿಸತೊಡಗಿದ ನಂತರ ಪೊಲೀಸ್, ಕಂದಾಯ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಅತ್ತ ಹೆಜ್ಜೆ ಹಾಕಿದರು. ಕಾಟಾಚಾರದ ಶಾಂತಿ ಸಭೆಯನ್ನು ನಡೆಸಿದರು. ಈ ರೀತಿಯ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು ಗ್ರಾಮದ ಮುಖಂಡರಿಗೆ ಎಚ್ಚರಿಕೆ ನೀಡಿ ದೂರು ದಾಖಲಿಸಿಕೊಳ್ಳದೆ ಹಿಂತಿರುಗಿದರು. ಕೊಪ್ಪಳ ಜಿಲ್ಲಾಧಿಕಾರಿ ಸ್ಥಳಕ್ಕೆ ಬೇಟಿ ನೀಡಿದ ನಂತರ ಪ್ರಕರಣಕ್ಕೆ ಬಿಸಿ ತಟ್ಟುವಂತಾಯಿತು. ಯಾರೂ ದೂರು ನೀಡದಿದ್ದರೂ ಸರ್ಕಾರದ ವತಿಯಿಂದಲೇ ಎಫ್‌ಐಆರ್ ದಾಖಲಿಸಲಾಗುತ್ತದೆ ಎಂದು ಅವರು ಘೋಷಣೆ ಮಾಡಿದರು. ನಂತರ ಸಮಾಜ ಕಲ್ಯಾಣ ಅಧಿಕಾರಿ ನೀಡಿದ ದೂರಿನ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇವರನ್ನು ಬಂಧಿಸಲಾಗಿದೆ.

ಮಿಯಾಪುರದ ಈ ಘಟನೆ ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆ ಎಷ್ಟು ಆಳವಾಗಿ ಬೇರುಬಿಟ್ಟಿದೆ ಎಂಬುದನ್ನು ನಮ್ಮ ಮನಸ್ಸುಗಳ ಎದುರು ನಿಲ್ಲಿಸುತ್ತದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಮನುವಾದಿಗಳು ಅಧಿಕಾರಕ್ಕೆ ಬಂದ ದಿನದಿಂದ ದೇಶದಲ್ಲಿ ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಪುಟ್ಟ ಮಕ್ಕಳನ್ನು ಸಹ ತಾರತಮ್ಯಕ್ಕೆ ಒಳಪಡಿಸಲಾಗುತ್ತಿದೆ.

ಈ ಪ್ರಕರಣದಲ್ಲಿ ಪೊಲೀಸರ ಪಾತ್ರ ಬಹುತೇಕವಾಗಿ ಇತರ ಅಸ್ಪೃಶ್ಯತಾ ಪ್ರಕರಣದಲ್ಲಿ ನಾವು ಕಾಣುವಂತೆಯೇ ಇತ್ತು. ಪೊಲೀಸರು ದಿನಗಟ್ಟಲೆ ಆ ಕಡೆ ತಲೆಹಾಕಲೇ ಇಲ್ಲ. ಪ್ರಕರಣವನ್ನು ದಾಖಲು ಮಾಡಲು ಅವರು ವಿಳಂಬ ಮಾಡಿದ್ದು ಅಪರಾಧಿಗಳಿಗೆ ಬೆಂಬಲ ವ್ಯಕ್ತಪಡಿಸಿದಂತಾಗಿದೆ. ಇಂತಹ ಪ್ರಕರಣಗಳಲ್ಲಿ ಪೊಲೀಸರ ಧೋರಣೆ ಇದೇ ರೀತಿ ಆಕ್ಷೇಪಾರ್ಹವಾಗಿರುತ್ತದೆ. ದೂರುಗಳನ್ನು ದಾಖಲು ಮಾಡಿಕೊಳ್ಳುವುದಿಲ್ಲ. ಎಫ್‌ಐಆರ್ ದಾಖಲು ಮಾಡಿದರೂ ಅಪರಾಧಿಗಳಿಗೆ ಜಾಮೀನು ಪಡೆದು ಪಾರಾಗಲು ಅವಕಾಶ ಕಲ್ಪಿಸಲಾಗುತ್ತದೆ. ಶಾಂತಿ ಸಭೆ, ರಾಜಿ ಪಂಚಾಯ್ತಿ ಎಂಬ ಹೆಸರಿನಲ್ಲಿ ಪ್ರಕರಣವನ್ನು ಮುಚ್ಚಿಹಾಕಲಾಗುತ್ತದೆ. ಹೀಗಾಗಿ ಅಪರಾಧಿಗಳಿಗೆ ಶಿಕ್ಷೆಯಾಗುವುದೇ ಅಪರೂಪ. ಸದರಿ ಪ್ರಕರಣದಲ್ಲಿ ತಮ್ಮ ಕರ್ತವ್ಯ ಪಾಲನೆಯಲ್ಲಿ ವಿಫಲರಾದ ಪೊಲೀಸರ ವಿರುದ್ಧ ಕಾನೂನು ಕ್ರಮ ಜರಗಿಸುವುದು ಅಗತ್ಯವಿದೆ.

ಅಸ್ಪೃಶ್ಯತೆ ಆಚರಿಸಿದ ತಪ್ಪಿಗೆ ಕೇವಲ 5 ಮಂದಿಯನ್ನು ಬಂಧಿಸಲಾಗಿದೆ ಎನ್ನಲಾಗುತ್ತದೆ. ಜಾತಿ ನಿಂದನೆಯಲ್ಲಿ ಪಾಲ್ಗೊಂಡ ಎಲ್ಲರ ವಿರುದ್ಧವೂ ಕ್ರಮ ಜರುಗಿಸಬೇಕು. ದೇವಸ್ಥಾನದ ಅರ್ಚಕನನ್ನು ಕೂಡಲೇ ವೃತ್ತಿಯಿಂದ ವಜಾ ಮಾಡಿ ಬೇರೆಯವರನ್ನು ನೇಮಿಸಬೇಕು. ಮಗುವಿನ ಪಾಲಕರಿಗೆ ಸೂಕ್ತ ರಕ್ಷಣೆಯನ್ನೂ, ಸಮಾಜ ಕಲ್ಯಾಣ ಇಲಾಖೆಯಿಂದ ಗರಿಷ್ಠ ಪರಿಹಾರವನ್ನು ನೀಡಬೇಕು. ಆರೋಪಿಗಳಿಗೆ ನ್ಯಾಯಾಲಯದಿಂದ ಜಾಮೀನು ದೊರೆಯದಂತೆ ಪರ್ಯಾಯ ಎಫ್‌ಐಆರ್ ದಾಖಲಿಸಬೇಕು. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆ ನೀಡಿದಂತಾಗಲು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಸರ್ಕಾರ ನೋಡಿಕೊಳ್ಳಬೇಕು.

# ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಕಾಯ್ದೆಗಳನ್ನು ವಾಪಾಸು ಪಡೆಯಲು ಎಡಪಕ್ಷಗಳ ಒತ್ತಾಯ

ಕರ್ನಾಟಕ ಸರಕಾರ ರಾಜ್ಯದಲ್ಲಿ ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಒತ್ತಡಕ್ಕೆ ಮಣಿದು ಲೂಟಿಯ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಜಾರಿಗೊಳಿಸಿತ್ತಿರುವುದನ್ನು ಎಡಪಕ್ಷಗಳು ಬಲವಾಗಿ ವಿರೋದಿಸಿವೆ.

ಕರ್ನಾಟಕ ಸರಕಾರ ಕಳೆದ ವರ್ಷ ರಾಜ್ಯದ ಜನತೆ ಕೋವಿಡ್ ಸಂಕಷ್ಠದಲ್ಲಿರುವಾಗ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲಿ ನಿಯಮಾವಳಿಯಂತೆ ವಿಶೇಷ ಚರ್ಚೆಗೆ ಒಳಪಡಿಸದೇ ಅದೇ ರೀತಿ, ಅಂತಹ ಕಾಯ್ದೆಗಳಿಂದ ಬಾಧಿತರಾಗುವ ಜನ ಸಮುದಾಯಗಳು ಮತ್ತು ತಜ್ಞರುಗಳು, ಸಂಘ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳ ಜೊತೆ ವ್ಯಾಪಕ ಚರ್ಚೆಗೊಳಪಡಿಸದೇ ಸಂಚಿನಂತೆ ತರಾತುರಿಯಲ್ಲಿ ಮತ್ತು ಅಧಿವೇಶನಗಳ ಕೊನೆಯ ಹಂತದಲ್ಲಿ ಮೂರು ರೈತವಿರೋಧಿ ಕೃಷಿ ಕಾಯ್ದೆಗಳನ್ನು ಅಂಗೀಕರಿಸಿದೆ.

"ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2020", ಪರಂಪರೆಯಿಂದ ರೈತರ ವಶದಲ್ಲಿದ್ದು ಉದ್ಯೋಗದ ಭದ್ರತೆಯನ್ನೊದಗಿಸುತ್ತಿದ್ದ ಕೃಷಿ ಭೂಮಿಗಳನ್ನು ಬಲವಂತವಾಗಿ ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ, ಕೃಷಿಕರಲ್ಲದ ಶ್ರೀಮಂತರ ಕೈಗೆ ವರ್ಗಾಯಿಸುತ್ತವೆ ಮಾತ್ರವಲ್ಲಾ, ದೊಡ್ಡ ಬಂಡವಾಳದಾರ ಕೃಷಿ ಉದ್ಯಮಕ್ಕೆ ದಾರಿ ತೆರೆಯಲಿದೆ. ಉಪ ಕಸುಬುಗಳನ್ನು ಕಿತ್ತು ಕೊಳ್ಳಲಿದೆ. ಇದು ಗ್ರಾಮೀಣ ಜನತೆಯನ್ನು ತೀವ್ರ ಬಾಧೆಗೀಡು ಮಾಡಿ, ಅವರ ಹಸಿವಿನ ಸಾವುಗಳನ್ನು ಮತ್ತು ಆತ್ಮಹತ್ಯೆಗಳನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಿದೆ.

ಅದೇ ರೀತಿ, "ಎಪಿಎಂಸಿ ತಿದ್ದುಪಡಿ ಕಾಯ್ದೆ–2020" ಕೃಷಿ ಉತ್ಪನ್ನಗಳ ಬೆಲೆಗಳನ್ನು ಏರಿಳಿತ ಮಾಡಿ ರೈತರನ್ನು ಲೂಟಿಗೊಳಪಡಿಸುವ ದೊಡ್ಡ ವರ್ತಕರು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ನೆರವಾಗಲಿದೆ, ಇದು ಕೆಲವೇ ವರ್ಷಗಳಲ್ಲಿ ರೈತರನ್ನು ಮತ್ತು ಕೃಷಿ ಆಧರಿಸಿದ ಎಲ್ಲ ಗ್ರಾಮೀಣ ಜನತೆಯ ಬದುಕನ್ನು ಕಿತ್ತುಕೊಳ್ಳಲಿದೆ. ರಾಜ್ಯದ ಸಾರ್ವಜನಿಕ ಒಡೆತನದ ನೂರಾರು ಎಪಿಎಂಸಿಗಳ ಹಲವು ದಶ ಸಾವಿರ ಕೋಟಿ ಮೊತ್ತದ ಬೆಲೆಬಾಳುವ ಆಸ್ತಿಗಳನ್ನು ಕೊಳ್ಳೆ ಹೊಡೆಯಲು ನೆರವಾಗಲಿದೆ.

"ಜಾನುವಾರು ಹತ್ಯೆ ನಿಷೇದ ತಿದ್ದುಪಡಿ ಕಾಯ್ದೆ–2020" ರಾಜ್ಯದ ಹೈನುಗಾರಿಕೆಯನ್ನು ಹೊರೆಯಾಗಿಸಿ ಅವರನ್ನು ಹೊರದೂಡಲಿದೆ. ಸಾರ್ವಜನಿಕ ರಂಗದ ಹೈನು ಉದ್ಯಮವಾದ ಕರ್ನಾಟಕ ಹಾಲು ಒಕ್ಕೂಟ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನಾಶ ಮಾಡಿ, ಕಾರ್ಪೊರೇಟ್ ಲೂಟಿಗೆ ನೆರವಾಗಲಿದೆ. ದಲಿತರು, ಅಲ್ಪ ಸಂಖ್ಯಾತರು ಮತ್ತಿತರರ ಆಹಾರದ ಹಕ್ಕನ್ನು ಕಸಿದುಕೊಂಡು ಈ ಬಡವರಿಗೆ ಪೌಷ್ಠಿಕ ಆಹಾರ ದೊರೆಯದಂತೆ ಆಕ್ರಮಣ ಮಾಡಲಿದೆ.

ಅದೇ ರೀತಿ, "ನೂತನ ರಾಷ್ಟೀಯ ಶಿಕ್ಷಣ ನೀತಿ"ಯು ಕನ್ನಡ ಹಾಗೂ ಕನ್ನಡಿಗರ ಇತರ ಭಾಷೆಗಳ ಮತ್ತು ಬದುಕಿನ ಮೇಲಿನ ಮತ್ತೊಂದು ತೀವ್ರ ಧಾಳಿಯಾಗಿದೆ. ದಲಿತರು, ಮಹಿಳೆಯರು ಮತ್ತು ಬಡವರಿಗೆ ಶಿಕ್ಷಣವನ್ನು ಮತ್ತು ಉದ್ಯೋಗಾವಕಾಶಗಳನ್ನು ನಾಶ ಮಾಡಲಿದೆ. ಮದ್ಯಮ ವರ್ಗವನ್ನು ಈ ನೀತಿಯು ತೀವ್ರವಾದ ಲೂಟಿಗೆ ತೆರೆಯಲಿದೆ.

ಕೇಂದ್ರ ಸರಕಾರವೂ ಇಂತಹದ್ದೇ ಕಾರ್ಪೊರೇಟ್ ಲೂಟಿಗೆ ನೆರವಾಗುವ ದೇಶ ಹಾಗೂ ರೈತ ವಿರೋಧಿ ಕೃಷಿ ಮತ್ತು ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳು, ಕಾಯ್ದೆಗಳು ಅಲ್ಲದೇ ದೇಶದ ಗ್ರಾಹಕರನ್ನು ಕಾಳ ಸಂತೆಯ ಮೂಲಕ ವ್ಯಾಪಕ ಲೂಟಿಗೊಳಪಡಿಸುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಗಳ ಜಾರಿಗೆ ಕ್ರಮವಹಿಸಿದೆ. ಆದರೇ ಸುಪ್ರಿಂ ಕೋರ್ಟ ಮಧ್ಯ ಪ್ರವೇಶದಿಂದ ಜಾರಿಗೊಳಿಸಲಾಗುತ್ತಿಲ್ಲ. ವಿದ್ಯುತ್ ರಂಗ ಮತ್ತಿತರೆ ಸಾರ್ವಜನಿಕ ಉದ್ದಿಮೆಗಳ ಲೂಟಿಕೋರ ಖಾಸಗೀಕರಣವನ್ನು ಜಾರಿಗೊಳಿಸುತ್ತಿದೆ. ಅದೇ ರೀತಿ ತೀವ್ರ ಸಂಕಷ್ಠದಲ್ಲಿರುವ ಜನತೆಯ ಮೇಲೆ ಹೇರುತ್ತಿರುವ ಬೆಲೆ ಏರಿಕೆಯ ಹೊರೆಯೂ ಸೇರಿದಂತೆ ಈ ಎಲ್ಲವುಗಳನ್ನು ತಡೆಯಲು ಮುಂದಾಗದೇ ತಮ್ಮ ಸರಕಾರ ಬೆಂಬಲಿಸುತ್ತಿರುವುದು ಮತ್ತು ಅವುಗಳಿಗೆ ಪೂರಕವಾಗಿ ಈ ಕಾಯ್ದೆಗಳನ್ನು ಜಾರಿಗೊಳಿಸುತ್ತಿರುವುದು ತೀವ್ರ ಖಂಡನೀಯ.

ರಾಜ್ಯದ ಜನತೆ ಕೋವಿಡ್ ಸಂಕಷ್ಠದ ನಡುವೆಯು, ಈ ಕುರಿತಂತೆ ವ್ಯಾಪಕವಾದ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರೂ ತಮ್ಮ ಸರಕಾರ ಕಣ್ಣಿದ್ದು ಕುರುಡನಂತೆ ಮತ್ತು ಕಿವಿಯಿದ್ದು ಕಿವುಡನಂತೆ ಲೂಟಿಕೋರ ಜಾಣತನವನ್ನು ಮರೆಯುತ್ತಿರುವುದು ಸರಕಾರದ ಘನತೆಯನ್ನು ಕುಗ್ಗಿಸಿದೆ.

ಒಟ್ಟಾರೆ ಈ ಎಲ್ಲಾ ಲೂಟಿಕೋರರ ಪರವಾದ ಈ ಕಾಯ್ದೆಗಳು, ನೂತನ ಶಿಕ್ಷಣ ನೀತಿಯ ಜಾರಿ, ಇವು, ರಾಜ್ಯದ ಎಲ್ಲ ದುಡಿಯುವ ಜನತೆಯನ್ನು ದುರ್ಬಲ ಸಮುದಾಯಗಳನ್ನು ಹೊಸಕಿಹಾಕಲಿವೆ.

ಈ ಕಾಯ್ದೆಗಳು ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ, ದೇಶದ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ ಹಾಗೂ ಸಾರ್ವ ಭೌಮತೆ ಮತ್ತು ಒಕ್ಕೂಟವಾದಿ ಸ್ವರೂಪದ ಮೇಲೆ ತೀವ್ರ ದಾಳಿ ನಡೆಸಲಿವೆ. ಇವು ಭಾರತದ ಸಂವಿಧಾನದ ವಿರೋಧಿ ನಡೆಗಳಾಗಿವೆ.

ಆದ್ದರಿಂದ, ಈ ಕೂಡಲೆ ರಾಜ್ಯ ಸರಕಾರ ಈ ವಿಧಾನ ಸಭಾ ಅಧಿವೇಶನದಲ್ಲಿಯೇ ಈ ಎಲ್ಲ ಸಂವಿಧಾನ ಹಾಗೂ ಜನ ವಿರೋಧಿಯಾದ ಕಾಯ್ದೆಗಳನ್ನು ವಾಪಾಸು ಪಡೆಯಲು ಮತ್ತು ಈ ಕೂಡಲೆ ಅವುಗಳ ಜಾರಿಯನ್ನು ತಡೆಯಲು ಎಡಪಕ್ಷಗಳು ಬಲವಾಗಿ ಒತ್ತಾಯಿಸಿವೆ.

## ಮುನಿಸಿಪಾಲ್ ಕಾರ್ಮಿಕರ ಖಾಯಮಾತಿಗಾಗಿ ವಿಧಾನಸೌಧ ಎದುರು ಅನಿರ್ದಿಷ್ಟ ಹೋರಾಟ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ, ನಗರ ಪಾಲಿಕೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ನೇರ ಪಾವತಿ, ಸಮಾನ ಕೆಲಸಕ್ಕೆ ಸಮಾನ ವೇತನದ ಅಡಿಯಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರು, ಲೋಡರ್‌ಗಳು, ವಾಟರ್ ಮ್ಯಾನ್‌ಗಳು, ಕಸದ ಆಟೋ ಚಾಲಕರು, ಕಂಪ್ಯೂಟರ್ ಆಪರೇಟರ್‌ಗಳು, ಯು.ಜಿ.ಡಿ ಕಾರ್ಮಿಕರು, ಕಛೇರಿ ಸಹಾಯಕರು ಒಳಗೊಂಡ ಮುನಿಸಿಪಾಲ್ ಕಾರ್ಮಿಕರು ಉದ್ಯೋಗ ಭದ್ರತೆಯಿಲ್ಲದೆ, ದುಡಿಯುವಂತಹ ಪರಿಸ್ಥಿತಿ ಇಂದಿಗೂ ಇದೆ ಎಂದು ಹರೀಶ್ ನಾಯಕ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘದ ರಾಜ್ಯ ಅಧ್ಯಕ್ಷರಾದ ಹರೀಶ್ ನಾಯಕ್ ಮುನಿಪಾಲ್ ಕಾರ್ಮಿಕರ ಸೇವೆ ಎಲ್ಲಾ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ಅದರಲ್ಲೂ ನಮ್ಮ ಸೇವೆಯು ಚಿಕ್ಕನ್ ಗುನ್ಯಾ, ಕೊರೊನಾದಂತ ಸಂಕಷ್ಟದ ಸಂದರ್ಭದಲ್ಲಿ ಸಹ ನಾಗರಿಕರಿಗೆ ಮೂಲಭೂತ ಅಗತ್ಯವಾದ ಸೇವೆಗಳನ್ನು ನೀಡಿದ್ದಾರೆ, ಅಲ್ಲದೆ ಸೇವೆ ನೀಡುತ್ತಾ ಬರುತ್ತಿದ್ದಾರೆ. ತಮ್ಮ ಜೀವನ ಜೀವದ ಹಂಗು ತೊರೆದು ಸೇವೆ ಸಲ್ಲಿಸಿದ್ದಾರೆ. ಅದರಲ್ಲೂ ಲಾಕ್‌ಡೌನ್, ಸೀಲ್‌ಡೌನ್ ಗಳ ಸಂದರ್ಭದಲ್ಲಿಯೂ ನಮ್ಮ ಕೆಲಸ ನಿಂತಿಲ್ಲ. ಇಂತಹ ಸಂದರ್ಭದಲ್ಲಿ ಸುಮಾರು 60–70ಕ್ಕೂ ಹೆಚ್ಚು ಮಂದಿ ತಮ್ಮ ಜೀವ ಕಳೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾಗರಿಕ ಸಮಾಜಕ್ಕೆ ಈ ಸೇವೆಗಳು ಅಗತ್ಯವೆಂಬುದು ಸಾಬೀತಾಗಿದೆ ಎಂದರು.

ಮೇಲಿನ ಎಲ್ಲಾ ಕಾರ್ಮಿಕರ ಸೇವೆಗಳನ್ನು ಖಾಯಂಗೊಳಿಸುವಂತೆ ರಾಜ್ಯದ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು, ಪೌರಾಡಳಿತ ಸಚಿವ ಎಂ.ಟಿ.ಬಿ ನಾಗರಾಜು, ಇಲಾಖೆಯ ಪ್ರಧಾನ ಕಾಯದರ್ಶಿಗಳಿಗೆ ಮನವಿ ಪತ್ರಗಳನ್ನು ಅರ್ಪಿಸಲಾಗಿದೆ. ಆದರೂ ಸಹ ಇದುವರೆಗೂ ಯಾವುದೇ ಕ್ರಮವನ್ನು ವಹಿಸಿಲ್ಲ ಎಂದು ಹೇಳಿದರು.

ಸಂಘಟನೆಯು ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ ಹತ್ತಾರು ವರುಷಗಳಿಂದ ಈ ಸೇವಾಯಲ್ಲಿರುವ ಕಾರ್ಮಿಕರಿಗೆ ಸೇವಾ ಭದ್ರತೆ, ಸಾಮಾಜಿಕ ಭದ್ರತೆ ಇಲ್ಲದಾಗಿದೆ. ಈ ಕಾರ್ಮಿಕ ಸೇವಗಳನ್ನು ಖಾಯಂಗೊಳಿಸುವುದು ಅಲ್ಲದೆ ಇತರೆ ಹಕ್ಕೊತ್ತಾಯಗಳನ್ನು ಪರಿಗಣಿಸಿ ಸರ್ಕಾರವು ಶೀಘ್ರದಲ್ಲಿ ಕ್ರಮವಹಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು ಖಾಯಂ ಕಾರ್ಮಿಕರು ನಿರ್ವಹಿಸುವ ಎಲ್ಲಾ ಕೆಲಸಗಳನ್ನು ಗುತ್ತಿಗೆ, ಹೊರಗುತ್ತಿಗೆ, ನೇರ ಪಾವತಿ, ಸಮಾನ ವೇತನದಡಿಯಲ್ಲಿ ಕೆಲಸ ನಿರ್ವಹಿಸುವ ಮುನಿಸಿಪಾಲ್ ನೌಕರರು ದಿನನಿತ್ಯ ಮಾಡುತ್ತಿದ್ದಾರೆ. ಒಂದೇ ಸ್ವರೂಪದ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರ ಸಂಬಳ– ಸೇವಾ ಸೌಲಭ್ಯಗಳಲ್ಲಿ ತಾರತಮ್ಯ ಮಾಡುವಂತಿಲ್ಲ . ಅದರೆ ಸರ್ಕಾರವು ನಿರಂತರವಾಗಿ ಖಾಯಂಮೇತರ ನೌಕರರಿಗೆ ತಾರತಮ್ಯ ಮಾಡುತ್ತಲೇ ಬಂದಿದೆ. ಸಂಬಳವು ಸೇರಿದಂತೆ ಇತರೆ ಎಲ್ಲಾ ಸೇವಾ ಸೌಲಭ್ಯಗಳನ್ನು ಸಮಾನವಾಗಿ ನೀಡುವಂತೆ ಸಂಘವು ಒತ್ತಾಯಿಸುತ್ತದೆ ಎಂದರು.

ಪೌರ ಕಾರ್ಮಿಕರ ದಿನಾಚರಣೆಯ ಭತ್ಯೆಯನ್ನು ನೀಡುವಲ್ಲಿಯೂ ತಾರತಮ್ಯವನ್ನು ವೆಸಗುವ ಪೌರಾಡಳಿತ ನಿರ್ದೇಶನಾಲಯವು ಈ ಭತ್ಯೆಯನ್ನು ಕೇವಲ ಖಾಯಂ ಪೌರಕಾರ್ಮಿಕರಿಗೆ ಮಾತ್ರ ನೀಡುವಂತೆ ಸೂಚಿಸಿದೆ. ಈ ಸೌಲಭ್ಯವು ಇದೆ ಕೆಲಸ ನಿರ್ವಹಿಸುವ ಎಲ್ಲಾ ಗುತ್ತಿಗೆ, ಹೊರಗುತ್ತಿಗೆ, ನೇರ ಪಾವತಿ, ಸಮಾನ ಕೆಲಸಗಳ ಅಡಿಯಲ್ಲಿ ದುಡಿಯುತಿರುವ ಮುನಿಸಿಪಾಲ್ ಕಾರ್ಮಿಕರಿಗೆ ವಿಸ್ತರಿಸಲು ಸಂಘವು ಅಗ್ರಹಿಸಿದೆ.

ಮುನಿಸಿಪಾಲ್ ಕಾರ್ಮಿಕರ ಹಕ್ಕೊತ್ತಾಯಗಳ ಪರಿಹರಿಸಬೇಕು ಇಲ್ಲವಾದಲ್ಲಿ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ(ರಿ.) ಸಿಐಟಿಯು ಇತರೆ ಸಮಾನ ಮನಸ್ಕ ಸಂಘಟನೆಗಳ ಜೊತೆ ಸೇರಿ ವಿಧಾನಸೌಧ ಎದುರು ಅನಿಧಿಷ್ಟ ಹೋರಾಟಕ್ಕೆ ಮುಂದಾಗುವುದಾಗಿ ಎಚ್ಚರಿಕೆ ನೀಡಿವೆ.

## ಏತ ನೀರಾವರಿ ಕಾಮಗಾರಿ ಅವ್ಯವಸ್ಥೆ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ




ಸರಕಾರದ ಮಹತ್ವಕಾಂಕ್ಷೆ ಯೋಜನೆಯ ಕಾಮಗಾರಿಯಿಂದ ಸ್ಥಳೀಯ ನಿವಾಸಿಗಳಿಗೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಶಾಸಕರು ಮಧ್ಯಪ್ರವೇಶಿಸುವಂತೆ ಆಗ್ರಹಿಸಿ ಮಂಗಳವಾರ ಸಂಜೆ ಗುಲ್ವಾಡಿ ಏತ ನೀರಾವರಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)– ಸಿಪಿಐ(ಎಂ) ಪಕ್ಷ ಬೈಂದೂರು ವಲಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಕಾಮಗಾರಿಯಿಂದ ಹಾನಿಗೊಳಗಾದ ಕುಡಿಯುವ ನೀರಿನ ಬಾವಿ ದುರಸ್ತಿಗೊಂಡಿಲ್ಲ. ಚರಂಡಿಯೊಳಗೆ ಅಳವಡಿಸಿದ ಬೃಹದಾಕಾರದ ವಿದ್ಯುತ್ ಕಂಬಗಳು ಗುಲ್ವಾಡಿಯ ಗ್ರಾಮ ಭವಿಷ್ಯದಲ್ಲಿ ಅಭಿವೃದ್ಧಿಗೆ ತೊಡಕಾಗಲಿದೆ. ಈ ಬಗ್ಗೆ ಶಾಸಕರು ಲೋಕೋಪಯೋಗಿ ಇಲಾಖೆ ಜತೆ ಮಾತುಕತೆ ನಡೆಸಿ ರಸ್ತೆ ಅಗಲೀಕರಣಕ್ಕೆ ತೊಡಕಾಗದಂತೆ ಕ್ರಮವಹಿಸಬೇಕು. ಸೌಪರ್ಣಿಕ ನದಿ ತೀರದಿಂದ ಖಾಸಗಿ ಜಾಗದವರನ್ನು ಮನವೊಲಿಸಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಬೈಂದೂರು ಶಾಸಕರು ಕಾಳಜಿ ವಹಿಸಿದರೆ ಗುಲ್ವಾಡಿ ಅಭಿವೃದ್ಧಿಗೆ ಸಹಾಯಕವಾಗಲಿದೆ ಎಂದು ವಲಯ ಸಮಿತಿ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಹೇಳಿದರು.

ಜಿಲ್ಲಾ ಸಮಿತಿ ಸದಸ್ಯ ಎಚ್.ನರಸಿಂಹ ಮಾತನಾಡಿ ಏತ ನೀರಾವರಿ ಯೋಜನೆಯಿಂದ ಗುಲ್ವಾಡಿಯ ಸುತ್ತಮುತ್ತಲ ಗ್ರಾಮಗಳಿಗೆ ಬಹಳಷ್ಟು ಪ್ರಯೋಜನವಿದೆ. ಆದರೆ ಸ್ಥಳೀಯ ಗ್ರಾಮಪಂಚಾಯತ್ ಆಡಳಿತ ಕಡೆಗಣಿಸಿ ಕಾಮಗಾರಿ ನಡೆಸಲಾಗುತ್ತಿದೆ. ಸ್ಥಳೀಯಾಡಳಿತ ಹಾಗು ಜನರಿಗೆ ಯಾವುದೇ ಮಾಹಿತಿ ನೀಡದೇ ಕಾಮಗಾರಿ ನಡೆಸಲಾಗುತ್ತಿದೆ ಇದರಿಂದ ಸ್ಥಳೀಯ ಜನರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಸಮಸ್ಯೆ ಬಗೆಹರಿಸಲು ಸಂಬಂದಪಟ್ಟವರು ಮುಂದಾಗಬೇಕು ಎಂದರು.

ಸ್ಥಳೀಯ ಮುಖಂಡ ಜಿ.ಡಿ. ಪಂಜುಪೂಜಾರಿ ಪ್ರಾಸ್ತಾವಿಕ ಮಾತನಾಡಿ 'ಕಾಮಗಾರಿಯಿಂದ ಕೃಷಿ ಚಟುವಟಿಕೆಗಳಿಗೆ ಆಗುತ್ತಿರುವ ಹಾನಿ ತಪ್ಪಿಸಬೇಕು. ಹಾನಿಯಾದರೆ ಪರಿಹಾರ ನೀಡಬೇಕು. ಬಡಕಾರ್ಮಿಕರ ಮಕ್ಕಳು ಓದುತ್ತಿರುವ ಗುಲ್ವಾಡಿ ಹಾಗು ಮಾವಿನಕಟ್ಟೆ ಸರಕಾರಿ ಶಾಲೆಯ ಅಭಿವೃದ್ಧಿಗೆ ಸಹಕರಿಸಬೇಕೆಂದರು. ಸ್ಥಳೀಯರಿಗೆ ಮಾಹಿತಿ ನೀಡದೇ ಕಾಮಗಾರಿ ನಡೆಸುತ್ತಿದ್ದು ಶಾಸಕರು ಜನರ ಪರವಾಗಿ ಮಾತಾಡುತ್ತಿಲ್ಲ. ಸಮಸ್ಯೆ ಮುಂದುವರಿದರೆ ಊರ ಜನರೊಂದಿಗೆ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದರು.

ಪ್ರತಿಭಟನೆಯ ನಂತರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಸನ್ನ ಅವರಿಗೆ ಸಿಪಿಐ(ಎಂ) ಮುಖಂಡರು ಮನವಿ ನೀಡಿದರು.

ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಸದಸ್ಯ ವೆಂಕಟೇಶ ಕೋಣಿ ಮಾತನಾಡಿದರು. ಜಿ.ಬಿ. ಮಹಮ್ಮದ್, ಜಮಾಲ್ ಗುಲ್ವಾಡಿ, ಗ್ರಾಮಪಂಚಾಯತ್ ಸದಸ್ಯ ಹಂಝು, ಅಣ್ಣಪ್ಪ ಅಬ್ಬಿಗುಡ್ಡಿ, ನಾಗರಾಜ, ನೀಲಾ ಮೊದಲಾದವರು ಭಾಗವಹಿಸಿದ್ದರು.


## ಮುಷ್ಕರ ಸಂದರ್ಭ ಕಾರ್ಮಿಕರ ಮೇಲೆ ಹೂಡಲಾದ ಪ್ರಕರಣಗಳು ಕೈಬಿಡುವಂತೆ ಸಾರಿಗೆ ನೌಕರರ ಆಗ್ರಹ

ಕಳೆದ ಆರು ತಿಂಗಳ ಹಿಂದೆ 2021ರ ಏಪ್ರಿಲ್‌ನಲ್ಲಿ ಸಾರಿಗೆ ನಿಗಮಗಳ ಕಾರ್ಮಿಕರು ನಡೆಸಿದ ಮುಷ್ಕರದ ನಂತರದಲ್ಲಿ ಸಾವಿರಾರು ಕಾರ್ಮಿಕರನ್ನು ವಜಾ, ಅಮಾನತು, ವರ್ಗಾವಣೆ ಹಾಗೂ ಸೆಕ್ಷನ್ 23ರ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳನ್ನು ಕೈಬಿಡಬೇಕೆಂದು ಸಾರಿಗೆ ನೌಕರರು ಧರಣಿ ಸತ್ಯಾಗ್ರಹ ನಡೆಸಿದರು.

ನಗರದ ಫ್ರೀಡಂ ಪಾರ್ಕಿನಲ್ಲಿ ಜಮಾಯಿಸಿದ ಸಾರಿಗೆ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಸಾವಿರಾರು ಕಾರ್ಮಿಕರಿಗೆ ನೋಟಿಸು ನೀಡಲಾಗಿದೆ ಅಲ್ಲದೆ ಅನಗತ್ಯವಾಗಿ ದಂಡ ವಸೂಲಿ ಮಾಡಲಾಗುತ್ತಿದೆ. ರಾಜ್ಯದ ಜನತೆಯ ದಿನನಿತ್ಯದ ಸಾರಿಗೆ ವ್ಯವಸ್ಥೆಯನ್ನು ಒದಗಿಸಲು ಸೇವೆ ಸಲ್ಲಿಸುತ್ತಿರುವ ಕಾರ್ಮಿಕರ ಬದುಕು ಮಾತ್ರ ಸಂತೋಷ ಮತ್ತು ನೆಮ್ಮದಿಯಿಂದ ಕೂಡಿಲ್ಲ ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಮಂಜುನಾಥ್ ಅವರು ಮಾತನಾಡಿ 'ಸಾರಿಗೆ ನೌಕರರು ಅತ್ಯಂತ ಕಠಿಣ ಸಂದರ್ಭದಲ್ಲಿಯೂ ರಾಜ್ಯದ ಕೋಟ್ಯಾಂತರ ಜನರಿಗೆ ಸಾರಿಗೆ ಸೇವೆಯನ್ನು ಒದಗಿಸುತ್ತಿದ್ದಾರೆ. ಇಡೀ ದೇಶದಲ್ಲಿಯೇ ಅತ್ಯುತ್ತಮ ಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ನಿಗಮಗಳೆಂದು ಪ್ರಶಂಸೆಗೆ ಪಾತ್ರವಾಗಿದೆ. ಇದು ಸಾಧ್ಯವಾಗಿರುವುದು, ಸಾರಿಗೆ ನಿಗಮಗಳ ಕಾರ್ಮಿಕರು, ಸಿಬ್ಬಂದಿಗಳು ಮತ್ತು ಅಧಿಕಾರಿಗಳ ಒಟ್ಟಾರೆ ಶ್ರಮದ ಫಲವಾಗಿ ನೂರಾರು ಪ್ರಶಸ್ತಿಗಳನ್ನು ಗಳಿಸಲು ಸಾಧ್ಯವಾಗಿದೆ. ಸಾರಿಗೆ ನಿಗಮಗಳು ಇಂತಹ ಉನ್ನತಿ ಗಳಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿರುವ ಕಾರ್ಮಿಕರ ವೇತನಗಳು, ಮತ್ತಿತರೆ ಸೇವಾ ಸೌಲಭ್ಯಗಳು ಇಲ್ಲದಿರುವುದು ದುರಂತ' ಎಂದು ಆರೋಪಿಸಿದರು.

ಸಂಘದ ರಾಜ್ಯ ಅಧ್ಯಕ್ಷರಾದ ಹೆಚ್.ಡಿ.ರೇವಪ್ಪ ಮಾತನಾಡಿ '1996ರಿಂದ ಇಲ್ಲಿಯವರೆಗೂ ಕಾರ್ಮಿಕ ಸಂಘಗಳೊಂದಿಗೆ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡಿಲ್ಲ, ಸರ್ಕಾರ ಮತ್ತು ಆಡಳಿತ ವರ್ಗದ ಏಕಪಕ್ಷೀಯ ನಿರ್ಧಾರಗಳಿಂದ ಕಾರ್ಮಿಕರ ವೇತನಗಳು, ಇಂಕ್ರಿಮೆಂಟ್ ಮತ್ತು ಇತರೆ ಆರ್ಥಿಕ ಸೌಲಭ್ಯಗಳು ಹಾಗೂ ಸೇವಾ ಸೌಲಭ್ಯಗಳು ಉತ್ತಮ ರೀತಿಯಲ್ಲಿ ಹೆಚ್ಚಳವಾಗಲಿಲ್ಲ. ಇದರಿಂದ ವೇತನ ತಾರತಮ್ಯ ವಿಪರೀತ ಹೆಚ್ಚಾಗಿದೆ. ಕಾರ್ಮಿಕರು ಮತ್ತು ಆಡಳಿತ ವರ್ಗದ ನಡುವೆ ಕೈಗಾರಿಕಾ ಬಾಂಧವ್ಯ ಉತ್ತಮವಾಗಿರಬೇಕೆಂಬ ದೃಷ್ಟಿಯಿಂದ ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸಿ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡುವಂತೆ ಸಿಐಟಿಯು ಫೆಡರೇಷನ್ ಒತ್ತಾಯ ಮಾಡುತ್ತಲೇ ಬಂದಿದೆ. ಆದರೆ, ಅಂದಂದಿನ ಸರ್ಕಾರಗಳು ಮತ್ತು ಆಡಳಿತ ವರ್ಗಗಳು ಕಾರ್ಮಿಕ ಸಂಘಟನೆಗಳನ್ನು ದುರ್ಬಲಗೊಳಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದೇವೆ. ಪ್ರಜಾಸತ್ತಾತ್ಮಕ ಆಡಳಿತವನ್ನು ಬಹುತೇಕ ಆಡಳಿತವನ್ನು ಬಹುತೇಕ ಇಲ್ಲವಾಗಿಸಲಾಗಿದೆ. ಇದರ ಜೊತೆಗೆ ಕಾರ್ಮಿಕರಿಗೆ ಕೆಲಸದ ಒತ್ತಡ ಹೆಚ್ಚಳ ಸೇರಿದಂತೆ, ಕಿರುಕುಳಗಳನ್ನು ವಿಪರೀತವಾಗಿ ಹರಿಯಬಿಡಲಾಗಿದೆ. ಇವೆಲ್ಲವೂಗಳ ಹಿನ್ನೆಲೆಯಲ್ಲಿ ಬೇಸತ್ತ ಕಾರ್ಮಿಕರು ಡಿಸೆಂಬರ್ 2020 ಮತ್ತು ಏಪ್ರಿಲ್ 2021ರಲ್ಲಿ ಅನಿರ್ದಿಷ್ಟ ಮುಷ್ಕರ ನಡೆಸಬೇಕಾಗಿ ಬಂದಿತು. ಆದರೂ ಸರ್ಕಾರ ಅಥವಾ ಆಡಳಿತ ವರ್ಗ ಭರವಸೆಗಳು ಹಾಗೆ ಉಳಿದಿವೆ' ಎಂದು ಹೇಳಿದರು.



ಸಂಘದ ರಾಜ್ಯ ಉಪಾಧ್ಯಕ್ಷ ಡಾ. ಪ್ರಕಾಶ್ ಕೆ. ಮಾತನಾಡಿ 'ಆಡಳಿತ ವರ್ಗ ಕಾರ್ಮಿಕರ ಮೇಲೆ ಗದಾಪ್ರಹಾರ ಮಾಡಿ ವಿನಾಕಾರಣ ಸಾವಿರಾರು ಕಾರ್ಮಿಕರನ್ನು ತೀವ್ರವಾದ ಶಿಕ್ಷೆಗಳಿಗೆ ಗುರಿಪಡಿಸಿದೆ. ಆಡಳಿತ ವರ್ಗದ ಇಂತಹ ಕ್ರಮಗಳಿಂದ ಕಾರ್ಮಿಕರ ಮೂಲಕ ನಾಡಿನ ಜನತೆಗೆ ಉತ್ತಮ ಸೇವೆ ಒದಗಿಸಲು ಹಾಗೂ ಕೈಗಾರಿಕಾ ಬಾಂಧವ್ಯವನ್ನು ರೂಪಿಸಲು ಸಹಕಾರಿಯಾಗುವುದಿಲ್ಲ. ಧಮಕಿ ಮತ್ತು ಕಿರುಕುಳದ ನೀತಿಯು ಸಾರಿಗೆ ನಿಗಮಗಳ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸುತ್ತದೆ. ಅನಗತ್ಯ ಶಿಕ್ಷೆಯ ಕ್ರಮಗಳಿಂದ ಸಾವಿರಾರು ಕಾರ್ಮಿಕರ ಅವಲಂಬಿತ ಕುಟುಂಬಗಳು ಅಕ್ಷರಶಃ ಬೀದಿಗೆ ಬಿದ್ದಿವೆ. ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿವೆ. ಪೋಷಕರ ಪಾಲನೆ, ಆರೋಗ್ಯ ರಕ್ಷಣೆ ಅಸಾಧ್ಯವಾಗಿದೆ. ಕುಟುಂಬದಲ್ಲಿ ಆಹಾರಕ್ಕಾಗಿ ಪರದಾಡುವ ಪರಿಸ್ಥಿತಿಯು ಎದುರಾಗಿದೆ' ಎಂದು ಹೇಲಿದರು.

ಸಂಘಟನೆಯು ಮುಷ್ಕರದ ವೇಳೆಯಲ್ಲಿ ಸೇವೆಯಿಂದ ವಜಾ ಮಾಡಲ್ಪಟ್ಟಿರುವ ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ಪುನರ್ ನೇಮಿಸಬೇಕು. ಸೇವೆಯಿಂದ ಕೈಬಿಡಲಾಗಿರುವ ➚





# ನೌಕರಿ ಹೆಸರಲ್ಲಿ ಮೋಸ–ವಂಚಕರ ಕೈಗೆ ಬೇಡಿ ಹಾಕುವವರು ಯಾರು?


**ಗುರುರಾಜ ದೇಸಾಯಿ**

ಮೋಸ ಹೋಗುವವರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ಮೋಸ ಮಾಡುವವರೂ ಇರುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ, ವ್ಯಕ್ತಿಗತ ವಿಚಾರ, ಉದ್ಯೋಗ, ಹಣ, ಆಸ್ತಿ ಹೀಗೆ ಮೋಸಕ್ಕಾಗಿ ಬಳಸುವ ವಸ್ತುಗಳೇ ಇಲ್ಲ ಎನ್ನಬಹುದು? ಮೋಸದ ಹೆಸರಿನಲ್ಲಿ ದೌರ್ಭಲ್ಯವನ್ನು ಬಳಸಿಕೊಂಡು ವಂಚನೆ ಮಾಡುತ್ತಿರುವುದು ಎಷ್ಟು ಸರಿ? ನೌಕರಿ ಕೊಡಿಸುವ ಹೆಸರಿನಲ್ಲಿ ಮೋಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ವಾ? ನೌಕರಿ ಆಮೀಷೆ ಒಡ್ಡಿ ವಂಚಿಸುವ ವಂಚಕರ ಕೈಗೆ ಬೇಡಿ ತೊಡಿಸುವವರು ಯಾರು? ನಾವು ಜಾಗೃತರಾಗುವುದು ಯಾವಾಗ? ಎಂಬ ಪ್ರಶ್ನೆಗಳು ಈಗ ಮುಖ್ಯವಾಗಿವೆ.

ನಾನು ಚನ್ನಾಗಿ ಓದಿದ್ದೇನೆ ನೌಕರಿ ಸೇರಿಕೊಳ್ಳಬೇಕು, ನಂದು ಒಂದು ಸಂಸಾರ, ಮನೆ ಇರಬೇಕು ಎಂಬ ಆಸೆ ಸಹಜವಾಗಿ ಇರುವಂತದ್ದು. ಆದರೆ ಇಂದು ದೇಶದಲ್ಲಿ ಉಂಟಾಗುತ್ತಿರುವ ನಿರುದ್ಯೋಗ ಸಮಸ್ಯೆಯಿಂದ ನೌಕರಿ ಎನ್ನುವ ಪದ ಬೆಚ್ಚಿ ಬೀಳಿಸುವ ಪದವಾಗಿದೆ. ವಿದೇಶದಲ್ಲಿ ನೌಕರಿ ಕೊಡಿಸುತ್ತೇನೆ ಎಂದು ಇಲ್ಲವೆ ಸರಕಾರಿ ಇಲಾಖೆಯಲ್ಲಿ ಕೆಲಸ ಕೊಡಿಸುತ್ತೇನೆ ಎಂದು, ಇಲ್ಲವೆ ಪ್ರತಿಷ್ಠಿತ ಖಾಸಗಿ ಕಂಪನಿಯಲ್ಲಿ ಉದ್ಯೋಗ ಕೊಡಿಸುತ್ತೇನೆ ಎಂದು ಉದ್ಯೋಗದ ಆಮೀಷೆಯನ್ನು ಹಚ್ಚಿ ಮೋಸ ಮಾಡುತ್ತಿರುವವರು ಮತ್ತು ಮೋಸಕ್ಕೆ ಒಳಗಾಗುವವರ ಸಂಖ್ಯೆ ದಿನೆ ದಿನೆ ಹೆಚ್ಚಾಗುತ್ತಿದೆ. ಮೋಸ ಹೋಗುವವರು ಯಾರು ಎಂದು ದಾಖಲೆಗಳನ್ನು ತೆಗೆದು ನೋಡಿದಾಗ ಸಿಕ್ಕ ಉತ್ತರಗಳೆಂದರೆ ಉತ್ತಮ ಜ್ಞಾನ ಹೊಂದಿರುವವರೇ ಆಗಿದ್ದಾರೆ. ಶಿಕ್ಷಕಕರು, ವಕೀಲರು, ಪೊಲೀಸರು, ಅಧಿಕಾರಿಗಳು, ಸಂಶೋಧಕರು ಹೀಗೆ ಮೋಸಕ್ಕೊಳಗಾದವರ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ.

ಪೊಲೀಸ್ ಮೂಲಗಳ ಪ್ರಕಾರ ನೌಕರಿ ಹೆಸರಿನಲ್ಲಿ ಪ್ರತಿನಿತ್ಯ ನೂರಾರು ವಂಚನೆ ಪ್ರಕರಣಗಳು ನಡೆಯುತ್ತಿವೆ. ಧೈರ್ಯ ಇದ್ದವರು ದೂರು ಕೊಟ್ಟರೆ, ಇನ್ನೂ ಕೆಲವರು ಪೊಲೀಸ್ ತನಿಖೆ, ಹಣ ಪಡೆದವರ ಬೆದರಿಕೆ, ಕೋರ್ಟ್ಗೆ ಅಲೆದಾಡ ಬೇಕೆಂಬ ಭಯದಲ್ಲಿ ಮೋಸ ಹೋದವರಲ್ಲಿ ಬಹುತೇಕರು ದೂರನ್ನೇ ದಾಖಲಿಸುವುದಿಲ್ಲ. ಇದು ವಂಚಕರಿಗೆ ವರದಾನವಾಗಿರುವುದರಿಂದಲೇ ಬೆರಳೆಣಿಕೆ ಕೇಸ್ಗಳು ವರದಿ ಯಾಗುತ್ತಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸ್ ದಾಖಲೆಗಳ ಪ್ರಕಾರ 2020 ರಲ್ಲಿ ಕರ್ನಾಟಕದಲ್ಲಿ 4,699 ವಂಚನೆ ಅಂದರೆ 420 ಪ್ರಕರಣಗಳು ವರದಿಯಾಗಿವೆ. ಕಳೆದ ಮೂರು ವರ್ಷಗಳಲ್ಲಿ ದೇಶಾದ್ಯಂತ 4, 08, 915 ವಂಚನೆ ಕೇಸ್ಗಳು ದಾಖಲಾಗಿವೆ. ಇವುಗಳಲ್ಲಿ ಉದ್ಯೋಗದ ಆಮಿಷಕ್ಕೊಳಗಾಗಿ ಲಕ್ಷಾಂತರ ರೂ. ಹಣ ಕಳೆದುಕೊಂಡ ಪ್ರಕರಣಗಳೇ ಅಂದಾಜು ಶೇ.18 ರಷ್ಟಿದೆ ಎಂಬುದು ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದ ಅಂಕಿ–ಅಂಶಗಳಿಂದ ದೃಢಪಟ್ಟಿದೆ ಎಂದು ಖಾಸಗಿ ಪತ್ರಿಕೆ ವರದಿ ಮಾಡಿತ್ತು. ಉದ್ಯೋಗ ವಂಚನೆ ಕೇಸೆಗಳು ಎಷ್ಟು ದಾಖಲಾಗಿವೆ ಎಂಬ ಅಂಶವನ್ನು ನೋಡುವುದಾದರೆ 2018 ರಲ್ಲಿ ಭಾರತದಲ್ಲಿ ದಾಖಲಾದ ವಂಚನೆ ಕೇಸ್‌ಗಳ ಸಂಖ್ಯೆ 1,35,812, ಕರ್ನಾಟಕದಲ್ಲಿ 6,691 ಕೇಸ್‌ಗಳು ಪತ್ತೆಯಾಗಿವೆ. 2019 ರಲ್ಲಿ ಭಾರತದಲ್ಲಿ ಉದ್ಯೋಗ ವಂಚನೆ ಪ್ರಕರಣಗಳು ದಾಖಲಾದ ಸಂಖ್ಯೆ 1,44,707, ಕರ್ನಾಟಕದಲ್ಲಿ 6,321, 2020 ರಲ್ಲಿ ದೇಶದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 1,28,396, ಕರ್ನಾಟಕದಲ್ಲಿ 4699 ಕೇಸ್ ದಾಖಲಾಗಿವೆ.




ಈ ವಂಚನೆಗಳು ಅವರು ಹೇಗೆ ಮಾಡುತ್ತಾರೆ ಎಂಬ ಸಂಗತಿ ಬಹಳಷ್ಟು ಕುತೂಹಲಕರವಾಗಿದೆ. ಉದ್ಯೋಗಾವಕಾಶ ಇರುವುದಾಗಿ ನಕಲಿ ವೆಬ್‌ಸೈಟ್ ಸೃಷ್ಟಿಸಿ ಜಾಹೀರಾತು ಕೊಡುತ್ತಾರೆ. ತಾತ್ಕಾಲಿಕವಾಗಿ ಏಜೆನ್ಸಿ ಕಚೇರಿ ಸ್ಥಾಪನೆ ಮಾಡಿಕೊಂಡಿರುತ್ತಾರೆ. ಇಂಟರ್‌ವ್ಯೂ ಹೆಸರಲ್ಲಿ ಅಭ್ಯರ್ಥಿ ಕರೆಸಿಕೊಂಡು, ಹಣ ಪಡೆದು ಪರಾರಿಯಾದ ಉದಾಹರಣೆಗಳಿವೆ. ಉದ್ಯೋಗಕ್ಕೆ ಹಾಕಿದ ಅರ್ಜಿ ವಿವರ ಪಡೆಯುವ ವಂಚಕರು, ಅಭ್ಯರ್ಥಿಗಳಿಗೆ ಕರೆ ಮಾಡಿ ಆಮಿಷ ಒಡ್ಡುತ್ತಾರೆ. ಬ್ಯಾಂಕ್, ಸಾಫ್ಟ್‌ವೇರ್ ಕಂಪನಿ, ಹೊರರಾಜ್ಯದ ದೊಡ್ಡ ಕಾರ್ಖಾನೆಗಳಲ್ಲಿ ಕೆಲಸಕೊಡಿಸುವ ನಕಲಿ ಭರವಸೆಗಳನ್ನು ಹೇಳಿ ವಿದೇಶದಲ್ಲಿ ಚಾಲಕ, ಹೋಟೆಲ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ದಾಖಲೆ ಪಡೆದು ಹಣಕ್ಕೆ ಬೇಡಿಕೆ ಇಡುತ್ತಾರೆ.

ಇನ್ನೂ ಸರಕಾರಿ ಉದ್ಯೋಗವನ್ನು ಕೊಡಿಸುವುದಾಗಿ ಹೇಳುವವರು ಅಲ್ಲಿರುವ ವ್ಯಕ್ತಿಗಳ ಜೊತೆಗಿನ ಸೆಲ್ಫಿ ಫೋಟೊ ತೋರಿಸುವುದು, ರಾಜಕಾರಣಿ, ಶಾಸಕ, ಮಂತ್ರಿಗಳ ಜೊತಗಿನ ಸೆಲ್ಫಿ, ಅಧಿಕಾರಿಗಳ ಜೊತೆಗಿನ ಸೆಲ್ಫಿ ಫೋಟೊ ತೆಗೆಸಿಕೊಂಡು ನೌಕರಿ ಕೊಡಿಸುವ ಭರವಸೆ ನೀಡಿ ವಂಚನೆ ಮಾಡುತ್ತಾರೆ. ಅರೇ ಈ ರೀತಿ ಒರೋದಕ್ಕೆ ಸಾಧ್ಯಾನಾ ಅಂತೀರಾ ಇಲ್ಲೊಂದಿಷ್ಟು ಘಟನೆಗಳ ಮಾಹಿತಿ ಕೊಡ್ತಾ ಹೋಗ್ತೇನೆ ನೋಡಿ.

ಘಟನೆ 1, ದಿನಾಂಕ: ಜೂನ್ 19, 2020. ಸ್ಥಳ: ಬೆಂಗಳೂರು, ಘಟನೆ ಏನು ಅಂದ್ರೆ, ಸರ್ಕಾರಿ ಉದ್ಯೋಗ ನೀಡುವುದಾಗಿ ಹೇಳಿ ಭರವಸೆ ನೀಡಿದ್ದ ವ್ಯಕ್ತಿಯೊಬ್ಬ ಖಾಸಗಿ ಶಾಲಾ ಶಿಕ್ಷಕರಿಂದ ತಲೆಗೆ 2.5 ಲಕ್ಷ ರೂ. ನಂತೆ ಪಡೆದು ಬದಲಿಯಾಗಿ ಅವರುಗಳಿಗೆ ನಕಲಿ ನೇಮಕಾತಿ ಆದೇಶ ಪತ್ರ ನೀಡಿ ವಂಚಿಸಿದ್ದಾನೆ. 80 ಕ್ಕೂ ಹೆಚ್ಚು ಖಾಸಗಿ ಶಾಲಾ ಶಿಕ್ಷಕರು ಆ ವ್ಯಕ್ತಿಗೆ ಒಟ್ಟೂ ಸುಮಾರು 98 ಲಕ್ಷ ರೂಪಾಯಿ ನೀಡಿದ್ದಾರೆ. ಅದಕ್ಕೆ ಬದಲಾಗಿ ಆ ವ್ಯಕ್ತಿ ವಿವಿಧ ಶಿಕ್ಷಕರಿಗೆ ವಿವಿಧೆಡೆಯ ಜಿಲ್ಲೆಗಳಿಂದ 10 ಕ್ಕೂ ಹೆಚ್ಚು ಇಲಾಖೆಗಳಲ್ಲಿ ವಿವಿಧ ಉದ್ಯೋಗದ ನಕಲಿ ನೇಮಕಾತಿ ಆದೇಶಪತ್ರ ನೀಡಿದ್ದಾನೆ. ಈ ಆದೇಶ ಪತ್ರ ಕೈಸೇರಿದ ಬೆನ್ನಲ್ಲೇ ಆ ಎಲ್ಲಾ ಶಿಕ್ಷಕರು ತಮ್ಮ ನೌಕರಿಗಳಿಗೆ ರಾಜೀನಾಮೆ ಸಲ್ಲಿಸಿದ್ದರು. ಆದರೆ ತಾವು ನೇಮಕಾತಿ ಆದೇಶವನ್ನು ಹಿಡಿದು ನೌಕರಿಗೆ ಸೇರಲು ಹೋದಾಗಲೇ ಅವರುಗಳು ವಂಚನೆಗೆ ಒಳಗಾಗಿರುವುದು ಪತ್ತೆಯಾಗಿದೆ.

ಘಟನೆ ಎರಡು, ದಿನಾಂಕ 11 ಜನೆವರಿ 2021, ಸ್ಥಳ: ಹುಬ್ಬಳ್ಳಿ, ಹುಬ್ಬಳ್ಳಿ ನಗರದ ಎಎಸ್‌ಐ ಪುತ್ರನಿಗೆ ರೈಲ್ವೆ ಇಲಾಖೆಯಲ್ಲಿ 'ಡಿ' ದರ್ಜೆ ನೌಕರಿ ಕೊಡಿಸುವುದಾಗಿ ಹೇಳಿ ಅವರಿಂದ ರೂ. 2 ಲಕ್ಷ ಪಡೆದು ವಂಚಿಸಿರುವ ವ್ಯಕ್ತಿಯ ವಿರುದ್ಧ ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು ರೈಲ್ವೆ ವಿಭಾಗದಲ್ಲಿ ಡಿಪಿಒ (ಡಿವಿಷನಲ್ ಪರ್ಸನಲ್ ಆಫೀಸರ್) ಆಗಿದ್ದ ಸಹದೇವ ಎಸ್. ಎಂ. ವಂಚಿಸಿದ ಆರೋಪಿ. ಹುಬ್ಬಳ್ಳಿ ಸಶಸ್ತ್ರ ಮೀಸಲು ಪಡೆಯಲ್ಲಿ ಎಎಸ್‌ಐ ಆಗಿರುವ ರಮೇಶ ಮಾನೆ ವಂಚನೆಗೊಳಗಾದ ವ್ಯಕ್ತಿ. 2019ರ ನ. 22ರಂದು ನಗರದ ನ್ಯೂ ಕಾಟನ್ ಮಾರ್ಕೆಟ್ ಬಳಿಯಿರುವ ಪಿಕಾಕ್ ಹೋಟೆಲ್ನ ಕೊಠಡಿಯೊಂದರಲ್ಲಿ ರಮೇಶ ಅವರು ಸಹದೇವ ಅವರೊಂದಿಗೆ ಮಗನಿಗೆ ಉದ್ಯೋಗ ದೊರಕಿಸಿಕೊಡುವ ಕುರಿತು ವ್ಯವಹಾರ ನಡೆಸಿದ್ದರು. ನಂತರ ರೂ. 2 ಲಕ್ಷದ ಜೊತೆಗೆ ದಾಖಲೆಗಳನ್ನು ನೀಡಿದ್ದರು. ಕೊನೆಗೆ ಉದ್ಯೋಗವೂ ನೀಡದೆ, ಹಣವೂ ಮರಳಿಸದೆ ಸಹದೇವ ವಂಚಿಸಿದ್ದಾರೆ.

ಘಟನೆ ಮೂರು, ಫೆಬ್ರವರಿ 6, 2019 ಸ್ಥಳ ಬೆಂಗಳೂರು, ಬಿ.ಇ.ಎಲ್. ನಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ತಲಾ 1 ಲಕ್ಷದ 50 ಸಾವಿರ ರೂ ನಂತೆ 14 ಮಂದಿಯಿಂದ ಹಣವನ್ನು ಪಡೆದು ನಕಲಿ ನೇಮಕಾತಿಯನ್ನು ನೀಡಲಾಗಿದೆ ಎಂದು ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಚಿವ ಶ್ರೀರಾಮುಲು ಹೆಸರು ಹೇಳಿಕೊಂಡು ವಿಧಾನಸೌಧದಲ್ಲಿ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಸ್ನೇಹಿತನಿಂದಲೇ ಲಕ್ಷಾಂತರ ರೂ. ಪಡೆದು ವಂಚಿಸಿದ್ದ ಪ್ರಕರಣ ಬೆಂಗಳೂರಿನಲ್ಲಿ ವರದಿಯಾಗಿತ್ತು.

ಇವು ಕೇವಲ ಸ್ಯಾಂಪಲ್ ಅಷ್ಟೆ ಇಂತಹ ಅನೇಕ ದೂರುಗಳು ಇವೆ. ಇದಕ್ಕೆ ಮುಖ್ಯ ಕಾರಣ ನಿರುದ್ಯೋಗ ಸಮಸ್ಯೆ, ಈ ರೀತಿ ಮೋಸಕ್ಕೆ ಒಳಗಾಗಬೇಡಿ ನೀವು ಜಾಗೃತರಾಗಬೇಕು, ಮೋಸವನ್ನು ಅರಿಯಬೇಕು. ಮೋಸ ನಡೆಯುತ್ತಿದೆ ಎಂದು ಅರಿವಿಗೆ ಬಂದ ತಕ್ಷಣವೇ ಪೊಲೀಸ್ ಠಾಣೆಗೆ ದೂರು ನೀಡಬೇಕು. ಹಾಗೂ ಸರಕಾರಗಳು ಇಂತಹ ಪ್ರಕರಣ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಪೊಲೀಸ್ ಇಲಾಖೆ ಕೂಡ ಜಾಗೃತಿ ಮೂಡಿಸಬೇಕಿದೆ. ಹಣ ನೀಡಿ ಉದ್ಯೋಗವನ್ನು ಕೊಡಿಸಲು ಸಾಧ್ಯವಿಲ್ಲ ಎಂಬುದನ್ನು ಉದ್ಯೋಗಾಕಾಂಕ್ಷಿಗಳು ಅರಿಯಬೇಕು ಎಂದು ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಮ್ ಪ್ರತಿಕ್ರಿಯೆ ನೀಡಿದ್ದಾರೆ.

ಯುವಜನನತೆಗೆ ಸರಿಯಾಗಿ ಉದ್ಯೋಗ ಸೃಷ್ಟಿ ಮಾಡಿದ್ದರೆ ಇಂತಹ ವಂಚನೆ ಪ್ರಕರಣಗಳು ನಡೆಯುತ್ತಿರಲಿಲ್ಲ. ಮೋದಿ ಸರಕಾರ ಕೋಟಿ, ಕೋಟಿ ಉದ್ಯೋಗ ಸೃಷ್ಟಿಸುವ ಭರವಸಿ ನೀಡಿತ್ತು ಆದರೆ ಲಕ್ಷದಷ್ಟು ಉದ್ಯೋಗವನ್ನು ಸೃಷ್ಟಿಸಿಲ್ಲ. ನಿರುದ್ಯೋಗ ಸಮಸ್ಯೆ ಹೆಚ್ಚಾದ ಕಾರಣ ವಂಚನೆ ಮಾಡುವವರ ಮತ್ತು ವಂಚನೆಗೊಳಗಾಗುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇಂತಹ ಅಪರಾಧಗಳಿಗೆ ಸರಕಾರವೇ ಕಾರಣವಾಗಿದೆ ಎಂದು ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಕರೊನಾ ಸಂಕಷ್ಟದ ಕಾಲದಲ್ಲಿ ಉದ್ಯೋಗ ಕಳೆದುಕೊಂಡ ಲಕ್ಷಾಂತರ ಜನರು ಹೊತ್ತಿನ ಊಟಕ್ಕೂ ಪರದಾಡುತ್ತಿರುವ ಸಂದರ್ಭದಲ್ಲೇ ಪ್ರತಿಷ್ಠಿತ ಖಾಸಗಿ ಕಂಪನಿಗಳಲ್ಲಿ ಹಾಗೂ ಸರ್ಕಾರಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಅಮಾಯಕರಿಗೆ ಟೋಪಿ ಹಾಕುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಮಿತಿಮೀರುತ್ತಿವೆ. ಹಾಗಾಗಿ ರಾಜ್ಯ ಸರಕಾರ ಇಂತಹ ವಂಚನೆಗಳು ನಡೆಯದಂತೆ ಎಚ್ಚರಿಕೆಯನ್ನು ವಹಿಸಬೇಕಿದೆ. ಉದ್ಯೋಗಸೃಷ್ಟಿಯನ್ನು ಹೆಚ್ಚಿಸದರೆ ಇಂತಹ ಅಪರಾಧಗಳ ಸಂಖ್ಯೆ ಕಡಿಮೆಯಾಗುತ್ತದೆ ಎಂಬುದನ್ನು ಸರಕಾರ ಅರಿಯಬೇಕಿದೆ. ■

---

ಎಲ್ಲಾ ಟ್ರೈನಿ ನೌಕರರನ್ನು ಪುನರ್ ನೇಮಕ ಮಾಡಬೇಕು. ವಿಭಾಗದಿಂದ ವಿಭಾಗಗಕ್ಕೆ ವರ್ಗವಣೆ ಮಾಡಿರುವ ನೌಕರರನ್ನು ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳಗಳಿಗೇ ಆಡಳಿತಾತ್ಮಕ ವರ್ಗಾವಣೆ ಆಧಾರದಲ್ಲಿ ವಾಪಸ್ಸು ತರಬೇಕು. ಅಮಾನತ್ತು ಮಾಡಲ್ಪಟ್ಟಿರುವ ನೌಕರರ ಅಮಾನತ್ತುಗಳನ್ನು ತೆರವು ಮಾಡಬೇಕು ಹಾಗೂ ಎಲ್ಲಾ ಶಿಸ್ತು ಕ್ರಮಗಳನ್ನು ರದ್ದುಮಾಡಬೇಕು. ಮುಷ್ಕರದ ಅವಧಿಗೆ ಸಂಬಂಧಿಸಿ ಕಾರ್ಮಿಕರಿಗೆ ಅಪಾದನಾ ಪತ್ರ ನೀಡಲಾಗುತ್ತಿದೆ. ಅದನ್ನು ರದ್ದುಗೊಳಿಸಿ ಹಾಗೂ ಎಲ್ಲಾ ಶಿಸ್ತು ಪ್ರಕ್ರಿಯೆಗಳನ್ನು ನಿಲ್ಲಿಸಬೇಕು. 2020ರ ಜನವರಿಯಿಂದ ಬಾಕಿಯಿರುವ ವೇತನ ಮಾತುಕತೆಯನ್ನು ಆರಂಭಿಸಬೇಕೆಂದು ಆಗ್ರಹಿಸಿದ್ದಾರೆ.

ಪ್ರತಿಭಟನೆಯಲ್ಲಿ ಸಂಘದ ಪರವಾಗಿ ಉಪಾಧ್ಯಕ್ಷ ಚಂದ್ರಪ್ಪ, ಜಂಟಿ ಕಾರ್ಯದರ್ಶಿ ಆರ್. ವೇಣುಗೋಪಾಲ್, ಜಂಟಿ ಕಾರ್ಯದರ್ಶಿ ಕುಸುಮ ಓಂಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

**ಸಾರಿಗೆ ಸಚಿವರಿಗೆ ಮನವಿ**

ಸಾರಿಗೆ ನೌಕರರು ಪ್ರತಿಭಟನೆಯ ನಂತರ ಸಾರಿಗೆ ಸಚಿವ ಶ್ರೀರಾಮುಲು ಅವರನ್ನು ಭೇಟಿ ಮಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ರಾಜ್ಯ ಮುಖಂಡತ್ವದೊಂದಿಗೆ ಚರ್ಚಿಸಿದ ಸಚಿವರು ಪ್ರತಿಭಟನೆ ವೇಳೆ ನೌಕರರ ಮೇಲೆ ದಾಖಲಾಗಿದ್ದ ಎಲ್ಲಾ ರೀತಿಯ ಪ್ರಕರಣಗಳನ್ನು ವಾಪಸ್ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ತಿಳಿದುಬಂದಿದೆ. ಅಮಾನತು, ವಜಾ, ವರ್ಗಾವಣೆ ಸೇರಿದಂತೆ ಬಹುತೇಕ ಎಲ್ಲಾ ಪ್ರಕರಣಗಳನ್ನು ವಾಪಸ್ ಪಡೆಯಲು ತೀರ್ಮಾನಿಸಲಾಗಿದ್ದು, ಇಂದು ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ವರದಿಯಾಗಿದೆ.

ಎರಡು ಹಂತದಲ್ಲಿ ನೌಕರರ ಮೇಲಿನ ಪ್ರಕರಣಗಳ ವಾಪಸ್ಸಿಗೆ ಸರ್ಕಾರ ಯೋಜಿಸಿದ್ದು, ಸದ್ಯಕ್ಕೆ ಎಫ್‌ಐಆರ್ ದಾಖಲಾಗಿರುವ ಪ್ರಕರಣಗಳು ಹೊರತುಪಡಿಸಿ ಉಳಿದ ಪ್ರಕರಣಗಳು ಹಿಂಪಡೆದು, ಎಫ್‌ಐಆರ್ ದಾಖಲಾಗಿರುವ ಪ್ರಕರಣಗಳು ಎರಡನೇ ಹಂತದಲ್ಲಿ ವಾಪಸ್ ಪಡೆಯುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ■

ಅತಿಥಿ ಅಂಕಣ



ನಾ ದಿವಾಕರ

**ಸರಸ್ವತಿ ಶೋ ಮುಗಿಸುತ್ತಿರುವ ಈ ವಿಷಮ ಸನ್ನಿವೇಶದಲ್ಲೂ ಕನ್ನಡದ ಕೆಲವು "ಸರಸ್ವತಿ ಪುತ್ರರು" ಶಾಲೆಯ ಸಮಾಧಿಗೆ ಕರಸೇವಕರಾಗುತ್ತಿರುವುದು ದುರಂತ ಅಲ್ಲವೇ? ಈ ಶಾಲೆ ಯಾರಿಗಾಗಿ ಉಳಿಯಬೇಕು? ಇದರ ಫಲಾನುಭವಿಗಳು ಯಾರು? ಮೌಢ್ಯ ಹರಡುವ ಮೂಲಕ ಸಮಾಜದ ಬೌದ್ಧಿಕ ಸ್ವಾಸ್ಥ್ಯವನ್ನೇ ಹಾಳುಗೆಡಹುವ ಧಾರ್ಮಿಕ ಕೇಂದ್ರಗಳನ್ನು ರಕ್ಷಿಸಲು, ನ್ಯಾಯಾಲಯದ ಆದೇಶವನ್ನೂ ಧಿಕ್ಕರಿಸಿ ವಿಧೇಯಕವನ್ನು ಹೊರಡಿಸುವ ಒಂದು ಚುನಾಯಿತ ಸರ್ಕಾರಕ್ಕೆ, ಒಂದು ಶಾಲೆಯ ಉಳಿವಿಗಾಗಿ ಸ್ವಂತ ನಿರ್ಧಾರ ಕೈಗೊಳ್ಳುವುದು ಅಸಾಧ್ಯವೇ?**

# ಎನ್.ಟಿ.ಎಂ.ಎಸ್ ಮಕ್ಕಳ 'ಸರಸ್ವತಿ ಶೋ' ಮುಗಿಯುವುದೇ?

ಕಾಕತಾಳೀಯವೋ ಏನೋ, ಇಂದು (ಸೆ.23) ಆಂದೋಲನ ಪತ್ರಿಕೆಯ ಮುಖಪುಟದಲ್ಲಿ ಎರಡು ಮುಖ್ಯ ಸುದ್ದಿಗಳಿವೆ. "ಶೋ ಮುಗಿಸಿದ ಸರಸ್ವತಿ" ಮತ್ತು "ಎನ್.ಟಿ.ಎಂ.ಎಸ್ ಮಕ್ಕಳ ಅರ್ಜಿ ವಜಾ". ಮೊದಲನೆಯದು ಒಂದು ಮನರಂಜನೆಯ ಕೇಂದ್ರ ಶಾಶ್ವತವಾಗಿ ಇಲ್ಲವಾಗುತ್ತಿರುವ ಸುದ್ದಿ. ಮತ್ತೊಂದು ಬೌದ್ಧಿಕ ಕೇಂದ್ರವೂ ನಾಶವಾಗುವುದರ ಸೂಚನೆ. ಶಾಲೆಯ ಅಳಿವಿಗಾಗಿ ಶತಗತಾಯ ಪ್ರಯತ್ನ ಮಾಡುತ್ತಿರುವ ವಿವೇಕಾನಂದರ 'ಅನುಯಾಯಿಗಳು', ಹೆಣ್ಣು ಮಕ್ಕಳ ಈ ಶಾಲೆಯ ಉಳಿವಿಗಾಗಿ ಶತಪ್ರಯತ್ನ ಮಾಡುತ್ತಿರುವ ಜನಸಾಮಾನ್ಯರ ಮುಂದೆ ದಿಗ್ವಿಜಯದ ನಗೆ ಬೀರಲು, ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ ನೆರವಾಗಿದೆ. ಇಲ್ಲಿ ಹೈಕೋರ್ಟ್ ತೀರ್ಪಿನ ನಿಷ್ಕರ್ಷೆ ಬೇಕಿಲ್ಲ. ಏಕೆಂದರೆ ನ್ಯಾಯಾಲಯದ ಮುಂದೆ ಇದ್ದುದು, ಸರ್ಕಾರದಿಂದ ರಾಮಕೃಷ್ಣ ಮಠಕ್ಕೆ ಹಸ್ತಾಂತರವಾದ ಭೂಮಿಯ ಪ್ರಶ್ನೆ ಅಷ್ಟೇ. ಈ ಭೂಮಿ ಅಥವಾ ಅಲ್ಲಿರುವಂತಹ ಶತಮಾನದ ಶಾಲೆಯ ಉಳಿವು ಸರ್ಕಾರದ ವಿವೇಚನೆಗೆ (ಇದ್ದರೆ) ಬಿಟ್ಟ ಪ್ರಶ್ನೆ. ಭೂಮಿಗಾಗಿ ಹಪಹಪಿಸುವವರ 'ವಿವೇಕ'ಕ್ಕೆ ಬಿಟ್ಟ ವಿಚಾರ.

ಶತಮಾನದ ಶಾಲೆಯ ಉಳಿವಿಗಾಗಿ ಹೋರಾಡುತ್ತಿರುವ ಸಮಾಜಕ್ಕೆ ನ್ಯಾಯಾಲಯದ ಮತ್ತೊಂದು ಮೆಟ್ಟಿಲು ತೆರೆದೇ ಇದೆ. ಅಲ್ಲಿಯೂ ನ್ಯಾಯ ದೊರೆಯುವುದೇ? ಇದು ಯಕ್ಷ ಪ್ರಶ್ನೆ. ಏಕೆಂದರೆ ನ್ಯಾಯಾಲಯ ಸಾಕ್ಷಿ ಪುರಾವೆಗಳನ್ನು ಗಮನಿಸುತ್ತದೆ; ಭಾವನೆ, ಚಾರಿತ್ರಿಕ ಸೂಕ್ಷ್ಮತೆ ಮತ್ತು ಸಮಾಜದ ಸಂವೇದನೆಯನ್ನಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸದೀಯ ಚೌಕಟ್ಟಿನಲ್ಲಿ ಚುನಾಯಿತ ಸರ್ಕಾರವೊಂದು ಕೈಗೊಳ್ಳುವ ನಿರ್ಧಾರಗಳೆಲ್ಲವೂ ಜನತೆಯ ಆಶಯಗಳು ಮತ್ತು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡೇ ಹೊರಬಂದಿರುತ್ತವೆ ಎನ್ನುವ ಪರಿಕಲ್ಪನೆಯಲ್ಲೇ ಭೂಮಿಯ ವ್ಯಾಜ್ಯಗಳು ನಿಷ್ಕರ್ಷೆಗೊಳಗಾಗುತ್ತವೆ. ಎನ್.ಟಿ.ಎಂ.ಎಸ್ ಶಾಲೆಯ ಆವರಣ ಈಗ ಕೇವಲ ಒಂದು ಭೂಮಿಯ ಪ್ರಶ್ನೆಯಾಗಿ ನ್ಯಾಯಾಲಯದ ಮುಂದಿದೆ. ಅಲ್ಲಿ ನಿಂತಿರುವ ಒಂದು ಚಾರಿತ್ರಿಕ–ಶೈಕ್ಷಣಿಕ ಸ್ಥಾವರ ನಿಮಿತ್ತ ಮಾತ್ರ. ಈ ಭೂಮಿಯನ್ನು ಪರಭಾರೆ ಮಾಡುವ ಸಾಂವಿಧಾನಿಕ ಹಕ್ಕು ಚುನಾಯಿತ ಸರ್ಕಾರಕ್ಕೆ ಇರುತ್ತದೆ. ಈ ಹಕ್ಕನ್ನು ವಿವೇಕಯುತವಾಗಿ ಬಳಸಿಕೊಳ್ಳದೆ ಇದ್ದರೆ ಅದು ನ್ಯಾಯಾಲಯದ ಹೊಣೆ ಆಗಲಾರದು. ಹಾಗಾಗಿ ಇಲ್ಲಿ ನ್ಯಾಯಾಲಯದ ಆವರಣದಿಂದ ಹೊರಬಂದು ಕೆಲವು ವಿಚಾರಗಳನ್ನು ಮಾತನಾಡಬಹುದು.

140 ವರ್ಷಗಳಿಂದ ಮೈಸೂರಿನ ಬಡ ಜನತೆಗೆ ಆಸರೆಯಾಗಿ, ಸಮಾಜದ ಶೋಷಿತ ವರ್ಗಗಳ ಜ್ಞಾನಾರ್ಜನೆಗೆ ನೆರವಾಗುತ್ತಾ, ಶಾಲೆಯ ಮೆಟ್ಟಿಲು ಕಾಣಲಾಗದ ಮಕ್ಕಳಿಗೆ ಅಕ್ಷರ ಜ್ಞಾನವನ್ನು ನೀಡಲು ಏಳುತ್ತಾ, ಬೀಳುತ್ತಾ ಬಂದಿರುವ ಒಂದು ಜ್ಞಾನದೇಗುಲದ ಸಮಾಧಿಯ ನಿರ್ಮಾಣಕ್ಕೆ ರಾಮಕೃಷ್ಣ ಮಠ ಗುತ್ತಿಗೆ ಪಡೆದಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಎನ್ನುವುದೇ ಮರೀಚಿಕೆಯಾಗಿದ್ದಂತಹ ಚಾರಿತ್ರಿಕ ಘಟ್ಟದಲ್ಲಿ ಪ್ರತ್ಯೇಕವಾಗಿ ಹೆಣ್ಣುಮಕ್ಕಳ ಶಾಲೆಯನ್ನು ತೆರೆದ ಮಹಾರಾಣಿಯವರ ಉದಾತ್ತ ಚಿಂತನೆಗೆ, "ಹೆಣ್ಣುಮಕ್ಕಳನ್ನು ಓದಿಸಿ ಹೆಣ್ಣುಮಕ್ಕಳನ್ನು ಪೋಷಿಸಿ" (ಬೇಟಿ ಪಡಾವೋ, ಬೇಟಿ ಬಚಾವೋ) ಘೋಷಣೆಯೊಂದಿಗೆ ಡಿಜಿಟಲೀಕರಣ ಯುಗದಲ್ಲಿರುವ 'ಆತ್ಮನಿರ್ಭರ' ಭಾರತದ ಆಡಳಿತ ವ್ಯವಸ್ಥೆ ಶಾಶ್ವತ ಸಮಾಧಿಯನ್ನು ನಿರ್ಮಿಸುತ್ತಿದೆ. ಈ ಸಮಾಧಿಯ ಮೇಲೆ ಶಿಕ್ಷಣವೊಂದೇ ಸಮಾಜದ ಉನ್ನತಿಗೆ ಮಾರ್ಗ ಎಂದು ಘಂಟಾಘೋಷವಾಗಿ ಸಾರಿ ಹೇಳಿದ ಜಂಗಮ ಸಂನ್ಯಾಸಿ ವಿವೇಕಾನಂದರ ಸ್ಮಾರಕ ನಿರ್ಮಾಣವಾಗಲಿದೆ.




ಇಲ್ಲಿ "ಸರಸ್ವತಿ ಶೋ ಮುಗಿಸುತ್ತಿದ್ದಾಳೆ". ವಿವೇಕ ಸ್ಮಾರಕ ವಿಜೃಂಭಿಸುತ್ತಿದೆ. ಒಂದು ಪ್ರಬುದ್ಧ ಸಮಾಜವಾಗಿ ನಮ್ಮ ಆಲೋಚನೆ ಯಾವ ದಿಕ್ಕಿನಲ್ಲಿರಬೇಕು?. "ಮಕ್ಕಳ ಅರ್ಜಿ" ನ್ಯಾಯಾಲಯದಲ್ಲಿ ತಿರಸ್ಕೃತವಾಗಿದೆ. ಆದರೆ ನಮ್ಮ ಪ್ರಜ್ಞಾವಲಯದಲ್ಲಿ ಒಂದು ಬೌದ್ಧಿಕ ನ್ಯಾಯಾಲಯ ಇರಬೇಕಲ್ಲವೇ? ನ್ಯಾಯ ನಿಷ್ಕರ್ಷೆಯ ಈ ಅಂಗಳದಲ್ಲಿ ನಮ್ಮ ಸಾಮಾಜಿಕ ಬದ್ಧತೆ ಮತ್ತು ಚಾರಿತ್ರಿಕ ಪ್ರಜ್ಞೆ ಜಾಗೃತವಾಗಿರಬೇಕಲ್ಲವೇ? ಸರಸ್ವತಿ ಶೋ ಮುಗಿಸುತ್ತಿರುವ ಈ ವಿಷಮ ಸನ್ನಿವೇಶದಲ್ಲೂ ಕನ್ನಡದ ಕೆಲವು "ಸರಸ್ವತಿ ಪುತ್ರರು" ಶಾಲೆಯ ಸಮಾಧಿಗೆ ಕರಸೇವಕರಾಗುತ್ತಿರುವುದು ದುರಂತ ಅಲ್ಲವೇ? ಈ ಶಾಲೆ ಯಾರಿಗಾಗಿ ಉಳಿಯಬೇಕು? ಇದರ ಫಲಾನುಭವಿಗಳು ಯಾರು? ಮೌಢ್ಯ ಹರಡುವ ಮೂಲಕ ಸಮಾಜದ ಬೌದ್ಧಿಕ ಸ್ವಾಸ್ಥ್ಯವನ್ನೇ ಹಾಳುಗೆಡಹುವ ಧಾರ್ಮಿಕ ಕೇಂದ್ರಗಳನ್ನು ರಕ್ಷಿಸಲು, ನ್ಯಾಯಾಲಯದ ಆದೇಶವನ್ನೂ ಧಿಕ್ಕರಿಸಿ ವಿಧೇಯಕವನ್ನು ಹೊರಡಿಸುವ ಒಂದು ಚುನಾಯಿತ ಸರ್ಕಾರಕ್ಕೆ, ಒಂದು ಶಾಲೆಯ ಉಳಿವಿಗಾಗಿ ಸ್ವಂತ ನಿರ್ಧಾರ ಕೈಗೊಳ್ಳುವುದು ಅಸಾಧ್ಯವೇ?

ಇಲ್ಲಿ ಆದ್ಯತೆಯ ಪ್ರಶ್ನೆ ಬರುತ್ತದೆ. ಚುನಾಯಿತ ಸರ್ಕಾರಗಳ ಆದ್ಯತೆ ಏನಾಗಿರಬೇಕು? ಎನ್.ಟಿ.ಎಂ.ಎಸ್ ಶಾಲೆಯ ಅಳಿವು ಉಳಿವಿನ ಚೆಂಡು ಸರ್ಕಾರದ ಅಂಗಳದಲ್ಲಿದೆ. ರಾಮಕೃಷ್ಣ ಮಠಕ್ಕೆ ಆ ಭೂಮಿ ಮುಖ್ಯ. ಪ್ರವಾಸೋದ್ಯಮ ನಗರದ ಕೇಂದ್ರ ಭಾಗದಲ್ಲಿರುವ ಮೂಲೆ ನಿವೇಶನಕ್ಕೆ ಬೌದ್ಧಿಕ ಮೌಲ್ಯಕ್ಕಿಂತಲೂ ಹೆಚ್ಚು ಮಾರುಕಟ್ಟೆ ಮೌಲ್ಯ ಇದೆ. ಮಾರುಕಟ್ಟೆ ಮತ್ತು ಆರ್ಥಿಕ ಹಿತಾಸಕ್ತಿಗಳ ಮುಂದೆ ವಿವೇಕಾನಂದರೂ ಗೌಣ ಎನಿಸಿಬಿಡುತ್ತಾರೆ. ಅವರ ಹೆಸರಿನಲ್ಲಿ ನಿರ್ಮಾಣವಾಗುವ ಒಂದು ಸ್ಮಾರಕ ಕೇಂದ್ರದಲ್ಲಿ ಜ್ಞಾನ ವಿಸ್ತರಣೆಗಿಂತಲೂ ಹೆಚ್ಚಾಗಿ ಆಧುನಿಕ ಅಧ್ಯಾತ್ಮ ಮಾರುಕಟ್ಟೆಯ ಪರಿಕರಗಳ ಮರುಉತ್ಪಾದನೆ ಮತ್ತು ವಿತರಣೆ ಮುಖ್ಯವಾಗುತ್ತದೆ. ಈ ಪರಿಕರಗಳಿಗೆ ಮಾರುಕಟ್ಟೆ ಮೌಲ್ಯವಿರುವಂತೆಯೇ, ಆಡಳಿತ ವ್ಯವಸ್ಥೆಯ ಲೋಪಗಳನ್ನು ಜನಸಾಮಾನ್ಯರಿಂದ ಮರೆಮಾಚುವ ಶಕ್ತಿಯೂ ಇದೆ ಅಲ್ಲವೇ? ಭಾರತದ ಯಾವುದೇ ಅಧ್ಯಾತ್ಮ ಕೇಂದ್ರಗಳತ್ತ ಕಣ್ಣು ಹಾಯಿಸಿದರೂ ಇದು ಕಾಣಲಿಕ್ಕೆ ಸಾಧ್ಯ.

ವಿವೇಕಾನಂದರು ಒಬ್ಬ ಜಂಗಮ ಸಂನ್ಯಾಸಿ. ತಮ್ಮ ಜ್ಞಾನಾರ್ಜನೆಗಾಗಿ ಮತ್ತು ಜಗತ್ತಿನ ಜ್ಞಾನಪರಂಪರೆಗಳನ್ನು ಅಧ್ಯಯನ ಮಾಡಲು, ಈ ಜ್ಞಾನ ಪರಂಪರೆಗಳ ಫಲಾನುಭವಿಗಳಾಗಬೇಕಾದ ಸಮಾಜ ದ ಅವಕಾಶ ವಂಚಿತ, ಶೋಷಿತ ಸಮುದಾಯಗಳ ನಡುವೆಯೇ ಸಂಚರಿಸಿ ಭೌತಿಕ ಜಗತ್ತಿನ ವಾಸ್ತವಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ ಜಂಗಮ ಸಂನ್ಯಾಸಿ. ತಮ್ಮ ವಿಶ್ವಪರ್ಯಟನದ ಸಂದರ್ಭದಲ್ಲೇ ತಾವು ಕಂಡುಕೊಂಡ ಜಗತ್ತಿನ ವಾಸ್ತವಗಳಿಗೆ ವಿಮುಖರಾಗದೆ, ತಮ್ಮ ಆಧ್ಯಾತ್ಮಿಕ ಚಿಂತನೆಗಳ ಮೂಲಕ ತುಳಿತಕ್ಕೊಳಗಾದ ಜನಸಾಮಾನ್ಯರ ಬೌದ್ಧಿಕ ವಿಕಸನಕ್ಕೆ ಒಂದು ಬುನಾದಿಯನ್ನು ಹಾಕಿಕೊಟ್ಟ ಸಂತ. ಈ ಬುನಾದಿಯನ್ನು ನಿರ್ಮಿಸಲು ಅವರು ಅವಲಂಬಿಸಿದ ಅಸ್ತ್ರ ಎಂದರೆ ಶಿಕ್ಷಣ. ವಿಶೇಷವಾಗಿ ಭಾರತದಲ್ಲಿ ಹೆಣ್ಣುಮಕ್ಕಳ ಶಿಕ್ಷಣ. ವಿವೇಕರ ಸಾಹಿತ್ಯವನ್ನು 'ಓದಿರುವ' ಯಾರಿಗೇ ಆದರೂ ಇದು ಅರ್ಥವಾಗಿರಲೇಬೇಕಲ್ಲವೇ?

ಈ ಸಂತನ ಸ್ಮಾರಕ ನಿರ್ಮಿಸಲು, ಬೌದ್ಧಿಕ ಶಕ್ತಿಕೇಂದ್ರವೊಂದನ್ನು ಕೆಡವಿ, ಸಮಾಧಿ ಕಟ್ಟುವುದು ಮನುಷ್ಯ ವಿವೇಚನೆಯ ವ್ಯಾಪ್ತಿಯಿಂದ ಹೊರತಾದ ಆಲೋಚನೆಯೇ ಆಗಿರಬೇಕು. ತಾವು ತಂಗಿದ್ದ ಅಥವಾ ಕಾಲಿಟ್ಟ ಕಡೆಯೆಲ್ಲಾ ತಮ್ಮ ಹೆಸರಿನ ಸ್ಮಾರಕ/ಸ್ಥಾವರ ನಿರ್ಮಾಣವಾಗುವ ಭಾರತ ವಿವೇಕಾನಂದರ ಕನಸಿನ ಭಾರತವಾಗಿರಲಿಲ್ಲ. ಅವರ ಕನಸಿನ ಭಾರತ ಈ ಸ್ಥಾವರಗಳನ್ನು ಮೀರಿದ ಒಂದು ಬೌದ್ಧಿಕ ಭಂಡಾರವಾಗಬೇಕಲ್ಲವೇ? ದುರದೃಷ್ಟಕರ ಸಂಗತಿ ಎಂದರೆ 'ಆತ್ಮನಿರ್ಭರ' ಭಾರತ ಈ ವಿವೇಚನೆಯನ್ನು ಕಳೆದುಕೊಂಡಿದೆ. ಇಂದಿನ ಮಾರುಕಟ್ಟೆ ವ್ಯವಸ್ಥೆಯ ಆವರಣದಲ್ಲಿ, ಆಳುವವರಲ್ಲಿ ವಿವೇಚನೆಯನ್ನು ಅಪೇಕ್ಷಿಸುವುದು ಬಹುಶಃ ಅತಿಶಯ ಎನಿಸಬಹುದು. ಆದರೆ ಈ ಮಾರುಕಟ್ಟೆಯ ಫಲಾನುಭವಿಗಳಲ್ಲಾದರೂ ವಿವೇಚನೆ ಇರಬೇಕಲ್ಲವೇ?

ಶತಮಾನದ ಶಾಲೆಯೊಂದರಲ್ಲಿ "ಸರಸ್ವತಿ ಶೋ ಮುಗಿಸುವುದನ್ನು" ಸಂಭ್ರಮಿಸುವ ಸಾಹಿತ್ಯವಲಯ ಈ ಕುರಿತು ಯೋಚಿಸಬೇಕು. ರಾಜಕೀಯ ವಲಯದಿಂದ ಹೆಚ್ಚಿನದನ್ನೇನೂ ನಿರೀಕ್ಷಿಸಲಾಗದು. ಜಾತಿ ಸಮೀಕರಣದ ಮೂಲಕ ತಮ್ಮ ನಿವೇಶನವನ್ನು ಸಂರಕ್ಷಿಸಲು ಸೆಣಸುತ್ತಿರುವ ಯಾವುದೇ ಸಂಘಟನೆಗಳು ಈ ಸೂಕ್ಷ್ಮ ಸಂವೇದನೆ ಹೊಂದಿರುತ್ತವೆ ಎಂದು ನಿರೀಕ್ಷಿಸಲಾಗುವುದಿಲ್ಲ. ಆದರೆ ಸಾರ್ವಜನಿಕ ವಲಯದಲ್ಲಿನ ಸೂಕ್ಷ್ಮ ಮನಸುಗಳು ಇಲ್ಲಿ ಸ್ಪಂದಿಸುತ್ತಿವೆ ಎನ್ನುವುದಕ್ಕೆ ಕಳೆದ ಎಂಬತ್ತು ದಿನಗಳ ಹೋರಾಟವೇ ಸಾಕ್ಷಿ. ವಿಲೀನ ಎನ್ನುವ ಪ್ರಕ್ರಿಯೆಯಲ್ಲಿ ಒಂದರ ಅವಸಾನವೂ ಅಡಗಿರುತ್ತದೆ ಎಂಬ ವಿವೇಕವೂ ನಮಗಿರಬೇಕು. ಈ ಶಾಲೆಯನ್ನು ಮತ್ತೊಂದರಲ್ಲಿ ವಿಲೀನಗೊಳಿಸುವ 'ಔದಾರ್ಯ' ತೋರುವವರಿಗೂ ವಿವೇಚನೆ ಇರಬೇಕು. ತಮ್ಮ ಅಧ್ಯಾತ್ಮ ಮಾರುಕಟ್ಟೆಯ ವಿಸ್ತರಣೆಯಿಂದಾಚೆಗೆ ಯೋಚಿಸದ ರಾಮಕೃಷ್ಣ ಮಠದಿಂದ ಇದನ್ನು ನಿರೀಕ್ಷಿಸುವುದು ಅತಾರ್ಕಿಕ.

ಒಬ್ಬ ವ್ಯಕ್ತಿಯ ಸಾವನ್ನು ಸಂಭ್ರಮಿಸಿ ಪಟಾಕಿ ಸಿಡಿಸುವ ಸಮಾಜದಲ್ಲಿ ಶಾಲೆಯ ಅವಸಾನವನ್ನು ಸಂಭ್ರಮಿಸಿ ಪಟಾಕಿ ಸಿಡಿಸುವುದು ಅಚ್ಚರಿ ಮೂಡಿಸುವ ಅಂಶವೇನಲ್ಲ. ರಾಮಕೃಷ್ಣ ಮಠದ ಪದಾಧಿಕಾರಿಗಳು ಮತ್ತು ವಿವೇಕಾನಂದರ ಅನುಯಾಯಿ ಸರಸ್ವತಿ ಪುತ್ರರು "ಶೋ ಮುಗಿಸಿದ ಸರಸ್ವತಿ"ಯ ಬಗ್ಗೆ ಕೆಲ ಕ್ಷಣಗಳಾದರೂ ಯೋಚಿಸಲಿ. "ಶಾಲೆಯ ಪ್ರದೇಶದ ಹಸ್ತಾಂತರ ಕುರಿತ ತನ್ನ ಆದೇಶವನ್ನು ಪಾಲಿಸಲು ಸರ್ಕಾರಕ್ಕೆ ಯಾವ ತೊಡಕೂ ಇಲ್ಲ" ಎಂದು ದಿಗ್ವಿಜಯದ ನಗೆ ಬೀರಿರುವ ರಾಮಕೃಷ್ಣ ಮಠದ ಸ್ವಾಮಿ ಮುಕ್ತಿದಾನಂದರ ಆಶಯವನ್ನು ಈಡೇರಿಸಲು ತುದಿಗಾಲಲ್ಲಿ ನಿಂತಿರುವ ಆಡಳಿತ ವ್ಯವಸ್ಥೆಗೆ ವಿವೇಕಾನಂದರ 'ವಿವೇಕಪ್ರಜ್ಞೆ'ಯೇ ಕಣ್ತೆರಸಲಿ. ಇಲ್ಲವಾದರೆ ಹೋರಾಟವೊಂದೇ ಪ್ರತ್ಯುತ್ತರವಾದೀತು.





ತಿರುವನಂತಪುರದಲ್ಲಿ ಸ.20ರಂದು ನಡೆದ ಧಾರ್ಮಿಕ ಮುಖಂಡರುಗಳ ಸಭೆಯಲ್ಲಿ...

**ಮುಸ್ಲಿಮರ ವಿರುದ್ಧ ದನಿ ಗಟ್ಟಿಗೊಳಿಸಲು ಮತ್ತು ಕ್ರೈಸ್ತ ಪಾದ್ರಿಗಳನ್ನು ತನ್ನತ್ತ ಸೆಳೆಯಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಗಮನ ಕೇಂದ್ರೀಕರಿಸುತ್ತಿದೆ. ಕಳೆದ ವಿಧಾನಸಭೆ ಚುನಾವಣೆಗೂ ಮುಂಚೆ ಪ್ರಧಾನಿ ನರೇಂದ್ರ ಮೋದಿ ಕೇರಳದ ವಿವಿಧ ಚರ್ಚ್‌ಗಳ ಮುಖಂಡರನ್ನು ಭೇಟಿ ಮಾಡಿದ್ದರು. ಆದರೂ ಈ ಕೂಟಕ್ಕೆ ಯಶಸ್ಸು ಸಿಗುತ್ತಿಲ್ಲ. ಪಾಲಾ ಬಿಷಪ್ ಹೇಳಿಕೆಯ ಸಂದರ್ಭದಲ್ಲಿ ಕ್ಯಾಥೊಲಿಕ್ ಚರ್ಚ್ ಮತ್ತು ಇತರ ಕ್ರೈಸ್ತ ಪಂಥದ ಒಳಗಡೆಯಿಂದಲೇ 'ಇಸ್ಲಾಮ್ ಭೀತಿ'ಯ ಅಪಾಯದ ಮತ್ತು ಹಿಂದುತ್ವ ಶಕ್ತಿಗಳ ವಿಭಜನಕಾರಿ ತಂತ್ರಗಳ ವಿರುದ್ಧ ದನಿ ಕೇಳಿ ಬರುತ್ತಿರುವುದು ಸಂತಸದ ಸಂಗತಿಯಾಗಿದೆ.**



## * ಪ್ರಕಾಶ್ ಕಾರಟ್

# ಕೇರಳದಲ್ಲಿ ಕೋಮು ವಿಭಜನೆಗೆ ನಕಾರ

ಕೇರಳದ ಸಾಮಾಜಿಕ ಸಂಯೋಜನೆ ತುಂಬಾ ಅದ್ವಿತೀಯ. ರಾಜ್ಯದ ಜನಸಂಖ್ಯೆಯ ಶೇಕಡ 45ರಷ್ಟು ಜನರು ಮುಸ್ಲಿಮರು ಹಾಗೂ ಕ್ರೈಸ್ತರು. ಮೂರೂ ಧಾರ್ಮಿಕ ಸಮುದಾಯಗಳ ಸಾಮಾಜಿಕ ಬಂಧ ಹಾಸುಹೊಕ್ಕಾಗಿರುವುದು ಕೂಡ ಕೇರಳದ ವಿಶಿಷ್ಟತೆ. ಎಲ್ಲರೂ ಶಾಂತಿಯುತ ಸಹಬಾಳ್ವೆ ನಡೆಸುತ್ತಿದ್ದಾರೆ. ಮಲಯಾಳಿ ಅಸ್ಮಿತೆಯು ಈ ಎಲ್ಲ ಧಾರ್ಮಿಕ ಗುಂಪುಗಳ ಸಾಮಾಜಿಕ-ಸಾಂಸ್ಕೃತಿಕ ಗುಣಲಕ್ಷಣಗಳನ್ನು ಸಮೀಕರಿಸಿಕೊಂಡಿದೆ.

ಈ ಸನ್ನಿವೇಶಕ್ಕೆ ಪೂರಕವಾಗಿ ರಾಜಕೀಯದಲ್ಲಿ ಒಂದು ಬಲವಾದ ಜಾತ್ಯತೀತ ಪರಂಪರೆ ಇದೆ. ಅದಕ್ಕೆ ಎಡಪಂಥ ಪ್ರಮುಖ ಕೊಡುಗೆ ನೀಡಿದೆ.

ಇತ್ತೀಚಿನ ವರ್ಷಗಳಲ್ಲಿ, ಬಿಜೆಪಿ-ಆರ್‌ಎಸ್‌ಎಸ್ ಕೂಟದ ಮೂಲಕ ಹಿಂದುತ್ವದ ಗಾಳಿಯು ಈ ಸೌಹಾರ್ದಯುತ ಸಹಬಾಳ್ವೆಯ ವಾತಾವರಣವನ್ನು ಕೆಡಿಸಲು ಪ್ರಯತ್ನಿಸುತ್ತಿದೆ. ಕ್ಯಾಥೊಲಿಕ್ ಚರ್ಚ್‌ನ ಭಾಗವಾಗಿರುವ ಸಿರೋ-ಮಲಬಾರ್ ಚರ್ಚ್‌ನ ಪಾಲಾದ ಬಿಷಪ್ ಜೋಸೆಫ್ ಕಲ್ಲರಂಗತ್ ಮಾಡಿರುವ ಭಾಷಣವನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಕೊಟ್ಟಾಯಂ ಜಿಲೆಯ ಒಂದು ಚರ್ಚ್‌ನಲ್ಲಿ ಮಾಡಿದ ಭಾಷಣದಲ್ಲಿ ಅವರು, ಮುಸ್ಲಿಂ ಉಗ್ರಗಾಮಿ ಶಕ್ತಿಗಳು ನಡೆಸುತ್ತಿರುವ 'ಲವ್ ಜಿಹಾದ್' ಮತ್ತು 'ಮಾದಕದ್ರವ್ಯ ಜಿಹಾದ್' ಬಗ್ಗೆ ಎಚ್ಚರಿಕೆ ನೀಡಿದರು. ಕ್ಯಾಥೊಲಿಕ್ ಚರ್ಚ್ ಈ ಹಿಂದೆಯೇ 'ಲವ್ ಜಿಹಾದ್' ವಿಚಾರ ಎತ್ತಿದ್ದು 'ಮಾದಕದ್ರವ್ಯ ಜಿಹಾದ್' ಹೊಸದಾಗಿದೆ.

ಮುಸ್ಲಿಮೇತರನ್ನು ಹಾಳು ಮಾಡಲು ಜಿಹಾದಿಗಳು ಮಾದಕವಸ್ತುಗಳನ್ನು ಬಳಸುತ್ತಿದ್ದಾರೆ ಎಂದು ಬಿಷಪ್ ಹೇಳಿದ್ದಾರೆ. ಈ ಬೇಕಾಬಿಟ್ಟಿ ಆರೋಪವು ಕೇರಳ ಸಮಾಜದಲ್ಲಿ ಕಳವಳ ಹಾಗೂ ತಪ್ಪುಗ್ರಹಿಕೆಗಳಿಗೆ ಕಾರಣವಾಗಿದೆ.

ದೇಶದ ಬೇರೆ ಭಾಗಗಳಂತೆ ಕೇರಳದಲ್ಲಿ ಕೂಡ ಡ್ರಗ್ ಮಾಫಿಯಾ ಮತ್ತು ಜಾಲಗಳು ಕಾರ್ಯಾಚರಿಸುತ್ತಿವೆ. ಆದರೆ ಅದಕ್ಕೆ ಉಗ್ರಗಾಮಿ ಧಾರ್ಮಿಕ ಗುಂಪುಗಳೊಂದಿಗೆ ಸಂಬಂಧ ಕಲ್ಪಿಸುವುದು ಶುದ್ಧ ತಪ್ಪು. ಇಂಥ ಯಾವುದೇ ಸಂಪರ್ಕ ಇಲ್ಲವೆಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸ್ಪಷ್ಟಪಡಿಸಿದ್ದಾರೆ. 'ಯಾವುದೇ ಧರ್ಮ ಮಾದಕದ್ರವ್ಯವನ್ನು ಪ್ರೋತ್ಸಾಹಿಸುವುದಿಲ್ಲ. ಅದರ ಬಣ್ಣ ಸಮಾಜ-ವಿರೋಧಿಯಾಗಿದೆ' ಎಂದಿದ್ದಾರೆ. 'ಸಾಮಾಜಿಕ ಅನಿಷ್ಟಗಳಿಗೆ ಧಾರ್ಮಿಕ ಬಣ್ಣ ಲೇಪಿಸಬಾರದು' ಎಂದೂ ವಿಜಯನ್ ಹೇಳಿದ್ದಾರೆ.

ಒಟ್ಟಾರೆ ರಾಜಕೀಯ ವಲಯವು 'ಜಿಹಾದಿ ಪಿತೂರಿ' ಸಿದ್ಧಾಂತವನ್ನು ತಳ್ಳಿ ಹಾಕಿರುವಾಗ ಬಿಜೆಪಿ ಮಾತ್ರ ಬಿಷಪ್‌ರ ನಿಲುವಿಗೆ ಬೆಂಬಲ ನೀಡಿದೆ. ಜಿಹಾದಿಗಳ ಚಟುವಟಿಕೆಗಳ ವಿರುದ್ಧ ಒಂದು ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಬಿಜೆಪಿಗೆ ಇದು ಮುಸ್ಲಿಮರು ಮತ್ತು ಕ್ರೈಸ್ತರ ನಡುವೆ ಕಂದಕ ಮೂಡಿಸಿ "ಇಸ್ಲಾಮ್‌ಭೀತಿ" ಸೃಷ್ಟಿಸಲು ಒಂದು ಉತ್ತಮ ಅವಕಾಶವಾಗಿ ಕಂಡಿದೆ.

'ಲವ್ ಜಿಹಾದ್'ಗೆ ಸಂಬಂಧಿಸಿ ಹೇಳುವುದಾದರೆ, ಕೇರಳದಲ್ಲಿ ಕೆಲವು ವರ್ಷಗಳ ಹಿಂದೆ 21 ಜನರು ತಮ್ಮ ಮನೆ ಹಾಗೂ ಕುಟುಂಬಗಳನ್ನು ತೊರೆದು ಭಯೋತ್ಪಾದಕ ಸಂಘಟನೆ ಐಎಸ್‌ಐಎಸ್-ಖೊರಾಸನ್ ಸೇರಲು ಅಫ್ಘಾನಿಸ್ತಾನಕ್ಕೆ ತೆರಳಿದ ಕಳವಳಕಾರಿ ವಿದ್ಯಮಾನ ನಡೆದಿತ್ತು. ಆ ಪೈಕಿ ಇಸ್ಲಾಂಗೆ ಮತಾಂತರಗೊಂಡ ಇಬ್ಬರು ಕ್ರೈಸ್ತ ಮಹಿಳೆಯರಿದ್ದು ಅವರು ಅಫ್ಘಾನಿಸ್ತಾನಕ್ಕೆ ತೆರಳಲು ತಮ್ಮ ಗಂಡಂದಿರ ಜೊತೆ ಸೇರಿದ್ದರು. ಆ ಇಬ್ಬರು ಮಹಿಳೆಯರಲ್ಲಿ ಒಬ್ಬರು ವಾಸ್ತವವಾಗಿ ಕ್ರಿಶ್ಚಿಯನ್ ಪುರುಷನನ್ನೇ ಮದುವೆಯಾಗಿ ಇಬ್ಬರೂ ಇಸ್ಲಾಂಗೆ ಧರ್ಮಾಂತರಗೊಂಡಿದ್ದರು. ಈ ಜನರನ್ನು ನೇಮಿಸಿಕೊಂಡು ಅವರಲ್ಲಿ ಉಗ್ರವಾದಿ ಸಿದ್ಧಾಂತ ತುರುಕುವುದರ ಹಿಂದೆ ಜಿಹಾದಿ ನೆಟ್‌ವರ್ಕ್ ಕೆಲಸ ಮಾಡಿತ್ತು.

ಈ ಇಬ್ಬರು ಯುವ ಮಹಿಳೆಯರು ಮತಾಂತರಗೊಂಡು ಧಾರ್ಮಿಕ ಉಗ್ರಗಾಮಿತ್ವದಿಂದ ಪ್ರಭಾವಿತರಾಗಿದ್ದಕ್ಕೆ ಕ್ಯಾಥೊಲಿಕ್ ಚರ್ಚ್ ಕಳವಳ ವ್ಯಕ್ತಪಡಿಸುವುದನ್ನು ಅರ್ಥ ಮಾಡಿಕೊಳ್ಳಬಹುದು. ಇಂಥ ಉಗ್ರಗಾಮಿ ಸಿದ್ಧಾಂತಕ್ಕೆ ಬಲಿಯಾಗದಂತೆ ಧಾರ್ಮಿಕ ಸಭೆಗಳಲ್ಲಿ ಎಚ್ಚರಿಕೆ ನೀಡುವುದು ಕೂಡ ಸರಿಯಾಗಿದೆ. ಆದರೆ, ಇವುಗಳು ಕೆಲವೇ ಅಪರೂಪದ ಪ್ರಕರಣಗಳಾಗಿವೆ. ಮುಸ್ಲಿಮೇತರ ಮಹಿಳೆಯರನ್ನು ಆಕರ್ಷಿಸಲು 'ಲವ್ ಜಿಹಾದ್'ನಂಥ ಸಂಘಟಿತ ಯತ್ನ ನಡೆದಿರಲಿಲ್ಲ ಎಂಬುದು ರಾಜ್ಯ ಪೊಲೀಸರು ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸಿದ ತನಿಖೆಗಳಿಂದ ತಿಳಿದು ಬಂದಿತ್ತು.

ವಿವಿಧ ಧಾರ್ಮಿಕ ಮತ್ತು ಜಾತಿ ಸಂಘಟನೆಗಳು 'ಲವ್ ಜಿಹಾದ್' ಬಗ್ಗೆ ಮಾತನಾಡುವಾಗ ಬಳಸುವ 'ನಮ್ಮ ಮಹಿಳೆಯರು' ಮತ್ತು 'ನಮ್ಮ ಹುಡುಗಿಯರು' ಎಂಬ ಪರಿಭಾಷೆಯು ಕೂಡ ತೀರಾ ಕಳವಳಕಾರಿಯಾದುದು. ಅವುಗಳು ಮಹಿಳೆಯರ ಮೇಲೆ ಪಿತೃಪ್ರಧಾನ ಹಾಗೂ ಆಸ್ತಿಹಕ್ಕಿನಿಂದ ಪ್ರೇರಿತ ಕಲ್ಪನೆಗಳಾಗಿವೆ. ಪ್ರೇಮ ಮತ್ತು ಮದುವೆ ವಿಚಾರದಲ್ಲಿ ಮಹಿಳೆಯರಿಗೆ ತಮ್ಮದೇ ಆದ ಅಭಿಪ್ರಾಯ ಹಾಗೂ ಆಯ್ಕೆಗಳನ್ನು ನಿರಾಕರಿಸುವ ಪರೋಕ್ಷ ಧ್ವನಿಯೂ ಅದರಲ್ಲಿ ಅಡಗಿದೆ.

ಮುಸ್ಲಿಮರ ವಿರುದ್ಧ ದನಿ ಗಟ್ಟಿಗೊಳಿಸಲು ಮತ್ತು ಕ್ರೈಸ್ತ ಪಾದ್ರಿಗಳನ್ನು ತನ್ನತ್ತ ಸೆಳೆಯಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಗಮನ ಕೇಂದ್ರೀಕರಿಸುತ್ತಿದೆ. ಕಳೆದ ವಿಧಾನಸಭೆ ಚುನಾವಣೆಗೂ ಮುಂಚೆ ಪ್ರಧಾನಿ ನರೇಂದ್ರ ಮೋದಿ ಕೇರಳದ ವಿವಿಧ ಚರ್ಚ್‌ಗಳ ಮುಖಂಡರನ್ನು ಭೇಟಿ ಮಾಡಿದ್ದರು.

ಕೇರಳದ ಕ್ರೈಸ್ತ ಸಮುದಾಯದಲ್ಲಿ ಅತಿ ದೊಡ್ಡ ಭಾಗವಾಗಿರುವ ಕ್ಯಾಥೊಲಿಕ್ ಚರ್ಚ್, ಬಿಜೆಪಿ-ಆರ್‌ಎಸ್‌ಎಸ್‌ನ ನಿಜ ಸ್ವರೂಪವನ್ನು ತಿಳಿದುಕೊಳ್ಳುವುದು ಅಗತ್ಯ. ಮುಸ್ಲಿಮರೇ ಆಗಿರಲಿ ಕ್ರೈಸ್ತರೇ ಆಗಿರಲಿ, ಒಟ್ಟಾರೆಯಾಗಿ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಹಿಂದುತ್ವ ಶಕ್ತಿಗಳು ನಿರಂತರವಾಗಿ ಪ್ರಚಾರ ನಡೆಸುತ್ತಿವೆ. 2016ರಿಂದ 2019ರ ವರೆಗಿನ 'ಪ್ರಾಸಿಕ್ಯೂಷನ್ ರಿಲೀಫ್' ವರದಿ ಪ್ರಕಾರ, ದೇಶದಾದ್ಯಂತ ಕ್ರೈಸ್ತರ ವಿರುದ್ಧ 1774 ದ್ವೇಷದ ಅಪರಾಧ ಕೃತ್ಯಗಳು ನಡೆದಿವೆ. 2016ರಿಂದೀಚೆಗೆ ಕ್ರೈಸ್ತರ ವಿರುದ್ಧ ದ್ವೇಷದ ಅಪರಾಧ ಕೃತ್ಯಗಳಲ್ಲಿ ಶೇಕಡ 59.6ರಷ್ಟು ಏರಿಕೆಯಾಗಿದೆ.

ಕೋಮುವಾದಿ ವಿಭಜನೆಗೆ ಬಿಜೆಪಿ-ಆರ್‌ಎಸ್‌ಎಸ್ ಕೂಟ ನಿರಂತರವಾಗಿ ಪ್ರಯತ್ನಿಸುತ್ತದೆ. ಆರ್‌ಎಸ್‌ಎಸ್ ಸಂಘಟನೆಗಳು ಪ್ರತಿ ವರ್ಷ ಸೆಪ್ಟೆಂಬರ್ 25ನ್ನು "ಮಲಬಾರ್ ಹಿಂದೂ ನರಹತ್ಯೆ ದಿನ'ವಾಗಿ ಆಚರಿಸುತ್ತವೆ. 1921ರ ಮಲಬಾರ್ ಬಂಡಾಯವನ್ನು ವಿಕೃತವಾಗಿ ಬಿಂಬಿಸುವುದೇ ಅವುಗಳ ಉದ್ದೇಶವಾಗಿದೆ. ಮಲಬಾರ್ ಬಂಡಾಯವು ಬ್ರಿಟಿಷ್ ಆಡಳಿತ ಮತ್ತು ಮುಸ್ಲಿಂ ರೈತರನ್ನು ಶೋಷಿಸುತ್ತಿದ್ದ ಭೂಮಾಲಿಕ ವ್ಯವಸ್ಥೆಯ ವಿರುದ್ಧ ನಡೆದ ಬಂಡಾಯವಾಗಿದೆ. ಆದರೆ ಮಲಬಾರ್ ಬಂಡಾಯವು ಹಿಂದೂ-ವಿರೋಧಿ ಮಾತ್ರವಲ್ಲದೆ ಕ್ರಿಶ್ಚಿಯನ್-ವಿರೋಧಿಯೂ ಆಗಿದೆ ಎಂದು ಹೇಳಿ ಕೇರಳದಲ್ಲಿ ಕ್ರೈಸ್ತರ ಸಹಾನುಭೂತಿ ಪಡೆಯಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ. ಕ್ಯಾಥೊಲಿಕ್ ಚರ್ಚ್ ಮತ್ತು ಇತರ ಕ್ರೈಸ್ತ ಪಂಥದ ಒಳಗಡೆಯಿಂದಲೇ 'ಇಸ್ಲಾಮ್ ಭೀತಿ'ಯ ಅಪಾಯದ ಮತ್ತು ಹಿಂದುತ್ವ ಶಕ್ತಿಗಳ ವಿಭಜನಕಾರಿ ತಂತ್ರಗಳ ವಿರುದ್ಧ ದನಿ ಕೇಳಿ ಬರುತ್ತಿರುವುದು ಸಂತಸದ ಸಂಗತಿಯಾಗಿದೆ. ಚರ್ಚ್ ನಾಯಕರು ಸಂಘಪರಿವಾರದ ತಂತ್ರದ ಖೆಡ್ಡಾಕ್ಕೆ ಬೀಳುವ ಅಪಾಯದ ಸಾಧ್ಯತೆ ಬಗ್ಗೆ ಮೊದಲಿಗೆ ಎಚ್ಚರಿಕೆ ಕೊಟ್ಟವರು ಮಲಂಕರ ಆರ್ಥೊಡಾಕ್ಸ್ ಸಿರಿಯನ್ ಚರ್ಚ್‌ನ ತ್ರಿಶೂರ್ ಡಯಾಸಿಸ್‌ನ ಮೆಟ್ರೋಪಾಲಿಟನ್ ಯೊಹಾನನ್ ಮೊರ್ ಮೆಲೆಟಿಯಸ್.

ಬಹುಸಂಖ್ಯಾತವಾದಿ ಕೋಮುವಾದದ ಹಿಂದುತ್ವ ಆವೃತ್ತಿಯು ಒಡ್ಡಿರುವ ಅಪಾಯದ ಬಗ್ಗೆ ಕೇರಳದ ಸಿಪಿಐ(ಎಂ)ಗೆ ಸ್ಪಷ್ಟವಾದ ಅರಿವಿದೆ. ಬಿಜೆಪಿ-ಆರ್‌ಎಸ್‌ಎಸ್ ಕೂಟವನ್ನು ರಾಜಕೀಯ ಹಾಗೂ ಸೈದ್ಧಾಂತಿಕವಾಗಿ ಹಣಿಯಲು ಎಲ್ಲ ಜಾತ್ಯತೀತ-ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿಗೊಳಿಸುವುದು ಅದರ ಉದ್ದೇಶವಾಗಿದೆ. ಆ ರೀತಿ ಮಾಡುವಾಗಲೇ, ಮುಸ್ಲಿಮರ ನಡುವೆ ಉಗ್ರಗಾಮಿ ಸಂಘಟನೆಗಳು ಮತ್ತು ಸಿದ್ಧಾಂತಗಳು ಒಡ್ಡಿರುವ ಅಪಾಯದ ಅರಿವೂ ಪಕ್ಷಕ್ಕಿದೆ. ಅವುಗಳಲ್ಲಿ ಕೆಲವು ವಿದೇಶಗಳಲ್ಲಿನ ಇಸ್ಲಾಮಿಕ್ ಉಗ್ರವಾದಿತ್ವದ ಉತ್ಪನ್ನಗಳಾಗಿವೆ.

ಕ್ರೈಸ್ತರ ನಡುವೆ ಕೂಡ ಸಣ್ಣ ಪ್ರಮಾಣದಲ್ಲಿ ಉಗ್ರವಾದಿ ನಿಲುವು ಕಂಡು ಬಂದಿದೆ. ಹೆಚ್ಚುತ್ತಿರುವ ಧಾರ್ಮಿಕತೆ ಮತ್ತು ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಂದ ಸಮಾಜದಲ್ಲಿ ಉಂಟಾಗುತ್ತಿರುವ ಅಭದ್ರತೆಗಳಿಂದಾಗಿ ಜಾತ್ಯತೀತ ಬಂಧವನ್ನು ನಾಶ ಮಾಡಲು ಹಾಗೂ ಅಂತರ್-ಧರ್ಮೀಯ ಬಿಗುವುಗಳನ್ನು ಹೆಚ್ಚಿಸಲು ಸತತ ಪ್ರಯತ್ನಗಳು ನಡೆಯುತ್ತಿವೆ.

ಬಿಷಪ್‌ರ ಭಾಷಣದ ಪ್ರಸಕ್ತ ಪ್ರಸಂಗವು ಸಾಮಾಜಿಕ ಮಾಧ್ಯಮಗಳಲ್ಲಿ ವಿವಿಧ ಬಗೆಯ ಸ್ಪಂದನೆ-ಪ್ರತಿ-ಸ್ಪಂದನೆಗಳನ್ನು ಕಂಡಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅತ್ಯಂತ ವಿಷಕಾರೀ ಮತ್ತು ಪ್ರಚೋದನಕಾರಿ ಕೋಮುವಾದಿ ಅಂಶಗಳನ್ನು ಮಟ್ಟ ಹಾಕಲು ಮುಂದಾಗುವುದು ಸರ್ಕಾರದ ಕರ್ತವ್ಯವಾಗಿದೆ. ಅದೇ ವೇಳೆಗೆ, ಎಲ್ಲ ಕ್ಷೇತ್ರಗಳಲ್ಲಿ ಕೋಮುವಾದಿ ಹಾಗೂ ವಿಭಜನಕಾರಿ ಶಕ್ತಿಗಳನ್ನು ಎದುರಿಸುವುದು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಮುಖ ಕಾರ್ಯಭಾರವಾಗಿದೆ. ಸಮಾಜದ ಎಲ್ಲ ಪ್ರಗತಿಪರ ಶಕ್ತಿಗಳ ಸಹಕಾರ ಪಡೆದು ಅದನ್ನು ಮಾಡಬೇಕಾಗಿದೆ.

**ಅನು: ವಿಶ್ವ**

ಪಾಲ ಬಿಷಪ್ ಜೋಸೆಫ್ ಕಲ್ಲರಂಗಟ್ಟ್ ಅವರ 'ಮಾದಕ ದ್ರವ್ಯ ಜಿಹಾದ್' ಹೇಳಿಕೆ ವಿವಾದ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಕೇರಳದ ಎಡರಂಗ ಸರ್ಕಾರದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಬಿಷಪ್ ಹೇಳಿಕೆ ದುರಾದೃಷ್ಟಕರ ಎಂದರಲ್ಲದೆ ಇಂತಹ ಹೇಳಿಕೆಗೆ ಯಾವುದೇ ಆಧಾರವಿಲ್ಲ ಹಾಗೂ ಧಾರ್ಮಿಕ ಮತಾಂತರ ಮತ್ತು ಡ್ರಗ್ಸ್ ಕಳ್ಳಸಾಗಣಿಕೆ ಕುರಿತಾದ ಅಂಕಿಅಂಶಗಳನ್ನು ಪರಿಶೀಲಿಸಿದಾಗ ರಾಜ್ಯದ ಅಲ್ಪಸಂಖ್ಯಾತ ಧರ್ಮಗಳು ಅದರಲ್ಲಿ ಯಾವುದೇ ವಿಶೇಷ ಶಾಮೀಲಾತಿ ಹೊಂದಿಲ್ಲ ಎಂದು ತಿಳಿದು ಬರುತ್ತದೆ ಎಂದರು.



"ರಾಜ್ಯದಲ್ಲಿ 2020ರಲ್ಲಿ ನಾರ್ಕಾಟಿಕ್ ಡ್ರಗ್ಸ್ ಎಂಡ್ ಸೈಕೋಟ್ರೋಪಿಕ್ ಸಬ್‌ಸ್ಟನ್ಸಸ್ ಆಕ್ಟ್ ಅನ್ವಯ 4,941 ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳ 5,422 ಆರೋಪಿಗಳ ಪೈಕಿ 2,700 (ಶೇ 49.80) ಹಿಂದುಗಳು, 869 (ಶೇ 34.47) ಮುಸ್ಲಿಮರು ಮತ್ತು 853 (ಶೇ 15.73) ಕ್ರೈಸ್ತರಾಗಿದ್ದಾರೆ. ಈ ಅನುಪಾತದಲ್ಲಿ ಯಾವುದೇ ಅಸಹಜತೆಯಿಲ್ಲ, ಡ್ರಗ್ಸ್ ಕಳ್ಳಸಾಗಣಿಕೆ ಧರ್ಮದ ಆಧಾರದಲ್ಲಿ ನಡೆಯುವುದಿಲ್ಲ," ಎಂದು ಪಿಣರಾಯಿ ವಿಜಯನ್ ಹೇಳಿದರು.

# ‘ಕೆಟ್ಟ ಬ್ಯಾಂಕ್’ ಮೂಲಕ ಸಂಪತ್ತಿನ ವರ್ಗಾವಣೆ




**‘ಕೆಟ್ಟಬ್ಯಾಂಕ್’ ಎಂಬ ಪರಿಕಲ್ಪನೆ ಸರಕಾರ ತನ್ನದೇ ಧೋರಣೆಗಳು ಸೃಷ್ಟಿಸಿರುವ ಒಂದು ಬಿಕ್ಕಟ್ಟಿನಿಂದ ಕೈತೊಳೆದು ಕೊಳ್ಳುವ ಒಂದು ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಒಟ್ಟಾರೆಯಾಗಿ, ಯಾವುದೇ ರೀತಿಯಲ್ಲಿ ಸುಣ್ಣ-ಬಣ್ಣ ಹೊಡೆದರೂ, ಕೆಟ್ಟ ಸಾಲ ಮತ್ತು ಅವುಗಳನ್ನು ನಿಭಾಯಿಸುವ ಯೋಜನೆಗಳು, ಕೆಲವೇ ಕಾರ್ಪೊರೇಟ್ ಮನೆತನಗಳಿಗೆ, ಉಳಿದವರ ಹಿತವನ್ನು ಬಲಿಗೊಟ್ಟು ಸಂಪತ್ತನ್ನು ವರ್ಗಾಯಿಸುವಂತೆ ಮಾಡುವ ಸಾಧನಕ್ಕಿಂತ ಹೆಚ್ಚೇನೂ ಅಲ್ಲ.**

ಮೋದಿ ಸರಕಾರ, ಬ್ಯಾಂಕುಗಳು, ವಿಶೇಷವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳು, ತಮ್ಮ ಲೆಕ್ಕ ಪುಸ್ತಕಗಳನ್ನು ‘ಸ್ವಚ್ಛ’ಗೊಳಿಸಲು ಇನ್ನೊಂದು ಯೋಜನೆ ಹಾಕಿಕೊಂಡಿದೆ, ಆಮೂಲಕ ಅವು ‘ಕೆಟ್ಟು’ಹೋಗಿರುವ 2 ಲಕ್ಷ ಕೋಟಿ ರೂ.ಗಳ ಸಾಲಗಳನ್ನು ನಿವಾರಿಸಿಕೊಳ್ಳಲು ನೆರವಾಗುವ ಯೋಜನೆ. ಈ ಉದ್ದೇಶಕ್ಕಾಗಿ ಅದು ಎರಡು ಸಂಸ್ಥೆಗಳನ್ನು ರಚಿಸುವುದಾಗಿ ಪ್ರಕಟಿಸಿದೆ. ರಾಷ್ಟ್ರೀಯ ಆಸ್ತಿ ಮರುನಿರ್ಮಾಣ ಕಂಪನಿ ಲಿ.(National Asset Reconstruction Company Ltd -NARCL), ಅಥವ, ಆಡುಮಾತಿನಲ್ಲಿ “ಕೆಟ್ಟ ಬ್ಯಾಂಕ್”, ಬ್ಯಾಂಕುಗಳ ಕೆಟ್ಟ ಆಸ್ತಿಗಳನ್ನು ವಹಿಸಿಕೊಳ್ಳುತ್ತದೆ. ‘ಭಾರತೀಯ ಸಾಲ ವಿಲೇವಾರಿ ಕಂಪನಿ ಲಿ. (Indian Debt Resolution Company Ltd -IDRCL) ಈ ಆಸ್ತಿಗಳನ್ನು ‘ನಿರ್ವಹಿಸು’ತ್ತದೆ; ಅಗತ್ಯ ಪರಿಣತಿಯಿಂದ ಸಜ್ಜುಗೊಂಡಿರುವ ಇದು ಬ್ಯಾಂಕುಗಳಿಗೆ ಬರಬೇಕಾದ ಬಾಕಿ ಹಣದಲ್ಲಿ ಸ್ವಲ್ಪವನ್ನು ವಸೂಲಿ ಮಾಡಲು ಅವನ್ನು ‘ಸಾಧ್ಯವಾದಷ್ಟು ಅತ್ಯುತ್ತಮ’ ಬೆಲೆಯಲ್ಲಿ ಮಾರುತ್ತದೆ.

ಇದನ್ನು ಅಪಾರ ಪ್ರಮಾಣದ ಸಾಲ ಸಮಸ್ಯೆಯನ್ನು ಪರಿಹರಿಸುವ ಒಂದು ನವೀನ ವಿಧಾನ ಎಂದು ಪ್ರಸ್ತುತ ಪಡಿಸಲಾಗಿದೆ. ಆದರೆ ಇದು ಸರಕಾರ ತನ್ನದೇ ಧೋರಣೆಗಳು ಸೃಷ್ಟಿಸಿರುವ ಒಂದು ಬಿಕ್ಕಟ್ಟಿನಿಂದ ಕೈತೊಳೆದು ಕೊಳ್ಳುವ ಒಂದು ಪ್ರಯತ್ನವಲ್ಲದೆ ಬೇರೇನೂ ಅಲ್ಲ.

ಭಾರತೀಯ ಸಾಲ ಸಮಸ್ಯೆ ಗಂಭೀರವಾಗಿದೆ. ಏಕೆಂದರೆ, ವಸ್ತುತಃ ಪ್ರಭುತ್ವವು ಬ್ಯಾಂಕಿಂಗ್ ವ್ಯವಸ್ಥೆಯನ್ನು ದೊಡ್ಡ ವ್ಯವಹಾರಸ್ಥರಿಗೆ ದೊಡ್ಡ ಪ್ರಮಾಣದಲ್ಲಿ ಅಯಾಚಿತ ವರ್ಗಾವಣೆಗಳನ್ನು ನಡೆಸಲು ಒಂದು ಸಾಧನವಾಗಿ ಬಳಸಿಕೊಂಡಿದೆ. ಈ ಕೆಟ್ಟ ಆಸ್ತಿಗಳಲ್ಲಿ ಬಹುಪಾಲು ಪ್ರೀತಿಪಾತ್ರ ಕಾರ್ಪೊರೇಟ್‌ಗಳಿಗೆ ಕೊಟ್ಟ ದೊಡ್ಡ ಸಾಲಗಳು, ಅವರು ಅದನ್ನು ತೀರಿಸಬಾರದು ಎಂದಿರುವವುಗಳು. ವ್ಯವಹಾರಗಳಲ್ಲಿ ನಷ್ಟಗಳಾಗಿವೆ ಎಂಬುದು ಸುಸ್ತಿಯಾಗಲು ಕೊಡುವ ಸಾರ್ವಜನಿಕ ಸಮರ್ಥನೆಗಳು. ಆದರೆ ಹಲವಾರು ಪ್ರಕರಣಗಳಲ್ಲಿ, ಬ್ಯಾಂಕುಗಳಿಗೆ ಬರಬೇಕಾದ ಬಾಕಿಗಳು ಬರದೇ ಹೋದರೂ, ಪ್ರಾಯೋಜಕರು ಮಾತ್ರ ತಮ್ಮ ಸಂಪತ್ತು ಹೆಚ್ಚಿಸಕೊಂಡುದಕ್ಕೆ ಸಾಕಷ್ಟು ಪುರಾವೆಗಳಿವೆ. ಸುಸ್ತಿದಾರ ಕಂಪನಿ ಮತ್ತು ಅದರ ಪ್ರಾಯೋಜಕರಿಂದ, ಅವರು ಕೊಟ್ಟ ಗ್ಯಾರಂಟಿಗಳು ಮತ್ತು ಪೂರಕ ಭದ್ರತೆಗಳ ಆಧಾರದಲ್ಲಿ ವಸೂಲಾಗುವ ಮೊತ್ತ ಅತ್ಯಲ್ಪ. ಈ ವಸೂಲಿ, ಅದು ಇನ್ನೂ ಕಾರ್ಯನಿರ್ವಹಿಸುವ ಕಂಪನಿಯಾಗಿದ್ದು ಅದರ ಆಸ್ತಿಗಳನ್ನು ವಹಿಸಿಕೊಳ್ಳುವ ಖರೀದಿದಾರರನ್ನು ಪಡೆಯುವುದರ ಮೇಲೆ, ಅಥವ ಅದನ್ನು ಮುಕ್ತಾಯಗೊಳಿಸಲು ಮಾಡುವ ಮಾರಾಟದ ಮೇಲೆ ಅವಲಂಬಿಸಿರುತ್ತದೆ. ಈ ಪ್ರಕ್ರಿಯೆಗೆ ಹಲವು ಪ್ರಕರಣಗಳಲ್ಲಿ ತಡೆ ಬಿದ್ದಿರುತ್ತದೆ, ಇನ್ನು ಕೆಲವದರಲ್ಲಿ ಬಹಳ ದೀರ್ಘ ಎಳೆದು, ಅದರಿಂದ ಸಿಗುವ ಮೊತ್ತ ನಿರಾಸೆ ಉಂಟುಮಾಡುವಷ್ಟು ಅಲ್ಪ ಪ್ರಮಾಣದ್ದು.

ಸರಕಾರ ಈ ಅಧ್ಯಾಯವನ್ನು ಒಂದು ಯಶಸ್ವಿನ ಕತೆಯಾಗಿ ಮುಚ್ಚಿ ಬಿಡಲು ನಿರ್ಧರಿಸಿರುವಂತೆ ಕಾಣುತ್ತದೆ. ಬ್ಯಾಂಕುಗಳನ್ನು, ತಮ್ಮ ಕೆಟ್ಟ ಆಸ್ತಿಗಳನ್ನು ಅಪಾರ ನಷ್ಟಗಳನ್ನು ಸೂಚಿಸುವ ಬೆಲೆಗಳಲ್ಲಿ ಮಾರುವತ್ತ ತಳ್ಳುವುದಕ್ಕಾಗಿಯೇ ಈ ಹೊಸ ಕೆಟ್ಟ ಬ್ಯಾಂಕನ್ನು ರಚಿಸಲಾಗಿದೆ. ಮೊದಲ ಸುತ್ತಿನಲ್ಲಿ, ಬ್ಯಾಂಕುಗಳು ತಮ್ಮ ಲೆಕ್ಕ ಪುಸ್ತಕಗಳಲ್ಲಿ ‘ಪೂರ್ಣವಾಗಿ ಒದಗಿಸಿರುವ’ ರೂ.90,000 ಕೋಟಿಯನ್ನು ಎನ್.ಎ.ಆರ್.ಸಿ.ಎಲ್. ಗೆ ವರ್ಗಾಯಿಸಲಾಗುವುದು. ಬ್ಯಾಂಕುಗಳು ಎಷ್ಟು ಕಡಿಮೆ ಸಿಕ್ಕರೂ ಅದನ್ನು ತಗೊಳ್ಳಲು ಸಿದ್ಧವಾಗಿರುತ್ತವೆ, ಏಕೆಂದರೆ, ನಷ್ಟಗಳನ್ನು ಲೆಕ್ಕಪುಸ್ತಕದಲ್ಲಿ ತೋರಿಸಲಾಗಿದೆ. ಅದಾದ ನಂತರ ಕೆಟ್ಟ ಸಾಲದ ಕಂತೆಗಳನ್ನು ಯಾವ ಸೋಡಿ(ಡಿಸ್ಕೌಂಟ್) ದರದಲ್ಲಿ ಮಾರಲಾಗುವುದು ಎಂಬುದರ ಬಗ್ಗೆ ಚೌಕಾಸಿ ನಡೆಯಬೇಕು. ಇದರಲ್ಲಿ ಬ್ಯಾಂಕುಗಳಿಗೆ





ಈಗ ಈ ಕೆಟ್ಟ ಬ್ಯಾಂಕ್’ ಆ ಸುಸ್ತಿಸಾಲಗಳ ಹೊರೆ ಹೊರುತ್ತಾನೆ! ಅವನು ವಿಫಲನಾದರೆ,

ಇನ್ನೊಬ್ಬನಿದ್ದಾನೆ!

ಯಾರು?

ನೀನೇ, ತೆರಿಗೆದಾರ!

**ವ್ಯಂಗ್ಯಚಿತ್ರ:**
**ಅಲೋಕ್ ನಿರಂತರ್**




ಮೋದಿ ಸರಕಾರದ ಅವಧಿಯಲ್ಲಿ

| ವರ್ಷ | ಸುಸ್ತಿಸಾಲಕ್ಕೆ ಸೇರ್ಪಡೆ | ರೈಟ್ ಆಫ್ |
|---|---|---|
| 2019-20 | 2,38,464 | 1,78,305 |
| 2018-19 | 2,10,531 | 1,83,168 |
| 2017-18 | 4,88,175 | 1,29,503 |
| 2016-17 | 3,27,593 | 81,990 |
| 2015-16 | 3,85,961 | 59,444 |
| 2014-15 | 1,77,860 | 50,978 |
| Total | 18,28,584 | 6,83,388 |

ಯುಪಿಎ-2 ಅವಧಿಯಲ್ಲಿ

| ವರ್ಷ | ಸುಸ್ತಿಸಾಲಕ್ಕೆ ಸೇರ್ಪಡೆ | ರೈಟ್ ಆಫ್ |
|---|---|---|
| 2013-14 | 1,63,920 | 13,794 |
| 2012-13 | 1,19,811 | 7,187 |
| 2011-12 | 93,152 | 2,347 |
| 2010-11 | 58,227 | 5,884 |
| 2009-10 | 44,817 | 2,897 |
| 2008-09 | 24,094 | 0 |
| Total | 5,04,021 | 32,109 |

**ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್**

15ಶೇ. ಆಗಲೇ ಸಿಗುತ್ತದೆ, ಉಳಿದ 85ಶೇ. ಭದ್ರತಾ ರಸೀತಿ(ಸೆಕ್ಯುರಿಟಿ ರಿಸೀಟ್)ಗಳಾಗಿ ಸಿಗುತ್ತದೆ. ಅವನ್ನು ಆಸ್ತಿಗಳ ವಿಲೇವಾರಿ ನಡೆದ ಮೇಲೆ ನಗದಾಗಿ ಬಿಡಿಸಿಕೊಳ್ಳಬಹುದು.

1 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಈ ಎರಡನೇ ಭಾಗ(ಟ್ರಾಂಚ್)ವನ್ನು ಬ್ಯಾಂಕುಗಳು ಮಾರಾಟ ಮಾಡುವಂತೆ ಒತ್ತಾಯಿಸಲು, ಸರಕಾರ ಸಾಲಗಳ ಚೌಕಾಸಿ ಬೆಲೆ ಮತ್ತು ವಾಸ್ತವ ಮಾರಾಟದ ಮೌಲ್ಯ ಇವುಗಳ ನಡುವಿನ ವ್ಯತ್ಯಾಸವನ್ನು ತುಂಬಿ ಕೊಡುವುದರ ಖಾತ್ರಿ ನೀಡುವುದಾಗಿ ಹೇಳಿದೆ. ಭದ್ರತಾ ರಸೀತಿ(ಸೆಕ್ಯುರಿಟಿ ರಿಸೀಟ್)ಗಳನ್ನು ಮೂಲತಃ ಚೌಕಾಸಿ ಮೂಲಕ ಒಪ್ಪಿತ ಸೋಡಿ(ಡಿಸ್ಕೌಂಟ್) ದರದಲ್ಲಿ ಬಿಡಿಸಿ ಕೊಳ್ಳಲಾಗುವುದು. ಯಾವುದೋ ಒಂದು ಅಪಾರದರ್ಶಕ ಲೆಕ್ಕಾಚಾರದ ಆಧಾರದಲ್ಲಿ ಈ ಖಾತ್ರಿ (ಗ್ಯಾರಂಟಿ) ನೀಡಲು ರೂ.30,600

ಭಾರತೀಯ ಸಾಲ ಸಮಸ್ಯೆ ಗಂಭೀರವಾಗಿದೆ. ಏಕೆಂದರೆ, ವಸ್ತುತಃ ಪ್ರಭುತ್ವವು ಬ್ಯಾಂಕಿಂಗ್ ವ್ಯವಸ್ಥೆಯನ್ನು ದೊಡ್ಡ ವ್ಯವಹಾರಸ್ಥರಿಗೆ ದೊಡ್ಡ ಪ್ರಮಾಣದಲ್ಲಿ ಅಯಾಚಿತ ವರ್ಗಾವಣೆಗಳನ್ನು ನಡೆಸಲು ಒಂದು ಸಾಧನವಾಗಿ ಬಳಸಿಕೊಂಡಿದೆ. ಈ ಕೆಟ್ಟ ಆಸ್ತಿಗಳಲ್ಲಿ ಬಹುಪಾಲು ಪ್ರೀತಿಪಾತ್ರ ಕಾರ್ಪೊರೇಟ್‌ಗಳಿಗೆ ಕೊಟ್ಟ ದೊಡ್ಡ ಸಾಲಗಳು, ಅವರು ಅದನ್ನು ತೀರಿಸಬಾರದು ಎಂದಿರುವವುಗಳು. ವ್ಯವಹಾರಗಳಲ್ಲಿ ನಷ್ಟಗಳಾಗಿವೆ ಎಂಬುದು ಸುಸ್ತಿಯಾಗಲು ಕೊಡುವ ಸಾರ್ವಜನಿಕ ಸಮರ್ಥನೆಗಳು. ಆದರೆ ಹಲವಾರು ಪ್ರಕರಣಗಳಲ್ಲಿ, ಬ್ಯಾಂಕುಗಳಿಗೆ ಬರಬೇಕಾದ ಬಾಕಿಗಳು ಬರದೇ ಹೋದರೂ, ಪ್ರಾಯೋಜಕರು ಮಾತ್ರ ತಮ್ಮ ಸಂಪತ್ತು ಹೆಚ್ಚಿಸಕೊಂಡುದಕ್ಕೆ ಸಾಕಷ್ಟು ಪುರಾವೆಗಳಿವೆ.

ಬೇಕಾದೀತೆಂದು ಸರಕಾರ ನಿರ್ಧರಿಸಿದೆ. ಸರಕಾರದ ಆಶ್ವಾಸನೆ ನೈಜವಾಗಿದ್ದರೆ ಬ್ಯಾಂಕುಗಳಿಗೆ ಒಂದು ಹೆಚ್ಚು ಉತ್ತಮವಾದ ಬೆಲೆಯನ್ನು ಕೇಳಲು ಮತ್ತು ಒಂದು ಕಡಿಮೆ ‘ಚೌರ’(ಹೇರ್‌ಕಟ್) ಸಾಧ್ಯವಾಗಬೇಕು.

ಈ ಗ್ಯಾರಂಟಿಯಿಂದಾಗಿ, ಸೆಕ್ಯುರಿಟಿ ರಿಸೀಟ್ ಗಳನ್ನು ಕೆಟ್ಟ ಸಾಲಗಳ ಬೆಂಬಲ ಪಡೆದ ಕೆಟ್ಟ ಆಸ್ತಿಗಳು ಎಂದು ಕಾಣಲಾಗುವುದಿಲ್ಲ. ಅವುಗಳನ್ನು ಲೆಕ್ಕದಲ್ಲಿ ತೋರಿಸ ಬೇಕಾಗಿಲ್ಲವಾದ್ದರಿಂದ ಬ್ಯಾಂಕುಗಳಿಗೆ ಒಂದು ಭಾಗಶಃ ವಿರಾಮ ಸಿಗುತ್ತದೆ. ಆದರೆ ಸಾಲಕ್ಕೆ ನಿರ್ಧರಿಸಿದ ಬೆಲೆಯನ್ನು ಮಾರುಕಟ್ಟೆ ಊರ್ಜಿತಗೊಳಿಸದಿದ್ದರೆ, ಸರಕಾರದ ಗ್ಯಾರಂಟಿ ಕೆಲಸಕ್ಕೆ ಬರುತ್ತದೆ.

ನಷ್ಟವನ್ನು ಅನುಭವಿಸಬೇಕಾದ್ದು ಬ್ಯಾಂಕುಗಳು ಎಂದಾದರೆ ಮತ್ತು ಅವಕ್ಕೆ ಮರುಬಂಡವಾಳ ಸಿಗದಿದ್ದರೆ, ದೊಡ್ಡ ವ್ಯವಹಾರಸ್ಥರಿಗೆ ವರ್ಗಾಯಿಸಿದ ಸಾಲಗಳ ಹೊರೆಯನ್ನು ಸಾಮಾನ್ಯ ಠೇವಣಿದಾರರೇ ಹೊರಬೇಕಾದ ನಿಜವಾದ ಅಪಾಯ ಎದುರಾಗ ಬಹುದು. ಸರಕಾರ ತನ್ನ ಗ್ಯಾರಂಟಿಗಳ ಮೂಲಕ ನಷ್ಟಗಳಿಗೆ ಹಣ ಒದಗಿಸಿದರೆ ಅದರಿಂದ ಸೋಲುಣ್ಣುವವರು ತೆರಿಗೆ ಪಾವತಿ ಮಾಡುವವರು ಮತ್ತು ಸರಕಾರದ ಆ ಪ್ರಮಾಣದ ವೆಚ್ಚದ ಪ್ರಯೋಜನದಿಂದ ವಂಚಿತರಾದ ಸಾಮಾನ್ಯ ನಾಗರಿಕರು.

ಒಟ್ಟಾರೆಯಾಗಿ, ಯಾವುದೇ ರೀತಿಯಲ್ಲಿ ಸುಣ್ಣ-ಬಣ್ಣ ಹೊಡೆದರೂ, ಕೆಟ್ಟ ಸಾಲ ಮತ್ತು ಅವುಗಳನ್ನು ನಿಭಾಯಿಸುವ ಯೋಜನೆಗಳು, ಕೆಲವೇ ಕಾರ್ಪೊರೇಟ್ ಮನೆತನಗಳಿಗೆ, ಉಳಿದವರ ಹಿತವನ್ನು ಬಲಿಗೊಟ್ಟು ಸಂಪತ್ತನ್ನು ವರ್ಗಾಯಿಸುವಂತೆ ಮಾಡುವ ಸಾಧನಕ್ಕಿಂತ ಹೆಚ್ಚೇನೂ ಅಲ್ಲ.

(ಪೀಪಲ್ಸ್ ಡೆಮಾಕ್ರಸಿ’ ಸಂಪಾದಕೀಯ)



# ‘ಆರ್ಥಿಕ ಸುಧಾರಣೆ’ಗಳ ಮೂರು ದಶಕಗಳು

ಸರಿಯಾಗಿ ಮೂರು ದಶಕಗಳ ಹಿಂದೆ 1991ರಲ್ಲಿ ಹರಿಯಬಿಟ್ಟ ನವ-ಉದಾರವಾದಿ ಆರ್ಥಿಕ ಸುಧಾರಣೆಗಳು ದೇಶದಲ್ಲಿ ಆಳವಾದ ಬದಲಾವಣೆಗಳನ್ನು ತಂದಿವೆ- ಅವು ವಿವಿಧ ಜನವಿಭಾಗಗಳ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರಿದೆ. ದುಡಿಯುವ ಜನವಿಭಾಗಗಳ ಮೇಲೆ ಅದರಿಂದಾದ ಪರಿಣಾಮಗಳೇನು, ಇದನ್ನು ಎಡಪಂಥೀಯರು ಹೇಗೆ ಕಾಣುತ್ತಾರೆ. ಈ ಕುರಿತು ಫ್ರಂಟ್‌ಲೈನ್ ಪಾಕ್ಷಿಕ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ ಧವಳೆಯವರ ಸಂದರ್ಶನವನ್ನು ನಡೆಸಿತು. ಅವುಗಳ ಮೊದಲ ಭಾಗಗಳನ್ನು ಕಳೆದ ವಾರ ಈ ಪುಟದಲ್ಲಿ ಪ್ರಕಟಿಸಲಾಗಿತ್ತು. ಅವುಗಳ ಉಳಿದ ಬಾಗಗಳು ಇಲ್ಲಿವೆ:



ಎಡ ಪಂಥೀಯರು ಎಂದಿನಿಂದಲೂ ನವ ಉದಾರವಾದಿ ಸುಧಾರಣೆಗಳನ್ನು ಟೀಕಿಸುತ್ತ ಬಂದಿದ್ದಾರೆ. ಈ ಸುಧಾರಣೆಗಳ 3 ದಶಕಗಳನ್ನು ಗಮನಿಸಿದಾಗ, ಎಡ ಪಂಥೀಯರ ಈ ಟೀಕೆಯು ಸಾಬೀತಾಗಿದೆ ಎಂದು ನೀವು ಹೇಳುತ್ತೀರಾ? 1980 ರ ವರೆಗೂ ಎಡ ಪಂಥೀಯರು ನೆಹರೂ ಅವಧಿಯ ಆರ್ಥಿಕ ನೀತಿಗಳನ್ನು ಸಹ ಟೀಕಿಸಿದ್ದವು. ಹಿಂದಿನ ಕಾಲದ ಟೀಕೆಗಳಿಗೂ, ವರ್ತಮಾನದ ಆರ್ಥಿಕ ನೀತಿಗಳ ಟೀಕೆಗೂ ಇರುವ ಭಿನ್ನತೆ ಏನು? ಆರ್ಥಿಕ ಉದಾರೀಕರಣದ ಮೂಲಕ ಬಹಳಷ್ಟು ಆದಾಯ ಮತ್ತು ಸಂಪತ್ತನ್ನು ಸೃಷ್ಟಿಸಲಾಗಿದೆ ಎಂದು ನಂಬುವವರು ಇದ್ದಾರೆ. ದುಡಿಯುವ ಜನರ ಸಂಕಷ್ಟ ಹೆಚ್ಚಳದ ಇನ್ನೊಂದು ಮಗ್ಗಲು ಕೂಡ ಇದಕ್ಕೆ ಇದೆಯಲ್ಲವೇ? –ಹಿಂದಿನ ಭಾಗದಲ್ಲಿ ಈ ಪ್ರಶ್ನೆಗಳಿಗೆ ಸೀತಾರಾಂ ಯೆಚುರಿಯವರ ಉತ್ತರಗಳನ್ನು ಓದಿದ್ದೀರಿ. ಮುಂದೆ ಓದಿ...

## ಕಾರ್ಪೊರೇಟ್–ಹಿಂದುತ್ವ ನಂಟು ಮೂಡಿ ಬಂದಿದೆ

ಸಂದರ್ಶನ: ಟಿ.ಕೆ.ರಾಜಲಕ್ಷ್ಮಿ
ಅನು: ಶ್ರೀಂ.ಶ.ನಾ

ಭಾರತದಲ್ಲಿ ಸುಧಾರಣಾ ದಶಕಗಳು ಜನಕೇಂದ್ರಿತ ವಾಗುವ ಬದಲು ಲಾಭ ಕೇಂದ್ರಿತವಾಗಿ ಇರುವುದರಿಂದ ಆರ್ಥಿಕ ಅಸಮಾನತೆಗಳು ವೇಗವಾಗಿ ಹೆಚ್ಚಿವೆ. ಪ್ರಧಾನಮಂತ್ರಿ ಮೋದಿಯವರು ಸಂಪತ್ತಿನ ಉತ್ಪಾದಕರನ್ನು ಗೌರವಿಸುವಂತೆ ಉತ್ತೇಜಿಸುತ್ತಾರೆ. ಸಂಪತ್ತು ಎಂದರೆ ದುಡಿಯುವ ವರ್ಗ ಉತ್ಪಾದಿಸುವ ಮೌಲ್ಯಗಳನ್ನು ನಗದೀಕರಿಸುವುದೇ ಸಂಪತ್ತು. ನಮ್ಮ ಜನತೆಯ ಒಟ್ಟಾರೆ ಸಂಪತ್ತಿಗಾಗಿ ಮೌಲ್ಯ ಉತ್ಪಾದಕರನ್ನು ಗೌರವಿಸಬೇಕಿರುವುದು ಅಗತ್ಯ.

ಯೋಜನಾ ಆಯೋಗವನ್ನು ರದ್ದುಪಡಿಸುತ್ತಲೇ ಮೋದಿ ಸರ್ಕಾರವು ನಮ್ಮ ದೇಶ ಸ್ವಾತಂತ್ರ್ಯಪಡೆದ ಕಾಲದಿಂದಲೂ ಬಡತನ ಮಟ್ಟವನ್ನು ಅಳೆಯಲು ಬಳಸುತ್ತಿದ್ದ ಮೂಲಭೂತ ಪೌಷ್ಟಿಕಾಂಶ ಪ್ರಮಾಣವನ್ನು ಪ್ರತಿಯೊಬ್ಬರಿಗೂ ಪ್ರತಿದಿನದಂತೆ 2200 ಕ್ಯಾಲೋರಿಗಳು ಮತ್ತು ನಗರ ಭಾರತದಲ್ಲಿ ಶೇ. 2100 ಕ್ಯಾಲೋರಿ ಎಂದು ನಗದಿಗೊಳಿಸಿತ್ತು. ರಾಷ್ಟ್ರೀಯ ಸ್ಯಾಂಪಲ್ ಸರ್ವೆಯು, ಈ ಮಾನದಂಡದ ಪ್ರಕಾರ 1993–94 ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇಕಡ 50 ಮತ್ತು ನಗರ ಪ್ರದೇಶಗಳಲ್ಲಿ ಶೇ. 57ರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದಾರೆ. 2011–12ರ NSS ಪ್ರಕಾರ, ಈ ಪ್ರಮಾಣ ಶೇ. 68 ಮತ್ತು ಶೇ. 65 ರಷ್ಟಿದೆ. 2017–18 ರಲ್ಲಿ ಬಂದ NSS ನ ವರದಿಯನ್ನು ಮೋದಿ ಸರ್ಕಾರವು ನಮ್ಮ ವಿಶ್ವ ಪ್ರಶಂಸಿತ ಮಾಹಿತಿ ಸಂಚಯ (Data base) ಸಂಸ್ಥೆಗಳನ್ನು ನಾಶ ಮಾಡುತ್ತದೆ. ಮಾಧ್ಯಮಗಳಿಗೆ ಸೇರಿದ ಅಂಕಿ ಅಂಶಗಳು ಗ್ರಾಮೀಣ ಭಾರತದಲ್ಲಿ ನೈಜ್ಯ ಉಪಭೋಗ ವೆಚ್ಚವು (ಕೇವಲ ಆಹಾರ ಮಾತ್ರವಲ್ಲ) ಶೇ. 9 ರಷ್ಟು ಕುಸಿದಿದೆ ಎಂದು ತೋರಿಸಿವೆ. ಸಾಂಕ್ರಾಮಿಕಕ್ಕೆ ಮುನ್ನವೇ ಗ್ರಾಮೀಣ ಮತ್ತು ನಗರ ಭಾರತದಲ್ಲಿ ನಿಚ್ಚಳ ಬಡತನವು ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ಏರಿದೆ. ನಂತರದಲ್ಲಿ, ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ.

ಇಂದು ಭಾರತವನ್ನು "ಜಾಗತಿಕ ಹಸಿವು ಸೂಚ್ಯಂಕ"ವು "ಗಂಭೀರ ವಿಧ"ದಲ್ಲಿ ಸೇರಿಸಿದೆ. ಅಪೌಷ್ಟಿಕತೆ, ಅದರಲ್ಲೂ ಮಕ್ಕಳಲ್ಲಿ, ಶಿಶು ಮರಣ ಮತ್ತು ಇನ್ನಿತರ ಸೂಚ್ಯಾಂಕಗಳಲ್ಲಿ ಕಳವಳಕಾರಿ ಹೆಚ್ಚಳ ಕಾಣಬರುತ್ತಿದೆ ಎಂಬುದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ–5 ಸೂಚಿಸುತ್ತಿದೆ. ಇತ್ತೀಚಿಗೆ, ಸುಸ್ಥಿರ ಅಭಿವೃದ್ಧಿ ಗುರಿಗಳ ಜಾಗತಿಕ ಸೂಚ್ಯಂಕದಲ್ಲಿ ಭಾರತದ ಸ್ಥಾನವನ್ನು 2 ಶ್ರೇಯಾಂಕಗಳಷ್ಟು ಕೆಳಗಿಳಿಸಲಾಗಿದೆ. ಕಳೆದ ಒಂದು ವರ್ಷದಲ್ಲಿ ಭಾರತದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನ ಸಂಖ್ಯೆಯು ಅರವತ್ತು ಮಿಲಿಯನ್ ಯಿಂದ 134 ಮಿಲಿಯನ್ ಗೆ ಹೆಚ್ಚಿದೆ ಎಂದು ಪ್ಯು ಸಂಶೋಧನಾ ಕೇಂದ್ರವು ಅಂದಾಜು ಮಾಡಿದೆ. ಕಳೆದ ವರ್ಷದಲ್ಲಿ ಜಾಗತಿಕ ಬಡವರ ಸಂಖ್ಯೆ ಹೆಚ್ಚಳದಲ್ಲಿ ಭಾರತದ ಕೊಡುಗೆ ಶೇ. 57.3 ರಷ್ಟಿದೆ. ಶೇ. 59.3 ರಷ್ಟು ದೊಡ್ಡ ಪ್ರಮಾಣದ ನಮ್ಮ ಮಧ್ಯಮ ವರ್ಗಗಳು ಬಡತನಕ್ಕೆ ಕುಸಿದಿವೆ.

### ಯು.ಪಿ.ಎ. ಮೇಲೆ ಎಡ ಪಕ್ಷಗಳ ಒತ್ತಡ

**ಯು.ಪಿ.ಎ. ಸರ್ಕಾರದ ಅವಧಿಯಲ್ಲಿ ಎಡ ಪಕ್ಷಗಳ ಒತ್ತಡದಿಂದಾಗಿ ಸುಧಾರಣಾ ಪ್ರಕ್ರಿಯೆಗಳನ್ನು ಸ್ವಲ್ಪ ಸಮಯ ತಡೆಹಿಡಿಯಲಾಗಿತ್ತು ಎಂದು ಹೇಳಲಾಗಿತ್ತು. ಯು.ಪಿ.ಎ. ಸರ್ಕಾರದ ನೀತಿಗಳು ನವ ಉದಾರವಾದದಿಂದ ಗಮನಾರ್ಹವಾಗಿ ಭಿನ್ನವಾಗಿತ್ತೇ?**

ಯು.ಪಿ.ಎ. ಸರ್ಕಾರವು ಆರ್ಥಿಕ ಸುಧಾರಣೆಗಳನ್ನು ತಡೆಹಿಡಿದಿತ್ತು ಎಂದಲ್ಲ. ನವ ಉದಾರವಾದ ಸುಧಾರಣಾ ನೀತಿಗಳನ್ನು ಮುಂದುವರಿಸಲು ಸಮಾನ ಕನಿಷ್ಠ ಕಾರ್ಯಕ್ರಮವು ಒಂದು ನೀಲ ನಕ್ಷೆಯನ್ನು ತಯಾರಿಸಿದ್ದರಿಂದ ಎಡ ಪಕ್ಷಗಳು ಯು.ಪಿ.ಎ. ಸರಕಾರಕ್ಕೆ ಬಾಹ್ಯ ಬೆಂಬಲ ನೀಡಿದವು. ಭಾರತದ ಗಣತಂತ್ರದ ಧರ್ಮ ನಿರಪೇಕ್ಷ ಗುಣಲಕ್ಷಣಗಳನ್ನು ರಕ್ಷಿಸುವ ಹಿತಾಸಕ್ತಿಯಿಂದ ಮತ್ತು ಕೋಮುವಾದಿ ಶಕ್ತಿಗಳು ಪ್ರಭುತ್ವದ ಅಧಿಕಾರ ಹಿಡಿಯುವುದನ್ನು ತಡೆಯುವ ಸಲುವಾಗಿ ಈ ಬೆಂಬಲ ನೀಡಲಾಗಿತ್ತು.

ನಿಜ, ಎಡ ಪಕ್ಷಗಳ ಒತ್ತಡದಿಂದಾಗಿಯೇ ಒಂದು ಸಮಾನ ಕನಿಷ್ಟ ಕಾರ್ಯಕ್ರಮ ರಚಿಸಲಾಯಿತು ಮತ್ತು ಇದರಲ್ಲಿ ಒಂದು ಹೆಗ್ಗುರುತಿನ ಕಾಯಿದೆಯಾದ ಮನರೇಗಾ, ಅರಣ್ಯ ಹಕ್ಕುಗಳ ಕಾಯ್ದೆ, ಆಹಾರದ

ಪುಟ 10 ನೋಡಿ

ಆರ್ಥಿಕ ಧೋರಣೆಗಳ ಅನುಷ್ಠಾನವು ತನ್ನ ಘೋಷಿತ ಉದ್ದೇಶವನ್ನು ಸಾಧಿಸುವ ಬದಲು ಭಾರತವನ್ನು, ಇವತ್ತಿಗೂ ಮುಂದುವರೆಯುತ್ತಿರುವ ಸತತವಾಗಿ ಕೃಷಿ ಬಿಕ್ಕಟ್ಟಿನ ಕಡೆಗೆ ತೆಗೆದುಕೊಂಡು ಹೋಗುತ್ತಿದೆ.ಯೇಕೆ? ಆರ್ಥಿಕ ಬೆಳವಣಿಗೆಯ ಹೊರತಾಗಿಯೂ ಭಾರತೀಯ ಕೃಷಿಯು ಕ್ಷಿಪ್ರಗತಿಯ ಹಲವು ಪಟ್ಟು ಬೆಳವಣಿಗೆಯನ್ನಾಗಲಿ ಅಥವಾ ಸಣ್ಣ ರೈತರ ವಿಮೋಚನೆಯನ್ನಾಗಲಿ ಅಥವಾ ವ್ಯಾಪಕವಾದ ಗ್ರಾಮೀಣ ಅಭಿವೃದ್ಧಿಯನ್ನಾಗಲಿ ಸಾಧಿಸಲಿಲ್ಲ. ಏಕೆ? ರೈತರು ವಿಶೇಷವಾಗಿ ಸಣ್ಣ ರೈತರು ಇನ್ನೂ ಹೆಚ್ಚಿನ ಅಂಚಿಗೆ ತಳ್ಳಲ್ಪಡುತ್ತಿರುವುದಕ್ಕೆ ಕಾರಣವೇನು.? ಮುಕ್ತ ವ್ಯಾಪಾರ ಹಾಗೂ ಸಾರ್ವಜನಿಕ ವೆಚ್ಚ ಕಡಿತವು ಭಾರತದ ಆಹಾರ ಭದ್ರತೆಗೆ ಅಪಾಯವನ್ನು ತರಲಿದೆ ಎಂದು ಅರ್ಥಶಾಸ್ತ್ರಜ್ಞರು ಪದೇ ಪದೇ ಹೇಳಿದ್ದಾರೆ ಅಲ್ಲವೇ? ಒಂದು ವೇಳೆ ಕೃಷಿ ವಲಯವು ಸುಧಾರಣೆಗಳ ಕಾರಣದಿಂದ ಬೆಳೆದಿದ್ದರೆ ಭಾರತದ ಬೆಳವಣಿಗೆ ದರಗಳು ಇನ್ನೂ ಹೆಚ್ಚಿನದಾಗಿರಬೇಕಿತ್ತಲ್ಲವೇ? ಕಳೆದ ಮೂವತ್ತು ವರ್ಷಗಳಿಂದ ನಡೆಯುತ್ತಿರುವ ರೈತಾಪಿ ಹೋರಾಟಗಳಲ್ಲಿ ಕೇಂದ್ರ ಪ್ರಶ್ನೆ ಯಾವುದು ಮತ್ತು ರೈತರು ಅಣಿನೆರೆಯುವಿಕೆಹೇಗೆ ವಿಕಾಸಗೊಂಡಿದೆ?

ಈ ಪ್ರಶ್ನೆಗಳಿಗೆ ಡಾ. ಅಶೋಕ ಧವಳೆಯವರ ಉತ್ತರಗಳನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ.. ಮುಂದೆ ಓದಿ....



## ಕಾರ್ಷಿಕ ಸಮಾಜ ಬಿಕ್ಕಟ್ಟಿನಲ್ಲಿ ಮುಳುಗಿದೆ

ಸಂದರ್ಶನ: ಅನುಪಮ ಕಟಕಮ್
ಅನು: ಟಿ.ಯಶವಂತ

2017 ರಲ್ಲಿ 11 ದಿನಗಳ ರೈತರ ಮುಷ್ಕರವು ಸೇರಿ ರಾಜಾಸ್ಥಾನ ಮತ್ತು ಮಹಾರಾಷ್ಟ್ರದ ದೊಡ್ಡ ಹೋರಾಟಗಳು ಹಾಗೂ 2018 ರ ಎಐಕೆಎಸ್ ಮುನ್ನಡೆಸಿದ ಕಿಸಾನ್ ಲಾಂಗ್ ಮಾರ್ಚ್ ನಲ್ಲಿ ಕಂಡಂತೆ ಈ ಧೋರಣೆಗಳಿಗೆ ರೈತರು ಬಲವಾದ ಪ್ರತಿರೋಧ ತೋರಿದ್ದಾರೆ. ನಂತರ 2018 ರಲ್ಲಿ ದೇಶದ ರಾಜಧಾನಿಯಲ್ಲಿ ಎರಡು ಬೃಹತ್ ಮೆರವಣಿಗೆ ನಡೆದಿವೆ. ಒಂದನ್ನು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಸ್‌ಸಿಸಿ) ಸಂಘಟಿಸಿದ್ದರೆ ಮತ್ತೊಂದನ್ನು ಸಿಐಟಿಯು–ಎಐಕೆಎಸ್ –ಎಐಎಡಬ್ಲ್ಯುಯು ಸಂಘಟನೆಗಳು ಸಂಘಟಿಸಿದ್ದವು.

ದೆಹಲಿ ಗಡಿಗಳಲ್ಲಿ ಹಾಗೂ ದೇಶದಾದ್ಯಂತ ಈಗ ನಡೆಯುತ್ತಿರುವ ಎಸ್.ಕೆ.ಎಂ ನೇತೃತ್ವದ ಐತಿಹಾಸಿಕ ರೈತ ಹೋರಾಟ ನವೆಂಬರ್ 26,2020 ರಂದು ಆರಂಭವಾಗಿ ಒಂಬತ್ತು ತಿಂಗಳುಗಳನ್ನು ಪೂರೈಸಿರುವುದು (ಈಗ ಹತ್ತು ತಿಂಗಳಾಗಿದೆ) ಈ ಮೊದಲಿನ ಇಂತಹ ಎಲ್ಲಾ ಹೋರಾಟಗಳ ಸಮಾಗಮವಾಗಿದೆ. ಕೇಂದ್ರ ಸರ್ಕಾರ ಹೇರಿರುವ ಈ ಮೂರು ಕರಾಳ ಕಾಯ್ದೆಗಳು ಹಸಿದವನ ಬಾಯಿಗೆ ವಿಷ ಹಾಕಿದಂತಾಗಿದೆ. ಈ ರೈತ ಹೋರಾಟ ಧರ್ಮ, ಜಾತಿ, ಪ್ರದೇಶ, ರಾಜ್ಯ ಹಾಗೂ ಭಾಷೆಯನ್ನು ಮೀರಿ ಮುನ್ನಡೆಯುತ್ತಿದೆ. ದಬ್ಬಾಳಿಕೆ ಹಾಗೂ ಅಪಪ್ರಚಾರ ವನ್ನು ಧೈರ್ಯವಾಗಿ ಹಿಮ್ಮೆಟ್ಟಿಸಿದೆ. ಈ ಮೂಲಕ ಕಾರ್ಪೊರೇಟ್ ಕೋಮುವಾದ ಹಾಗೂ ನವ ಉದಾರವಾದಿ ಪಥಕ್ಕೆ ನೇರವಾಗಿ ಮುಖಾಮುಖಿಯಾಗಿದೆ. ವಿಜಯ ಸಿಗುವವರೆಗೂ ಹೋರಾಟವನ್ನು ವಿಶಾಲ ನೆಲೆಯಲ್ಲಿ ತೀವ್ರಗೊಳಿಸುವ ತೀರ್ಮಾನಕ್ಕೆ ರೈತರು ಬಂದಿದ್ದಾರೆ.

### ಗುತ್ತಿಗೆ ಕೃಷಿ

**ಗುತ್ತಿಗೆ ಕೃಷಿ ಎಂಬುದು ಒಂದು ವಿವಾದಾತ್ಮಕ ವಿಷಯ. ಅದರ ಫಲಿತಾಂಶಗಳು ಭಿನ್ನ ವಿಭಿನ್ನವಾಗಿದ್ದಾಗ್ಯೂ ಗುತ್ತಿಗೆ ಕೃಷಿ ಯನ್ನು ಪ್ರೋತ್ಸಾಹಿಸಲಾಗುತ್ತಿದೆ..ನೀವು ಗುತ್ತಿಗೆ ಕೃಷಿಯ ಲಾಭ ನಷ್ಟಗಳ ಬಗ್ಗೆ ವಿವರಿಸಬಲ್ಲಿರಾ**

ನಮ್ಮ ದೇಶದಲ್ಲಿ ಸ್ವಲ್ಪ ಸಮಯದಿಂದೀಚೆಗೆ ಗುತ್ತಿಗೆ ಕೃಷಿಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಅಗತ್ಯವೇನೆಂದರೆ ಗುತ್ತಿಗೆ ಕೃಷಿಯನ್ನು ರೈತ ಪರವಾಗಿರುವಂತೆ ಉತ್ತಮವಾಗಿ ನಿಯಂತ್ರಿಸುವುದು. ಕಾರ್ಪೊರೇಟ್ ಕಂಪನಿಗಳು ರೈತರಿಗೆ ಮೋಸ ಮಾಡದೇ ಒಪ್ಪಂದದಂತೆ ಬೆಲೆ ಪಾವತಿಸುವುದನ್ನು ಖಾತರಿಗೊಳಿಸಬೇಕಾಗಿದೆ. ಪರಿಸರಕ್ಕೆ ಮಾರಕವಾಗುವ ರೀತಿಯ ಕೃಷಿಯನ್ನು ರೈತರ ಮೇಲೆ ಕಂಪನಿಗಳು ಹೇರದಂತೆ ನಾವು ಖಾತರಿಗೊಳಿಸಬೇಕಾಗಿದೆ. ನಾವೊಂದು ರೈತ ಪರವಾದ ಸಂಕಷ್ಟ ಪರಿಹಾರ ವ್ಯವಸ್ಥೆ ಯೊಂದನ್ನು ಏರ್ಪಡಿಸಿಕೊಳ್ಳಬೇಕಾಗಿದೆ.

ಆದರೆ ಈಗ ಘೋಷಿಸಿರುವ ಕೃಷಿ ನೀತಿಗಳಲ್ಲಿ ಅತ್ಯಂತ ದುರ್ಬಲ ನಿಯಂತ್ರಣ ಕ್ರಮಗಳನ್ನು ಹೆಣೆಯಲಾಗಿದೆ. ಈ ಕ್ರಮಗಳು ಗುತ್ತಿಗೆ ಕೃಷಿಯಲ್ಲಿ ತೊಡಗುವ ಕಂಪನಗಳಿಗೆ ಮಾತ್ರ ನೆರವಾಗಲಿವೆ. ರೈತರು ಈ ಕಂಪನಿಗಳಿಗೆ ತಮ್ಮ ಭೂಮಿಯನ್ನು ಕಳೆದುಕೊಂಡು ಬಿಡಬಹುದು ಎಂಬ ಆತಂಕ ಆವರಿಸಿದೆ. ಹಾಗಾಗಿ ಗುತ್ತಿಗೆ ಕೃಷಿಗೆ ಸಂಬಂಧಿಸಿದಂತೆ ಕಠಿಣ ನಿಯಂತ್ರಣಗಳನ್ನು ಹೊಂದಬೇಕು. ಪ್ರತಿಯೊಂದು ರಾಜ್ಯದ ನಿರ್ದಿಷ್ಟ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ರಾಜ್ಯಸರ್ಕಾರಗಳೇ ಇಂತಹ ನಿಯಮಗಳನ್ನು ರೂಪಿಸಿ ಅಂಗೀಕರಿಸಬೇಕು.

**ಹೊಸ ಕೃಷಿ ಕಾಯ್ದೆಗಳ ವಿರುದ್ಧ ನಡೆಯುತ್ತಿರುವ ರೈತರ ಪ್ರತಿಭಟನೆಯಲ್ಲಿ ಎಐಕೆಎಸ್ ಸಕ್ರಿಯವಾಗಿ ಭಾಗವಹಿಸುತ್ತಿದೆ. ಕೃಷಿ ಕಾನೂನುಗಳ ಕುರಿತು ಹೇಳುವಿರಾ?**

ಕೃಷಿ ಕಾಯ್ದೆಗಳು ಭಾರತೀಯ ರೈತರ ಜೀವನೋಪಾಯದ ಮೇಲಿನ ಗದಾಪ್ರಹಾರವಾಗಿವೆ. ಎಪಿಎಂಸಿ ಮಾರುಕಟ್ಟೆಗಳು ಹಾಗೂ ಅಗತ್ಯ ಸರಕುಗಳ ಕಾಯ್ದೆಗಳು 1960 ರ ದಶಕದಿಂದಲೂ ರೈತರು ಮತ್ತು ಗ್ರಾಹಕರ ಹಕ್ಕುಗಳನ್ನು ರಕ್ಷಿಸುತ್ತಾ ಬಂದಿವೆ. ಎಪಿಎಂಸಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಕೆಲವು ನ್ಯೂನತೆಗಳಿದ್ದಾಗ್ಯೂ ರೈತರಿಗೆ ಉತ್ತಮ ಮಾರುಕಟ್ಟೆ ದೊರಕುವಂತೆ ಮಾಡುವಲ್ಲಿ ಹಾಗೂ ಸ್ಥಿರವಾದ ಬೆಲೆ ಪಡೆಯಲು ಸಹಾಯ ಮಾಡಿವೆ. ಈ ನ್ಯೂನತೆಗಳನ್ನು ಸರಿಪಡಿಸಬೇಕಾಗಿತ್ತು .ಇದರ ಬದಲಾಗಿ ಸರ್ಕಾರವು ಈ ಕೃಷಿ ಕಾನೂನುಗಳನ್ನು ಜಾರಿಗೆ ತರುವ ಮೂಲಕ ನೆಗಡಿಗೆ ಮೂಗನ್ನೇ ಕತ್ತರಿಸಿ ಹಾಕಿದೆ.

ಅವರಿಗೆ ಎ.ಪಿ.ಎಂ.ಸಿ ಬೇಕಾಗಿಲ್ಲ .ಅವರು ಎಪಿಎಂಸಿ ಯನ್ನು ಕಳಚಿ ಹಾಕಲು ಹವಣಿಸುತ್ತಿದ್ದಾರೆ ಮತ್ತು ಕೃಷಿ ಮಾರುಕಟ್ಟೆ ಯನ್ನು ಅದಾನಿ ಮತ್ತು ಅಂಬಾನಿಯಂತಹ ಖಾಸಗಿ ಕಾರ್ಪೊರೇಟ್ ಕುಳಗಳ ನಿಯಂತ್ರಣಕ್ಕೆ ಒಪ್ಪಿಸಲು ಬಯಸುತ್ತಿದ್ದಾರೆ. ಮಾರುಕಟ್ಟೆ ವ್ಯವಸ್ಥೆ ವಿನಾಶ ಹೊಂದಿದರೆ ರೈತರು ತಾವಾಗಿಯೇ ಕಾರ್ಪೊರೇಟ್‌ಗಳ ತೆಕ್ಕೆಗೆ ನೂಕಲ್ಪಡುತ್ತಾರೆ. ಇದರಿಂದಾಗಿ ಪಂಜಾಬ್, ಹರ್ಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶದ ರೈತಾಪಿ ಜನತೆ ವಿನಾಶ ಹೊಂದುತ್ತಾರೆ. 2006ರಲ್ಲಿ ಬಿಹಾರ ರಾಜ್ಯದಲ್ಲಿ ಈ ರೀತಿ ಮಾರುಕಟ್ಟೆ ವ್ಯವಸ್ಥೆಯನ್ನು ಕಳಚಿ ಹಾಕಿದ ಪರಿಣಾಮವಾಗಿ ಅಲ್ಲಿನ ರೈತರು ಗಂಭೀರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ.

ಇದೇ ರೀತಿಯಲ್ಲಿ ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತರುವುದರಿಂದ ಚಿಲ್ಲರೆ ವ್ಯಾಪಾರ ಮತ್ತು ಸರಕು ಸಾಗಾಣಿಕೆಯನ್ನು ಕಾರ್ಪೊರೇಟ್‌ಗಳ ವಶಕ್ಕೆ ನೀಡಲು ಅವಕಾಶ ವಾಗುತ್ತದೆ. ಇದರ ಅರ್ಥ ಏನೆಂದರೆ ಮಾರುಕಟ್ಟೆಯಲ್ಲಿ ಆಹಾರ ವಸುಗಳ

ಪುಟ 10 ನೋಡಿ

# ಕಾರ್ಪೊರೇಟ್-ಹಿಂದುತ್ವ ನಂಟು ಮೂಡಿ ಬಂದಿದೆ

ಪುಟ 9 ರಿಂದ

ಹಕ್ಕು, ಭೂಸ್ವಾಧೀನಕ್ಕೆ ಸಂಬಂಧಿಸಿದ ಹೊಸ ಕಾನೂನು, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು ಮತ್ತು ಇಂತಹ ಹಲವು ಕ್ರಮಗಳಿದ್ದವು. ನಮ್ಮ ಒತ್ತಡ ಇಲ್ಲದಿದ್ದಲ್ಲಿ ಇವುಗಳು ಪ್ರಾಯಶಃ ಬೆಳಕಿಗೆ ಬರುತ್ತಲೇ ಇರಲಿಲ್ಲ. ಸಂವಿಧಾನವು ತನ್ನ ಎಲ್ಲಾ ನಾಗರಿಕರಿಗೆ ಕೆಲವು ಮೂಲಭೂತ ಹಕ್ಕುಗಳು ಮತ್ತು ಗ್ಯಾರಂಟಿಗಳನ್ನು ನೀಡುತ್ತದೆ. ಭಾರತವು ಅಭಿವೃದ್ಧಿಯಾದಂತೆ, ಈ ಹಕ್ಕುಗಳು ಮತ್ತು ಗ್ಯಾರಂಟಿಗಳು ವಿಸ್ತಾರವಾಗುತ್ತಾ ಮುಂದುವರೆಯಲೇ ಬೇಕು ಎಂಬುದು ಎಡ ಪಕ್ಷಗಳ ದೃಢ ನಂಬಿಕೆ. ಉದ್ಯೋಗದ ಹಕ್ಕು ಸಂವಿಧಾನದಲ್ಲಿ ಮೂಲಭೂತ ಹಕ್ಕು ಅಲ್ಲ ಆದರೆ ಮನರೇಗಾ ಯೋಜನೆಯು ಕನಿಷ್ಟ ಗ್ರಾಮೀಣ ಪ್ರದೇಶಗಳಲ್ಲಾದರೂ ಈ ಹಕ್ಕನ್ನು ನೀಡಿತು. ಇದರಲ್ಲಿ ಕೆಲವು ಇತಿಮಿತಿಗಳಿದ್ದರೂ ಮತ್ತು ಆಳುವ ವರ್ಗಗಳು ಇದನ್ನು ಜಾರಿ ಮಾಡದಿರಲು ಬೇಕೆಂದೇ ಪ್ರಯತ್ನಿಸಿದರೂ, ಗ್ರಾಮೀಣ ಉದ್ಯೋಗದ ಉದ್ಯೋಗ ಹಕ್ಕಿನ ವಿಸ್ತರಣೆ ಎಂಬುದಂತೂ ವಾಸ್ತವ. ಮನ ರೇಗಾ ಕಾನೂನಾದಾಗ ಈ ರೀತಿಯ ನಗರ ಉದ್ಯೋಗ ಗ್ಯಾರಂಟಿ ಯೋಜನೆಯು ಜಾರಿ ಆಗಬೇಕು ಎಂದು ನೀಡಿದ್ದ ಭರವಸೆಯನ್ನು ಜಾರಿ ಮಾಡಬೇಕು ಎಂದು ಎಡ ಪಕ್ಷಗಳು ಕೇಳುತ್ತಲೇ ಇವೆ. ಇದೇ ರೀತಿ ಶಿಕ್ಷಣವು ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕು ಅಲ್ಲ. ಆದರೆ, ಶಿಕ್ಷಣದ ಹಕ್ಕು ಜಾರಿಯಾಗದಿದ್ದರೂ, ಕನಿಷ್ಟ ಒಂದು ವಿಸ್ತರಣೆಯಾಗಿದೆ. ಆಗೆಯೇ ಮಾಹಿತಿ ಹಕ್ಕು, ಬುಡಕಟ್ಟು ಜನಾಂಗದವರಿಗೆ ಅರಣ್ಯ ಹಕ್ಕು ಕಾಯ್ದೆ ಇತ್ಯಾದಿಗೂ ಜನರಿಗೆ ಹಕ್ಕುಗಳು ಗ್ಯಾರಂಟಿಗಳ ವಿಸ್ತರಣೆಯಾಗಿದೆ. ಒಂದರ್ಥದಲ್ಲಿ, ಎಡಪಕ್ಷಗಳ ಒತ್ತಡ ಇರದಿದ್ದರೆ, ನವ-ಉದಾರವಾದದಲ್ಲಿ ಈ ಕಾನೂನುಗಳು ಪ್ರಾಯಶಃ ಇರುತ್ತಿರಲಿಲ್ಲ.

**ಭಾರತದ ಧರ್ಮ ನಿರಪೇಕ್ಷ ಪ್ರಜಾಸತ್ತೆಯ ಮೇಲೆ ಭಾರತವು ನವ ಉದಾರವಾದದತ್ತ ತಿರುಗುವುದರಿಂದಾಗುವ ಪರಿಣಾಮಗಳೇನು ಮತ್ತು ಇದಕ್ಕೂ ಹಾಗೂ ಸರ್ವಾಧಿಕಾರಶಾಹಿಯ ಉದಯಕ್ಕೂ ಏನಾದರೂ ಸಂಬಂಧವಿದೆಯೇ?**

2014 ರಿಂದೀಚೆಗೆ ಆಗಿರುವುದೇನೆಂದರೆ ಕಾರ್ಪೊರೇಟ್ ಹಿತಾಸಕ್ತಿ ಮತ್ತು ಕೋಮು ರಾಜಕೀಯದ ಭ್ರಷ್ಟಮಿಶ್ರಣದ ಹೊರಹೊಮ್ಮುವಿಕೆ. ಇದು, ರಾಷ್ಟ್ರೀಯ ಆಸ್ತಿಗಳ ವ್ಯಾಪಕ ಲೂಟಿ, ಸಾರ್ವಜನಿಕ ವಲಯಗಳು, ಸಾರ್ವಜನಿಕ ಬಳಕೆಗಳು ಮತ್ತು ಖನಿಜ ಸಂಪತ್ತುಗಳ ಬೃಹತ್ ಖಾಸಗೀಕರಣದ ಮೂಲಕ ಲಾಭವನ್ನು ಗರಿಷ್ಟ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲು ಆಕ್ರಮಣಕಾರಿಯಾಗಿ ಮುನ್ನುಗ್ಗುತ್ತದೆ. ಇದು ಹಿಂದೆಂದೂ ಕೇಳರಿಯದ ಮಟ್ಟದ ಚಮಚಾ ಬಂಡವಾಳಶಾಹಿ ಮತ್ತು ರಾಜಕೀಯ ಭ್ರಷ್ಟಾಚಾರಕ್ಕೆ ಎಡೆ ಮಾಡುತ್ತದೆ. ಇದರ ಜೊತೆಯಲ್ಲಿಯೇ, ಜನರ ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಮೇಲೆ ನಿರ್ದಯ ದಾಳಿ ನಡೆಯುತ್ತದೆ. ಸಂವಿಧಾನ ಮತ್ತು ಅದು ಜನರಿಗೆ ನೀಡಿರುವ ಗ್ಯಾರಂಟಿಯನ್ನು ಕಡೆಗಣಿಸುವ ಪ್ರಕ್ರಿಯೆಯಾದ ಎಲ್ಲ ಭಿನ್ನಾಭಿಪ್ರಾಯವನ್ನು ದೇಶ-ವಿರೋಧಿ ಎಂದು ತಳ್ಳಿ ಹಾಕುವುದು, ಯೆಪಿಎ, ರಾಜದ್ರೋಹ ಮುಂತಾದ ಕಠಿಣ ಕಾನೂನುಗಳನ್ನು ಬಳಸಿ ಜನರನ್ನು ಇಷ್ಟಬಂದಂತೆ ಬಂಧಿಸುವುದು.

ಇದರಿಂದಾಗಿಯೇ ಜಗತ್ತು ಭಾರತವನ್ನು ಒಂದು "ಚುನಾಯಿತ ನಿರಂಕುಶತ್ವ' ಎಂದು ಘೋಷಿಸಿರುವುದು. ಜಾಗತಿಕ ಆರ್ಥಿಕ ಸ್ವಾತಂತ್ರ್ಯ ಸೂಚ್ಯಾಂಕದಲ್ಲಿ ಭಾರತವು 105 ನೇ ಸ್ಥಾನದಲ್ಲಿದೆ.(ಕಳೆದ ವರ್ಷ 79 ರಲ್ಲಿತ್ತು) ಮಾನವ ಸ್ವಾತಂತ್ರ್ಯ ಸೂಚ್ಯಾಂಕವು ಭಾರತವನ್ನು 111ನೇ ಸ್ಥಾನದಲ್ಲಿ (ಕಳೆದ ವರ್ಷ 94). ಯುಎನ್‌ಡಿಪಿ ಯ ಮಾನವ ಅಭಿವೃದ್ಧಿ ಸುಚ್ಯಾಂಕವು ಭಾರತವನ್ನು ಕಳೆದ ವರ್ಷದ 124ನೇ ಸ್ಥಾನದಿಂದ 131 ನೇ ಸ್ಥಾನಕ್ಕೆ ಇಳಿಸಿದೆ.

ನಮ್ಮ ಜನರಿಗೆ ಹೆಚ್ಚುತ್ತಿರುವ ಸಂಕಷ್ಟಗಳ ಜೊತೆಯಲ್ಲಿ ಏರುತ್ತಿರುವ ಸರ್ವಾಧಿಕಾರಶಾಹಿತ್ವವು ಮುಸ್ಸೋಲಿನಿಯ ಫಾಸೀವಾದವನ್ನು ವಿವರಿಸಿದ ರೀತಿಯಲ್ಲಿ "ಆಳ್ವಿಕೆಯೊಂದಿಗೆ ಕಾರ್ಪೊರೇಟ್ ಗಳ ಬೆಸುಗೆ" ಯತ್ತ ಸಾಗುತ್ತಿದೆ.

**ನವ-ಉದಾರವಾದವೇ ಇಂದು ಕೋವಿಡ್-19 ರಿಂದ ಇನ್ನಷ್ಟು ಬಿಗಡಾಯಿಸಿರುವ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಭವಿಷ್ಯವೇನು? ಮತ್ತು ಪರ್ಯಾಯ ಏನು?**

ಕೋವಿಡ್ ಸಾಂಕ್ರಾಮಿಕ ಮತ್ತು ಜನರ ಜೀವ ಮತ್ತು ಜೀವನೋಪಾಯವನ್ನು ರಕ್ಷಿಸಲು ಇರುವ ಅಸಮರ್ಪಕ ಆರೋಗ್ಯ ವ್ಯವಸ್ಥೆ ಇಂದು ಬಹಳ ಸ್ಪಷ್ಟವಾಗಿ ಬೆಳಕಿಗೆ ಬಂದಿದೆ. ಜಾಗತಿಕ ನವ-ಉದಾರವಾದಿ ಪಥದಲ್ಲಿ ಲಾಭ ಹೆಚ್ಚಿಸುವ ಸಲುವಾಗಿ ಮಿತವ್ಯಯ ಕ್ರಮಗಳಾದ ವೇತನ ಕಡಿತ, ಕೆಲಸಗಳ ನಿರ್ಮೂಲನೆ ಮತ್ತು ಮುಖ್ಯವಾಗಿ ನಮ್ಮ ದೇಶವಲ್ಲದ "ನೋಟುರದ್ದತಿ" ರೀತಿಯಲ್ಲಿ ಸಣ್ಣ ಉತ್ಪಾದನೆಗಳ ನಾಶ ಇತ್ಯಾದಿ ಕ್ರಮಗಳ ಭಾಗವಾಗಿಯೇ ನಾವು ಆಳುವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಎಲ್ಲಾ ಆರ್ಥಿಕ ಚಟುವಟಿಕೆಗಳ ಮಾರ್ಗಗಳನ್ನು ಆಕ್ರಮಿಸುವುದು ಮತ್ತು ಈಗ ಭಾರತದ ಕೃಷಿಯನ್ನು ಕಾರ್ಪೊರೇಟ್ ಲಾಬಕ್ಕಾಗಿ ಧ್ವಂಸ ಮಾಡುವುದು, ಕಾಂಟ್ರಾಕ್ಟ್ ಕೃಷಿ ಪದ್ಧತಿ ಮತ್ತು ಇದರಿಂದಾಗುವ ಆಹಾರ ಕೊರತೆ ಎಲ್ಲವೂ ಈ ಬೆಳವಣಿಗೆಯನ್ನು ಪ್ರತಿಫಲಿಸುತ್ತಿವೆ.

ಜಾಗತಿಕವಾಗಿ, ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವಲ್ಲಿ ನವ-ಉದಾರವಾದಿ ಸುಧಾರಣೆಗಳ ದಿವಾಳಿತನವು ನಿಚ್ಚಳವಾಗಿ ಕಾಣಬರುತ್ತಿದೆ. ಈ ಅಪಾಯಕಾರಿ ಅಸಮಾನತೆಯ ಹೆಚ್ಚಳವನ್ನು ಸರ್ವೆ ಮಾಡಿರುವ, "ದಿ ಎಕನಾಮಿಸ್ಟ್," ಪತ್ರಿಕೆಯು "ಅಸಮಾನತೆಯು ಯಾವ ಹಂತ ತಲುಪಿದೆ ಎಂದರೆ ಅದು ಅದಕ್ಷವಾಗಿದೆ ಮತ್ತು ಬೆಳವಣಿಗೆಗೆ ಕೆಡುಕಾಗಿದೆ" ಎಂದು ಅಭಿಪ್ರಾಯ ಪಟ್ಟಿದೆ. ತನ್ನ ಪುಸ್ತಕ "ಅಸಮಾನತೆಯ ಬೆಲೆ"ಯಲ್ಲಿ ಅಗ್ರ ಶೇ.1 ಮತ್ತು ಅನ್ಯ ಶೇ.99 ಜನರ ಬಗ್ಗೆ ಬರೆಯುತ್ತಾ ಜೋಸೆಫ್ ಸ್ಟಿಗ್‌ಲಿಟ್ಸ್ ಅಂತಿಮವಾಗಿ ಹೀಗೆ ಹೇಳುತ್ತಾರೆ. "ಸಮರ್ಪಕವಾಗಿ ಮಾಡಿದರೆ ನಮ್ಮ ಆರ್ಥಿಕ ಪ್ರಗತಿಯು ಒಂದು ವೇಳೆ ನಮ್ಮ ಸಮಾಜ ಆಳವಾಗಿ ವಿಭಜನೆ ಹೊಂದಿಯೇ ಇದ್ದರೆ ಸಾಧಿಸುವುದಕ್ಕಿಂತ ಹೆಚ್ಚಾಗಿಯೇ ಬೆಳೆಯುತ್ತಿದೆ."

ಎಲ್ಲಾ ಮುಂದುವರೆದ ದೇಶಗಳು ನವ-ಉದಾರವಾದಕ್ಕೆ ಅಸಹನೀಯವಾಗಿರುವ ಕ್ರಮಗಳಿಂದ ಬೃಹತ್ ಪ್ರಮಾಣದಲ್ಲಿ ಸರ್ಕಾರಿ ವೆಚ್ಚವನ್ನು ಉತ್ತೇಜಕ ಪ್ಯಾಕೇಜ್ ಗಳಾಗಿ ಘೋಷಿಸಿವೆ. ಇವು ಆಂತರಿಕ ಬೇಡಿಕೆ ಮತ್ತು ಆರ್ಥಿಕ ಚಟುವಟಿಕೆಯನ್ನು ಪುನಶ್ಚೇತನಗೊಳಿಸುವ ಉದ್ದೇಶ ಹೊಂದಿವೆ. ಬ್ರಿಟನ್ ಪ್ರಧಾನಮಂತ್ರಿ ಬೋರಿಸ್ ಜಾನ್ಸನ್ ರವರು ಹೆಚ್ಚಿಸಿದ ಸರ್ಕಾರಿ ವೆಚ್ಚದ ಮಹತ್ವವನ್ನು ಕುರಿತು ಮಾತನಾಡುವ ಮೊದಲು ಹೇಳಿದ ನುಡಿಗಳು ಇವು: "ನಾನು ಒಬ್ಬ ಕಮ್ಯುನಿಸ್ಟ್ ಅಲ್ಲ, ಆದರೆ....".

ಮೋದಿ ಸರ್ಕಾರದ ಚಮಚಾ ಬಂಡವಾಳಶಾಹಿಗಳ ಬೃಹತ್ ಪ್ರಮಾಣದ ತೀರಿಸಲಾಗದ ಸಾಲವನ್ನು, ಮನ್ನಾವನ್ನು ಒಂದೆಡೆ ಮಾಡುತ್ತಲೇ, ಇನ್ನೊಂದೆಡೆ ತನ್ನ ಸರ್ಕಾರಿ ವೆಚ್ಚವನ್ನು ಹೆಚ್ಚಿಸಲು ಒಪ್ಪುತ್ತಿಲ್ಲ. ಪೆಟ್ರೋಲ್, ಡೀಸೆಲ್ ನ ದೈನಂದಿನ ಬೆಲೆ ಏರಿಕೆ ಮತ್ತು ಇದರಿಂದಾಗುವ ಒಟ್ಟಾರೆ ಹಣದುಬ್ಬರದ ಮೂಲಕ ಜನರ ಮೇಲೆ ಇನ್ನಷ್ಟು ಹೊರೆಯನ್ನು ಸರ್ಕಾರ ಹಾಕುತ್ತಿದೆ. ಇದು ಆಂತರಿಕ ಬೇಡಿಕೆಯನ್ನು ಕುಂಠಿತಗೊಳಿಸುತ್ತಿದೆ ಮತ್ತು ಆರ್ಥಿಕ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸುತ್ತಿದೆ.

ನಾವು, ನಮ್ಮ ದೇಶದಲ್ಲಿ ಈ ಸುಧಾರಣಾ ಪಥವನ್ನು ಗಂಭೀರವಾಗಿ ವಿಮರ್ಶಿಸಬೇಕು ಮತ್ತು ನಮ್ಮ ಆದ್ಯತೆಯನ್ನು ಕೆಳ ಕಾಣಿಸಿದಂತೆ ಸರಿಪಡಿಸಿಕೊಳ್ಳಬೇಕು:

ಕೃಷಿ ಮತ್ತು ಆಹಾರ ಭದ್ರತೆಯನ್ನು ಬಲಪಡಿಸುವುದು, ಆರೋಗ್ಯ, ಶಿಕ್ಷಣದಲ್ಲಿ ಹೂಡಿಕೆ, ಉದ್ಯೋಗ ಸೃಷ್ಟಿ ಮತ್ತು ಆಂತರಿಕ ಬೇಡಿಕೆ ಉತ್ತೇಜಿಸಲು ಬಹಳ ಅಗತ್ಯವಿರುವ ಆರ್ಥಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳಲ್ಲಿ ಸಾರ್ವಜನಕ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸುವುದು.

**ತನ್ನನ್ನು ಒಂದು ರಾಷ್ಟ್ರೀಯವಾದಿ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಯು 1990 ರ ಆರಂಭದಲ್ಲಿ ಬುನಾದಿ ಹಾಕಿದ ನವ-ಉದಾರವಾದಿ ಪಥದಲ್ಲಿ ನಿರಂತರವಾಗಿ ಸಾಗುತ್ತಿದೆ. ಬೇರೆ ಪಕ್ಷಗಳಿಗಿಂತಲೂ ಬಿಜೆಪಿಯ ನವ-ಉದಾರವಾದಿ ಸುಧಾರಣೆಗಳ ದೃಷ್ಟಿಕೋನವು ತುಂಬಾ ಆಕ್ರಮಣಕಾರಿಯೇ?**

ಬಿಜೆಪಿಯು ಯಾವಾಗಲೂ ಎರಡು ನಾಲಿಗೆ ಹೊಂದಿದೆ. ಅದು ಹೇಳುವುದು ಒಂದು, ಮಾಡುವುದೇ ಇನ್ನೊಂದು. ರಾಷ್ಟ್ರೀಯವಾದಿ ಪಕ್ಷ ಎಂದು ಹೇಳಿಕೊಳ್ಳುತ್ತಾ, ಒಂದು ಸಮಯದಲ್ಲಿ ಸ್ವದೇಶಿ ಯಂತಹ ಘೋಷಣೆ ಕೊಡುವುದು, ವಿರೋಧ ಪಕ್ಷದಲ್ಲಿದ್ದಾಗ ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ) ಯನ್ನು ವಿರೋಧಿಸುತ್ತದೆ. ಆದರೆ ಸರ್ಕಾರದ ಅಧಿಕಾರ ಹಿಡಿದಾಕ್ಷಣ ಈ ನಿಲುವುಗಳು ತಿರುಗು ಮುರುವಾಗುತ್ತವೆ.

ಮುಖ್ಯವಾಗಿ 2014 ರಿಂದ, ಬಿಜೆಪಿ ಸರ್ಕಾರ ನವ ಉದಾರವಾದಿ ನೀತಿಗಳನ್ನು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತಿದೆ. ಮೊದಲು ಈ ಧೋರಣೆ ಹೀಗಿರಲಿಲ್ಲ. ಇದಕ್ಕೊಂದು ಕಾರಣ ಇದೆ. ಬಿಜೆಪಿಯು ಆರೆಸ್ಸೆಸ್ ನ ರಾಜಕೀಯ ಅಂಗ. ಒಂದು ಉನ್ನತ್ತ ಅಸಹಿಷ್ಣುತೆಯ ಅಸಹನೀಯ ಮತೀಯ ಫ್ಯಾಸಿಸ್ಟ್ ತೆರನ "ಹಿಂದುತ್ವ ರಾಷ್ಟ್ರ" ಸ್ಥಾಪಿಸುವ ತನ್ನ ರಾಜಕೀಯ ಯೋಜನೆಯನ್ನು ಆರೆಸ್ಸೆಸ್ ಮುಂದುವರೆಸುತ್ತಿರುತ್ತದೆ. ಸ್ವಾತಂತ್ರ್ಯ ಗಳಿಸಿದ ಸಂದರ್ಭದಲ್ಲಿ ಇದನ್ನು ಸಾಧಿಸಲು ವಿಫಲವಾದ ನಂತರ, ಅದು ಸಂವಿಧಾನವು ಅಳವಡಿಸಿಕೊಂಡಿರುವ ಧರ್ಮ ನಿರಪೇಕ್ಷ, ಪ್ರಜಾಪ್ರಭುತ್ವವಾದಿ ಗಣತಂತ್ರವನ್ನು ದುರ್ಬಲಗೊಳಿಸಲು ಮತ್ತು ಈ ಜಾಗದಲ್ಲಿ ತನ್ನ ಫಾಸಿಸ್ಟ್ ತೆರನ "ಹಿಂದುತ್ವ ರಾಷ್ಟ್ರ" ಸ್ಥಾಪಿಸಲು ಪ್ರಯತ್ನಿಸುತ್ತಲೇ ಇದೆ. ಈ ಯೋಜನೆಯನ್ನು ಜಾಗತಿಕರಣಗೊಂಡ ವಿಶ್ವದಲ್ಲಿ ಸಾಧಿಸಬೇಕಾದಲ್ಲಿ ಅಂತರಾಷ್ಟ್ರೀಯ ಬೆಂಬಲ ಇರಬೇಕು ಅಥವಾ ಕನಿಷ್ಟ ಅಂತರಾಷ್ಟ್ರೀಯ ಪ್ರತಿರೋಧ ಇರಬಾರದು. ಇದಕ್ಕಾಗಿ ಅದು ನವ-ಉದಾರವಾದಿ ಸುಧಾರಣೆಗಳನ್ನು ಆಕ್ರಮಣಕಾರಿಯಾಗಿ ಜಾರಿ ಮಾಡಿ, ಜಾಗತಿಕ ಮತ್ತು ಆಂತರಿಕ ಕಾರ್ಪೊರೇಟ್ ಗಳಿಗೆ ತಮ್ಮ ಲಾಭವನ್ನು ಗರಿಷ್ಟಮಟ್ಟದಲ್ಲಿ ಹೆಚ್ಚಿಸಿಕೊಳ್ಳಲು ಹೊಸ ಹೊಸ ಕ್ಷೇತ್ರಗಳನ್ನು ಒದಗಿಸುವ ಮೂಲಕ ಅವರ ಬೆಂಬಲ ಗಳಿಸಿಕೊಳ್ಳುವುದು ಒಂದು ಅತ್ಯುತ್ತಮ ಮಾರ್ಗ ಎಂದು ತಿಳಿದು, ನಡೆಯುತ್ತಿದೆ.

## ಬಲಪಂಥೀಯ ಪಲ್ಲಟ

**ಭಾರತವು ನವ-ಉದಾರವಾದಕ್ಕೆ ತಿರುಗಿರುವುದರ ಪರಿಣಾಮವು ಭಾರತವು ವಿಶ್ವ ರಾಜಕೀಯವನ್ನು ನೋಡುವ ಮತ್ತು ಅದರ ಪಾತ್ರದ ಮೇಲೆ ಏನಾಗಬಹುದು?**

ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಮುಂದುವರೆಯುತ್ತಿರುವ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ರಾಜಕೀಯ ಬಲಪಂಥೀಯ ಪಲ್ಲಟ ಕಾಣ ಬರುತ್ತಿದೆ. ಗರಿಷ್ಟ ಲಾಭದಲ್ಲಿನ ಕುಸಿತ ಜಾಗತಿಕ ಬಂಡವಾಳಶಾಹಿಯ ಹಿತಾಶಕ್ತಿಗೆ ಘಾಸಿ ತರುತ್ತದೆ. ವಿಶ್ವದಲ್ಲೆಡೆ ಬೆಳೆದು ಬರುತ್ತಿರುವ ದುಡಿಯುವ ವರ್ಗದ ನೇತೃತ್ವದ ಪ್ರತಿಭಟನೆಯ ಐಕ್ಯತೆಯನ್ನು ಒಡೆಯಲು ಭಾವನೆಗಳನ್ನು ಕೆರಳಿಸುವ, ವರ್ಣಭೇದ, ಅನ್ಯರ ದ್ವೇಷ ಮುಂತಾದ ವಿಭಜಕ ಧೋರಣೆಗಳು, ದ್ವೇಷ ಹರಡುವುದು, ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವ ಇತ್ಯಾದಿ ಬಲಪಂಥೀಯ ರಾಜಕೀಯ ಪಲ್ಲಟಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಭಾರತದಲ್ಲಿ, ಈ ಬಲಪಂಥೀಯ ಪಲ್ಲಟವನ್ನು ಕೋಮು ಧ್ರುವೀಕರಣ, ವಿಷಭರಿತ ದ್ವೇಷ ಮತ್ತು ಹಿಂಸೆಯನ್ನು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹರಿಬಿಡುವ ಮೂಲಕ ಆರೆಸ್ಸೆಸ್ ನ ಫಾಸಿಸ್ಟ್ ತೆರನ ಯೋಜನೆಯ ಮುನ್ನಡೆಗೆ ಎಡೆ ಮಾಡಲಾಗುತ್ತಿದೆ. ಸಹಜವಾಗಿ ಇದು ಸರ್ವಾಧಿಕಾರಶಾಹಿತ್ವ ಫಾಸಿಸ್ಟ್ ತೆರನ ಪ್ರಮಾಣಕ್ಕೆ ಬೆಳೆಯಲು ಎಡೆ ಮಾಡಿಕೊಡುತ್ತಿದೆ.

ಮುಖ್ಯವಾಗಿ 2014ರಿಂದ ಒಂದು ಕಾರ್ಪೊರೇಟ್-ಕೋಮುವಾದಿ ನಂಟಿನ ಹೊರಹೊಮ್ಮು, ನಿರಂತರವಾಗಿ ಬಲಗೊಳ್ಳುತ್ತಿದೆ. ಇದು ಚಮಚಾ ಬಂಡವಾಳಶಾಹಿಯ ಅತ್ಯಂತ ಹೀನ ಅಭಿವ್ಯಕ್ತಿಗೆ ದಾರಿ ಮಾಡಿಕೊಡುತ್ತಿದೆ. ಚಮಚಾ ಕಾರ್ಪೊರೇಟ್ ಗಳು ಸಂತ್ತನ್ನು ಪೇರಿಸಿಕೊಳ್ಳುತ್ತಿರುವುದರಲ್ಲಿ ಇದನ್ನು ಕಾಣಬಹುದು. ಇತ್ತೀಚಿನ ರಾಷ್ಟ್ರೀಯ ನಗದೀಕರಣ ಕ್ರಮಸರಣಿ(ಎನ್‌ಎಂಪಿ) ಯೋಜನೆ ಒಳಗೊಂಡಂತೆ ಭಾರತದ ರಾಷ್ಟ್ರೀಯ ಆಸ್ತಿಗಳ ದೊಡ್ಡ ಪ್ರಮಾಣದ ಲೂಟಿಗೆ ಮುಂದಾಗಿರುವುದು ಅನಿಯಂತ್ರಿತ ನವ-ಉದಾರವಾದಿ ಸುಧಾರಣೆಗಳ ಯೋಜನೆ ಮತ್ತು ಆರ್.ಎಸ್.ಎಸ್. ನ ಯೋಜನೆಯ ಭಾಗವಾಗಿಯೇ.

ಸಹಜವಾಗಿ ಈ ನೀತಿಯು ಭಾರತವನ್ನು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಬಾಲಂಗೋಚಿಯಾಗಿ ಮತ್ತು ಅಮೆರಿಕ ಸಾಮ್ರಾಜ್ಯಶಾಹಿಯ ಸಾಮಂತನಾಗಿ ಭಾರತದ ಪಾತ್ರವನ್ನು ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಗಟ್ಟಿಗೊಳಿಸುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನ ಮುಂದಾಳು, ಅಲಿಪ್ತ ಚಳುವಳಿಯ ಪ್ರತಿಪಾದಕನಾಗಿ ಕಂಗೊಳಿಸುತ್ತಿದ್ದ ಭಾರತದ ಭವ್ಯತೆ ಇಂದು ಚರಿತ್ರೆಯ ದಾಖಲೆಗಳಿಗೆ ಮಾತ್ರ ಸೀಮಿತವಾಗುವತ್ತ ಸಾಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿಯ ಕಿರಿಯ ಭಾಗೀದಾರನಾಗಿ ಈಗ ನವ-ಉದಾರವಾದಿ ಸುಧಾರಣೆಗಳನ್ನು ಆಕ್ರಾಮಕವಾಗಿ ಅನುಸರಿಸುತ್ತಿರುವ ಕಾರ್ಪೊರೇಟ್-ಕೋಮುವಾದಿ ನಂಟು, ಭಾರತವನ್ನು ಸಂವಿಧಾನದಲ್ಲಿ ನಿರೂಪಿಸಿರುವಂತಹ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದಿಂದ ಆರೆಸ್ಸೆಸ್ ಕಣ್ಣೋಟದ ಒಂದು ಉನ್ನತ್ತ ಅಸಹಿಷ್ಣು ಮತೀಯವಾದಿ ಫ್ಯಾಸಿಸ್ಟ್‌ತೆರನ 'ಹಿಂದುತ್ವ ರಾಷ್ಟ್ರ'ವಾಗಿ ರೂಪಾಂತರಿಸುವ ಒಟ್ಟು ಪ್ಯಾಕೇಜಿನ ಭಾಗವಾಗಿದೆ.

# ಕಾರ್ಷಿಕ ಸಮಾಜ ಬಿಕ್ಕಟ್ಟಿನಲ್ಲಿ ಮುಳುಗಿದೆ

ಪುಟ 9 ರಿಂದ

ಬೆಲೆ ವಿಪರೀತ ಹೆಚ್ಚಾಗಿ ಗ್ರಾಹಕರಿಗೂ ತೊಂದರೆ ಆಗುತ್ತದೆ.

ಒಟ್ಟಾರೆ ಯಾಗಿ ಬಿಜೆಪಿ ಸರ್ಕಾರದ ಈ ಮೂರು ಕೃಷಿ ಕಾನೂನುಗಳು ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆ ಯನ್ನು ಕಳಚಿ ಹಾಕುವ, ಆಹಾರ ಧಾನ್ಯಗಳನ್ನು ಸರ್ಕಾರ ಖರೀದಿಸುವ ವ್ಯವಸ್ಥೆಯನ್ನು ಕಳಚಿ ಹಾಕುವ, ಆ ಮೂಲಕ 81 ಕೋಟಿ ಭಾರತೀಯರು ಸೌಲಭ್ಯ ಪಡೆಯುತ್ತಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕುವ ಉದ್ದೇಶ ಹೊಂದಿದೆ. ಅದ್ದರಿಂದಲೇ ನಾವು ಹೇಳುತ್ತಿರುವುದು; ಈ ಕೃಷಿ ಕಾನೂನುಗಳು ಕೇವಲ ರೈತ ವಿರೋಧಿ ಮಾತ್ರವಲ್ಲ, ಮೂಲಭೂತವಾಗಿ ಜನ ವಿರೋಧಿಯಾಗಿವೆ .

ಅದೇ ರೀತಿ ಈ ಕೃಷಿ ಕಾನೂನುಗಳು ಸಂವಿಧಾನ ಬಾಹಿರವಾದವು. ಈ ವಿಷಯವಾಗಿ ನಮ್ಮ ಸಂವಿಧಾನವು ಸ್ಪಷ್ಟವಾದ ಗೆರೆಗಳನ್ನು ಎಳೆದಿದ್ದು ಕೃಷಿಯು ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿದೆ. ಕೇಂದ್ರ ಸರ್ಕಾರ ಬೇರೆ ಎಲ್ಲಾ ವಿಚಾರಗಳಲ್ಲಿ ತೋರಿಸಿರುವಂತೆ ಸಂವಿಧಾನಕ್ಕೆ ಸಂಪೂರ್ಣ ಅಗೌರವವನ್ನು ಮತ್ತು ಅವಿಧೇಯತೆಯನ್ನು ತೋರಿಸಿ ಒಕ್ಕೂಟ ತತ್ವಗಳನ್ನು ಗಾಳಿಗೆ ತೂರಿದೆ. ಮತ್ತು ರಾಜ್ಯಗಳ ಅಧಿಕಾರದಲ್ಲಿ ಹಸ್ತಕ್ಷೇಪ ನಡೆಸಿ ಸಂಸತ್ತಿನಲ್ಲಿ ಈ ಕಾನೂನುಗಳನ್ನು ಅಂಗೀಕರಿಸಿದೆ. ಎಡಪಕ್ಷಗಳು ಮತ್ತು ಇತರೆ ಪಕ್ಷಗಳ ಸಂಸದರು ಸಂಸತ್ತಿನಲ್ಲಿ ಪ್ರಬಲವಾಗಿ ವಿರೋಧಿಸಿವೆ. ಆದರೆ ಅಘಾತಕಾರಿಯಾಗಿ ಸರ್ವಾಧಿಕಾರಿ ಪ್ರಕ್ರಿಯೆಗಳನ್ನು ಬಳಸಿ ಈ ಕಾನೂನುಗಳಿಗೆ ಸಂಸತ್ತಿನ ಅಂಗೀಕಾರ ಪಡೆಯಲಾಗಿದೆ.

ನಮ್ಮ ಬೇಡಿಕೆ ಸುಸ್ಪಷ್ಟವಾಗಿದೆ. ಈ ಮೂರು ಕಾನೂನುಗಳನ್ನು ಹಿಂಪಡೆಯಲು ನಾವು ಬಯಸುತ್ತೇವೆ. ಈ ಬೇಡಿಕೆ ಈಡೇರುವವರೆಗೂ ಒಂಬತ್ತು (ಈಗ ಹತ್ತು) ತಿಂಗಳಿಂದಲೂ ನಡೆಸಿಕೊಂಡು ಬರುತ್ತಿರುವ ಐತಿಹಾಸಿಕ ಹೋರಾಟ ಮುಂದುವರೆಯುತ್ತದೆ.



# ಅಕ್ಟೋಬರ್ 7: ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ
# ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಕರೆ

## ಕಾರ್ಮಿಕ ವರ್ಗದಿಂದ ರಾಷ್ಟ್ರೀಯ ಆಸ್ತಿಗಳನ್ನು, ಶ್ರಮಜೀವಿ ಜನಗಳ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸುವ 'ಮಿಷನ್ ಭಾರತ'

10 ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಹಲವು ವಲಯವಾರು ಸ್ವತಂತ್ರ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆ ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ಸರಕಾರ ಭಾರತವನ್ನು ಮಾರಾಟಕ್ಕೆ ಇಟ್ಟಿದೆ, ಭಾರತವನ್ನು ಉಳಿಸುವುದು ಈಗ ಕಾರ್ಮಿಕ ವರ್ಗದ ಮುಮದಿರುವ ಕಾರ್ಯಭಾರ ಎಂದು ಸಪ್ಟಂಬರ್23ರಂದು ಒಂದು ಹೇಳಿಕೆಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಪ್ರಕಟಿಸಿರುವ 'ರಾಷ್ಟ್ರೀಯ ನಗದೀಕರಣ ಕ್ರಮ ಸರಣಿ(ನ್ಯಾಷನಲ್ ಮೊನೆಟೈಸೇಷನ್ ಪೈಪ್‌ಲೈನ್–ಎನ್‌ಎಂಪಿ) ಸೇರಿದಂತೆ ಕೇಂದ್ರ ಸರಕಾರದ ರಾಷ್ಟ್ರ–ವಿರೋಧಿ, ಜನ–ವಿರೋಧಿ ವಿಧ್ವಂಸಕಾರೀ ಪರಿಯೋಜನೆಗಳ ವಿರುದ್ಧ ನಿರ್ಣಾಯಕ ಪ್ರತಿರೋಧ ಹೋರಾಟವನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲು ನಿರ್ಧರಿಸಿದೆ. ಈ ಕುರಿತ ಮಾರ್ಗನಿಕಾಶೆಗಳನ್ನು ರೂಪಿಸಿದ್ದು ಅದರ ಬಾಗವಾಗಿ ಅಕ್ಟೋಬರ್ 7ರಂದು 'ರಾಷ್ಟ್ರೀಯ ಪ್ರತಿಭಟನಾ ದಿನ'ವನ್ನು ಆಚರಿಸಲು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಬೃಹತ್ ಮತಪ್ರದರ್ಶನ/ಚಳುವಳಿ/ ಅಣಿನೆರಿಕೆಗಳ ಮೂಲಕ ದೇಶವ್ಯಾಪಿಯಾಗಿ ಅದನ್ನು ನಡೆಸಲಾಗುವುದು ಎಂದಿದೆ.

ಅಲ್ಲದೆ, ದಸರಾದ ನಂತರ, ದೀಪಾವಳಿಯ ಮೊದಲ ಒಂದು ದಿನಾಂಕದಂದು ಸರಕಾರದ ಜನ–ವಿರೋಧಿ, ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ನವದೆಹಲಿಯಲ್ಲಿ ಕಾರ್ಮಿಕರ ರಾಷ್ಟ್ರೀಯ ಸಮಾವೇಶ. ನಡೆಸಲಾಗುವುದು. ಅದರಲ್ಲಿ ಸೂಕ್ತ ಸಮಯದಲ್ಲಿ ಬಹುದಿನಗಳ ಮುಷ್ಕರ ಕಾರ್ಯಾಚರಣೆಗೆ ಸಿದ್ಧತೆಯಾಗಿ ಮುಂದಿನ ಕಾರ್ಯಾಚರಣೆಗಳು/ಚಳುವಳಿಯನ್ನು ನಿರ್ಧರಿಸಲಾಗುವುದು ಎಂದಿದೆ.

ಈ ನಡುವೆ ಎನ್‌ಎಂಪಿ ನೇರವಾಗಿ ಮತ್ತು ತಕ್ಷಣವೇ ತಟ್ಟುವ ವಲಯಗಳಲ್ಲಿ ಮುಷ್ಕರಗಳೂ ಸೇರಿದಂತೆ ವಲಯವಾರು ಕಾರ್ಯಾಚರಣೆಗಳಿಗೆ ಬೆಂಬಲವನ್ನು ಜಂಟಿ ವೇದಿಕೆ ವ್ಯಕ್ತಪಡಿಸಿದೆ.

"ನಾವು, ಕಾರ್ಮಿಕ ವರ್ಗ, ಇದನ್ನು 'ಮಿಷನ್ ಭಾರತ' ಎಂದು ಕೈಗೆತ್ತಿಕೊಳ್ಳೋಣ. ಅಧಿಕಾರದಲ್ಲಿರುವ ಪ್ರಸಕ್ತ ಸರಕಾರದ ಈ ಪಕ್ಕಾ ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಒಂದು ದೃಢ ಪ್ರತಿರೋಧ ಹೋರಾಟವನ್ನು ಬೆಳೆಸುವ ಮೂಲಕ ನಮ್ಮ ರಾಷ್ಟ್ರೀಯ ಆಸ್ತಿಗಳನ್ನು, ಇಡೀ ದೇಶವನ್ನು ಮತ್ತು ಶ್ರಮಜೀವಿ ಜನಗಳ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸುವ ಗುರಿಯನ್ನು ಇಟ್ಟುಕೊಳ್ಳೋಣ" ಎಂದು ಅದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ

ಜಂಟಿ ವೇದಿಕೆಯ ಈ ಹೇಳಿಕೆಗೆ ನೀಡಿದ್ದು ಇದಕ್ಕೆ ಐಎನ್‌ಟಿಯುಸಿ, ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಕಾರ್ಮಿಕರ ಮತ್ತು ನೌಕರರ ಒಕ್ಕೂಟಗಳು' ಸಹಿ ಹಾಕಿವೆ.

ಈ ಮೊದಲು ಈ ಜಂಟಿ ವೇದಿಕೆ ಸಂಯುಕ್ತ ಕಿಸಾನ್ ಮೋರ್ಚಾದ 'ಭಾರತ ಬಂದ್' ಕರೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತ್ತು.(ಪುಟ 2 ನೋಡಿ)

ಜಂಟಿ ವೇದಿಕೆಯ ಸಪ್ಟಂಬರ್ 23ರ ಹೇಳಿಕೆಯ ಪೂರ್ಣ ಪಾಟವನ್ನು ಇಲ್ಲಿ ಕೊಡಲಾಗಿದೆ.

ಈ ವಿಧ್ವಂಸಕಾರೀ ಧೋರಣೆಗಳ ಹೊರೆಯನ್ನು, ಪ್ರತಿಯೊಂದು ಸರಕಿನ ಸತತ ಬೆಲೆಯೇರಿಕೆ, ಉದ್ಯೋಗಗಳ, ಜೀವನೋಪಾಯಗಳ ಸತತ ನಷ್ಟ ಮುಗಿಲೆತ್ತರ ಏರುತ್ತಿರುವ ನಿರುದ್ಯೋಗ, ಹೆಚ್ಚುತ್ತಿರುವ ಹಸಿವು ಮತ್ತು ದಾರಿದ್ರ್ಯ ಹಾಗೂ ಶ್ರಮಜೀವಿಗಳ ಹಕ್ಕುಗಳ ಮೇಲೆ ಆಕ್ರೋಶಕಾರೀ ಹಲ್ಲೆಗಳ ಸ್ವರೂಪಗಳಲ್ಲಿ 'ಹೊರುತ್ತಿರುವವರು ಶ್ರಮಜೀವಿಗಳು, ಇದರೊಂದಿಗೇ ಕಾರ್ಪೊರೇಟ್–ದೊಡ್ಡ ವ್ಯಾಪಾರಸ್ಥ ವರ್ಗದ ಹಿಡಿಯಷ್ಟು ಶ್ರೀಮಂತರು–ಸೂಪರ್‌ಶ್ರೀಂತರ ಸಂಪತ್ತಿನಲ್ಲಿ ಅಗಾಧ ಹೆಚ್ಚಳದ ಮೂಲಕ ಹೊಲಸು ಅಸಮಾನತೆಯ ಪ್ರದರ್ಶನ ನಡೆಯುತ್ತಿದೆ.

ಜನಸಾಮಾನ್ಯರ ನಡುವೆ ಈ ಜನ–ವಿರೋಧಿ, ರಾಷ್ಟ್ರ–ವಿರೋಧಿ ಧೋರಣೆಗಳ ಆಳ್ವಿಕೆಯ ವಿರುದ್ಧ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ, ಜನತೆಯ ಜೀವ ಮತ್ತು ಜೀವನೋಪಾಯಗಳ ಮೇಲೆ ಎಸಗುತ್ತಿರುವ ಅಪರಾಧದ ವಿರುದ್ಧ ತೀವ್ರ ಪ್ರಚಾರಾಂದೋಲನವನ್ನು ಹರಡಿಸೋಣ. ಅವರ ಕೈಸೆರೆಯಾಗಿರುವ ಮಾಧ್ಯಮ ಬೆಂಬಲಿತ ಪ್ರಚಾರದ ಮೂಲಕ ಮರೆಮಾಚಿರುವ ಆಳುವ ವರ್ಗದ ನಿಜವಾದ ಜನ–ವಿರೋಧಿ, ರಾಷ್ಟ್ರ–ವಿರೋಧಿ ಹೊಲಸು ಮುಖವನ್ನು ಬಯಲಿಗೆಳೆಯೋಣ.

ನಾವು ಈ ಅಪಪ್ರಚಾರವನ್ನು ನಿಜಸಂಗತಿಗಳೊಂದಿಗೆ ಎದುರಿಸಬೇಕಾಗಿದೆ. ಈ ನಿಜಸಂಗತಿ ಎಲ್ಲರಿಗೂ ಕಾಣುತ್ತಿದೆ– ಅದೇ ಬೆಲೆಯೇರಿಕೆ.

ಆದ್ದರಿಂದ ಸಹಿಸಂಗ್ರಹ ಆಂದೋಲನದಲ್ಲಿ ಭಾಗವಹಿಸಿ, ಇದನ್ನು ನೆರೆಕರೆಯ ಪ್ರತಿಯೊಬ್ಬರ ಬಳಿಯೂ ಒಯ್ಯಿರಿ. ಇದನ್ನು 'ಮಿಷನ್ ಭಾರತ'ವಾಗಿ ಮಾಡೋಣ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಕೇಂದ್ರದಲ್ಲಿನ ಆಳ್ವಿಕೆಯ ರಾಷ್ಟ್ರ–ವಿರೋಧಿ ವಿಧ್ವಂಸಕಾರೀ ಪರಿಯೋಜನೆಗಳ ವಿರುದ್ಧ ನಿರ್ಣಾಯಕ ಪ್ರತಿರೋಧ ಹೋರಾಟವನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲು ಈ ಕೆಳಗಿನ ಮಾರ್ಗನಕಾಶೆಯನ್ನು ನಿರ್ಧರಿಸಿದೆ:

1. **ಈ ವಿಧ್ವಂಸಕಾರೀ ಧೋರಣೆಗಳ ಆಳ್ವಿಕೆ ಮತ್ತು ಎಲ್ಲಾ ರಂಗಗಳ ಜನಸಾಮಾನ್ಯರ ಜೀವ ಮತ್ತು ಜೀವನೋಪಾಯಗಳ ಮೇಲೆ ಅವುಗಳ ದುರ್ಭರ ಪರಿಣಾಮದ ವಿರುದ್ಧ ಜನಸಾಮಾನ್ಯರ ನಡುವೆ ವಿಸ್ತಾರವಾದ ಸತತ ಪ್ರಚಾರಾಂದೋಲನಕ್ಕೆ ಸರ್ವತೋಮುಖ ಸಾಮೂಹಿಕ ಮುತುವರ್ಜಿ.**
2. **ಅಕ್ಟೋಬರ್ 7, 2021ರಂದು ಜಿಲ್ಲಾ ಮಟ್ಟದ ವರೆಗಾದರೂ ಬೃಹತ್ ಮತಪ್ರದರ್ಶನ/ಚಳುವಳಿ/ ಅಣಿನೆರಿಕೆಗಳ ಮೂಲಕ ದೇಶವ್ಯಾಪಿ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ.**
3. **ಸರಕಾರದ ಜನ–ವಿರೋಧಿ, ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ನವದೆಹಲಿಯಲ್ಲಿ ಕಾರ್ಮಿಕರ ರಾಷ್ಟ್ರೀಯ ಸಮಾವೇಶ. ಇದು ಜನತೆಯ ಮೇಲೆ ಲೂಟಿ ಮತ್ತು ಕೊಳ್ಳೆಯ ಇತ್ತೀಚಿನ ಕಸರತ್ತು, ಅಂದರೆ ಎನ್‌ಎಂಪಿಯ ಮೇಲೆ ಗಮನ ಕೇಂದ್ರೀಕರಿಸುತ್ತದೆ. ದಸರಾದ ನಂತರ, ದೀಪಾವಳಿಯ ಮೊದಲ ಒಂದು ದಿನಾಂಕದಂದು ನಡೆಯಲಿರುವ ಈ ಸಮಾವೇಶ ಸೂಕ್ತ ಸಮಯದಲ್ಲಿ ಬಹುದಿನಗಳ ಮುಷ್ಕರ ಕಾರ್ಯಾಚರಣೆಗೆ ಸಿದ್ಧತೆಯಾಗಿ ಮುಂದಿನ ಕಾರ್ಯಾಚರಣೆಗಳು/ಚಳುವಳಿಯನ್ನು ನಿರ್ಧರಿಸುತ್ತದೆ.**
4. **ಎನ್‌ಎಂಪಿ ನೇರವಾಗಿ ಮತ್ತು ತಕ್ಷಣವೇ ತಟ್ಟುವ ವಲಯಗಳಲ್ಲಿ ಮುಷ್ಕರಗಳೂ ಸೇರಿದಂತೆ ವಲಯವಾರು ಕಾರ್ಯಾಚರಣೆಗಳಿಗೆ ಬೆಂಬಲ.**

ಕೇಂದ್ರ ಹಣಕಾಸು ಮಂತ್ರಿಗಳು 23 ಆಗಸ್ಟ್ 2021ರಂದು 'ರಾಷ್ಟ್ರೀಯ ನಗದೀಕರಣ ಕ್ರಮ ಸರಣಿ(ನ್ಯಾಷನಲ್ ಮೊನೆಟೈಸೇಷನ್ ಪೈಪ್‌ಲೈನ್–ಎನ್‌ಎಂಪಿ) ಎಂಬುದನ್ನು ಪ್ರಕಟಿಸಿದರು.ಈ ಕ್ರಮಗಳ ಮೂಲಕ ಮುಂದಿನ ನಾಲ್ಕು ವರ್ಷಗಳಲ್ಲಿ 6ಲಕ್ಷ ಕೋಟಿ ರೂ.ಗಳನ್ನು ಸಂಗ್ರಹಿಸಲಾಗುತ್ತದೆ ಎಂದು ಹೇಳಲಾಗಿದೆ. ಈ ಯೋಜನೆಯ ಅಡಿಯಲ್ಲಿ ರೂ.1.6ಲಕ್ಷ ಕೋಟಿ ಮೌಲ್ಯದ 26,700 ಕಿ.ಮೀ. ಹೆದ್ದಾರಿಗಳು, 400 ರೈಲ್ವೆ ನಿಲ್ದಾಣಗಳು ಮತ್ತು 150 ರೈಲುಗಳು(ರೂ.1.50 ಲಕ್ಷ ಕೋಟಿ), 42,300 ಸರ್ಕಿಟ್‌ಕಿ.ಮೀ.ಗಳ ವಿದ್ಯುತ್ ಪ್ರಸರಣ ಲೈನುಗಳು(ರೂ.0.67ಲಕ್ಷ ಕೋಟಿ), 5000 ಮೆಗಾವಾಟ್ ಜಲ, ಸೌರ ಮತ್ತು ಪವನ ವಿದ್ಯುತ್ ಉತ್ಪಾದನಾ ಆಸ್ತಿಗಳು(ರೂ.0.32 ಲಕ್ಷ ಕೋಟಿ), 8000ಕಿ.ಮೀ. ರಾಷ್ಟ್ರೀಯ ಅನಿಲ ಪೈಪ್‌ಲೈನುಗಳು(ರೂ.0.24ಲಕ್ಷ ಕೋಟಿ), ಇಂಡಿಯನ್ ಆಯಿಲ್ ಮತ್ತು ಹಿಂದುಸ್ತಾನ್ ಪಟ್ರೋಲಿಯಂ ಕಾರ್ಪೊರೇಷನ್‌ಗಳ 4000ಕಿ.ಮೀ. ಪೈಪ್‌ಲೈನ್(0.22ಲಕ್ಷ ಕೋಟಿ), ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್‌ನ ಟವರ್‌ಗಳು(ರೂ.0.39ಲಕ್ಷ ಕೋಟಿ), 21 ವಿಮಾನ ನಿಲ್ದಾಣಗಳು ಮತ್ತು 31 ಬಂದರುಗಳು(ರೂ.0.34 ಲಕ್ಷ ಕೋಟಿ), 160 ಕಲ್ಲಿದ್ದಲು ಗಣಿಗಾರಿಕೆ ಪ್ರಾಜೆಕ್ಟ್‌ಗಳು(ರೂ.0.32 ಲಕ್ಷ ಕೋಟಿ), ಮತ್ತು 2 ಕ್ರೀಡಾಂಗಣಗಳು(ರೂ.0.11ಲಕ್ಷ ಕೋಟಿ) ಮುಂತಾದ ನಮ್ಮ ವಿವಿಧ ಸರಕಾರೀ ಆಸ್ತಿಗಳನ್ನು ಭೋಗ್ಯಕ್ಕೆ ಕೊಡುವ ಯೋಜನೆ ಹಾಕಿಕೊಳ್ಳಲಾಗಿದೆ. ಇದರಿಂದ ಬರುವ ಹಣವನ್ನು ಮೂಲರಚನೆಗಳನ್ನು ವಿಸ್ತರಿಸಲು ಹೂಡಲಾಗುವುದು ಎಂದು ಸರಕಾರ ಹೇಳಿಕೊಂಡಿದೆ. ಇದು ಎಲ್ಲ ಮೂಲರಚನೆ ಆಸ್ತಿಗಳನ್ನು ಸುಮಾರಾಗಿ ಪುಕ್ಕಟೆಯಾಗಿಯೇ ಖಾಸಗಿ ಕೈಗಳಿಗೆ ಹಸ್ತಾಂತರಿಸಿ, ಅವರು ಯಾವುದೇ ಬಂಡವಾಳ ವೆಚ್ಚದ ಬಾಧ್ಯತೆಯಿಲ್ಲದೆ ಅಪಾರ ಆದಾಯಗಳನ್ನು ಪೇರಿಸಿಕೊಳ್ಳಲು, ಅದರಲ್ಲಿ ಸ್ವಲ್ಪವೇ ಭಾಗವನ್ನು ಸರಕಾರದೊಂದಿಗೆ ಹಂಚಿಕೊಳ್ಳಲು ಅವಕಾಶ ಮಾಡಿಕೊಡುವ ಒಂದು ದುಷ್ಟ ತಂತ್ರವಲ್ಲದೆ ಬೇರೇನೂ ಅಲ್ಲ.

ಆದ್ದರಿಂದಲೇ ಇದನ್ನು ತೆರಿಗೆದಾರರ ಹಣದಿಂದ ಕಟ್ಟಿದ ರಾಷ್ಟ್ರೀಯ ಆಸ್ತಿಗಳ ಪುಕ್ಕಟೆ ಖಾಸಗೀಕರಣ(ಅಥವ ಧರ್ಮಾರ್ಥ ಕೊಡುಗೆ) ಎಂದು ಟೀಕಿಸಲಾಗುತ್ತಿದೆ. ಈ ಆಸ್ತಿಗಳು ಸರಕಾರದ ಒಡೆತನದಲ್ಲೇ ಇರುತ್ತವೆ, ಆದ್ದರಿಂದ ಇದು ಏಕ್‌ದಂ ಖಾಸಗೀಕರಣ ಅಲ್ಲ ಎಂದು ಶ್ರೀಮತಿ ನಿರ್ಮಲಾ ಸೀತಾರಾಮನ್ ಇದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಈ ಸಮರ್ಥನೆಯನ್ನು ಯಾರಿಗೂ ಒಪ್ಪಿಗೆಯಾಗುತ್ತಿಲ್ಲ.

ಈ ಚರ್ಚೆ ನಡೆಯುತ್ತಿರುವಾಗಲೇ, ಸರಕಾರದಿಂದ ಎಲ್ಲ ಗ್ರಾಮ ಪಂಚಾಯತುಗಳಿಗೆ ತಮ್ಮ ಆಸ್ತಿಗಳನ್ನು, ಅಂದರೆ ಭೂಮಿಗಳು, ಜಲಾಗಾರ್‌ಗಳು, ಕಟ್ಟಡಗಳು ಇತ್ಯಾದಿಗಳನ್ನು ನಗದೀಕರಿಸಿ ತಮ್ಮ ಹಣಕಾಸಿಗೆ ಸೇರಿಸಿಕೊಳ್ಳಬೇಕು ಎಂದು ಸಲಹಾ ಆದೇಶಗಳನ್ನು ಕಳಿಸಲಾಗಿದೆ. ಗ್ರಾಮ ಸಮಾಜದ ಮೇಲೆ ಇದರ ಪೈಶಾಚಿಕ ಪರಿಣಾಮಗಳನ್ನು ಊಹಿಸಿಕೊಳ್ಳಬಹುದಷ್ಟೇ.

ಸರಕಾರದ ಈ ನಡೆಯ ತಕ್ಷಣದ ಪರಿಣಾಮವೆಂದರೆ ಖಾಸಗಿಯವರಿಗೆ ಭೋಗ್ಯಕ್ಕೆ ಕೊಡಲಾಗುವ ಎಲ್ಲ ಮೂಲರಚನಾ ಸೇವೆಗಳಿಗೆ ಜನಸಾಮಾನ್ಯರು ಹೆಚ್ಚಿನ ಬೆಲೆಗಳನ್ನು ತೆರಬೇಕಾಗುತ್ತದೆ ಎಂಬುದು ಯಾರಿಗಾದರೂ ತಿಳಿಯುವ ಸಂಗತಿ. ಏಕೆಂದರೆ ಅಧಿಕೃತ ಎನ್‌ಎಂಪಿ ದಸ್ತಾವೇಜಿನ ಪ್ರಕಾರವೇ ಇವನ್ನು ವಹಿಸಿಕೊಳ್ಳುವ ಖಾಸಗಿಯವರಿಗೆ ಈ ಎಲ್ಲ ಮೂಲರಚನೆಗಳ ಬಳಕೆ/ಸೇವಾ ಶುಲ್ಕಗಳನ್ನು ಏರಿಸುವ ಮತ್ತು ಜನಸಾಮಾನ್ಯರನ್ನು ಸುಲಿದು ಲಾಭದ ಸುರಿಮಳೆ ಪಡೆಯುವ ಅಧಿಕಾರವಿರುತ್ತದೆ.

ಇದರಿಂದ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂಬುದು ಸರಕಾರದ ವಾದ. ಆದರೆ, ತದ್ವಿರುದ್ಧವಾಗಿ ಸಾವಿರಾರು ಕಾರ್ಮಿಕರು ಕೆಲಸ ಕಳಕೊಳ್ಳುತ್ತಾರೆ, ಇದರಿಂದ ಈಗಾಗಲೇ ಆತಂಕಕಾರಿಯಾಗಿರುವ ನಿರುದ್ಯೋಗ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳುತ್ತದೆ. ಉದ್ಯೋಗದ ಗುಣಮಟ್ಟ ಇನ್ನಷ್ಟು ಹದಗೆಡುತ್ತದೆ. ಇದರಿಂದ ಅತಿ ಹೆಚ್ಚು ಬಾಧಿತರಾಗುವವರು ಪರಿಶಿಷ್ಟ ಜಾತಿಗಳು/ಪಂಗಡಗಳಿಗೆ ಸೇರಿದವರು. ಏಕೆಂದರೆ ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಾತಿ ಇಲ್ಲ.

ಇದರೊಂದಿಗೆ, 100 ಲಾಭ'ದಲ್ಲಿರುವ ಖಾಸಗಿ ವಲಯದ ಉದ್ದಿಮೆಗಳನ್ನು ಮಾರುವ ಯೋಜನೆಯನ್ನು ಸರಕಾರ ಪ್ರಕಟಿಸಿದೆ. ಇದರ ಅರ್ಥ ಸರಕಾರದ ಖಜಾನೆಗೆ ಹರಿದು ಬರುವ ಲಾಭಗಳೂ ನಿಂತುಹೋಗುತ್ತವೆ. ಈ ಎಲ್ಲ ಕ್ರಮಗಳಿಂದ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸರಕಾರದ ಸಾಮರ್ಥ್ಯ ಕೂಡ ಕುಂಠಿತಗೊಳ್ಳುತ್ತದೆ ಎಂದು ತಿಳಿಯಲು ಅರ್ಥಶಾಸ್ತ್ರದ ಆಳವಾದ ಜ್ಞಾನವೇನೂ ಬೇಕಾಗಿಲ್ಲ.

ಸರಕಾರ ತನ್ನ ಖಜಾನೆಯನ್ನು ತುಂಬಿಸಿಕೊಳ್ಳಲು ಬೇರೆ ಮಾರ್ಗಗಳೂ ಇವೆ, ಭಾರತದಲ್ಲಿನ ಶ್ರೀಮಂತರು ಮತ್ತು ಸೂಪರ್ ಶ್ರೀಮಂತರ ಮೇಲೆ ತೆರಿಗೆ ಹಾಕಿ ಇದನ್ನು ಸಂಗ್ರಹಿಸಬಹುದು ಎಂದು ತಿಳಿಯಲು ಕೂಡ ಆಳವಾದ ಅರ್ಥಶಾಸ್ತ್ರದ ಜ್ಞಾನ ಬೇಕಾಗಿಲ್ಲ. ಆದರೆ ಈ ಸರಕಾರ ಇದನ್ನು ಮಾಡಲು ನಿರಾಕರಿಸುತ್ತಿದೆ. ಏಕೆಂದರೆ ಈ ಶ್ರೀಮಂತರು ಮತ್ತು ಸೂಪರ್ ಶ್ರೀಮಂತರು ಅವರ ಮಿತ್ರರು, ಅದಕ್ಕೂ ಮಿಗಿಲಾಗಿ ಅವರ ಯಜಮಾನರುಗಳು.

ಜನಸಾಮಾನ್ಯರ ಹಿತಗಳಿಗೆ ಬಾಧಕವಾಗುವ ಧೋರಣೆಗಳಿವು ಎಂಬುದು ಸ್ವಯಂವೇದ್ಯ. ಆದರೂ ಈ ಸರಕಾರ ಏಕೆ ಇಂತಹ ಧೋರಣೆಗಳನ್ನು ಅನುಸರಿಸ ಹೊರಟಿದೆ? ಏಕೆಂದರೆ ಇವು, ಅಧಿಕಾರದಲ್ಲಿರುವ ಪಕ್ಷಕ್ಕೆ ನಿಧಿ ಪೂರೈಸುವ ಕಾರ್ಪೊರೇಟ್‌ಗಳ ಹಿತಸಾಧಿಸುವಂತವುಗಳು ಎಂಬುದೇ ಇದಕ್ಕೆ ಕೊಡಬಹುದಾದ ಕಟುವಾದ ಉತ್ತರ.

**ಹಾಗಿದ್ದರೆ ಜನಸಾಮಾನ್ಯರು ಏನು ಮಾಡಬೇಕು?**

ಕೇಂದ್ರೀಯ ಕಾರ್ಮಿಕ ಸಂಘಗಳು, ಸ್ವತಂತ್ರ ಒಕ್ಕೂಟಗಳು ಮತ್ತು ಸಂಘಗಳು ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ದಾರಿ ತೋರಿಸುತ್ತಿವೆ. ದೇಶಾದ್ಯಂತ ಇದರ ವಿರುದ್ದ ದೃಢವಾಗಿ ಐಕ್ಯ ಪ್ರತಿರೋಧವನ್ನು ಕಟ್ಟುತ್ತಲೇ, ರಾಷ್ಟ್ರೀಯ ಅರ್ಥವ್ಯವಸ್ಥೆ ಮತ್ತು ಶ್ರಮಜೀವಿಗಳ ಮೇಲೆ ಈ ಹೀನ ಅಪರಾಧಗಳನ್ನು ಎಸಗುವವರನ್ನು ಅವಕಾಶ ಸಿಕ್ಕಾಗಲೆಲ್ಲಾ, ಅಧಿಕಾರದಿಂದ ಹೊರಗೆಸೆಯುವುದೇ ಆ ದಾರಿ.

ನಾವು, ಕಾರ್ಮಿಕ ವರ್ಗ, ಇದನ್ನು 'ಮಿಷನ್ ಭಾರತ' ಎಂದು ಕೈಗೆತ್ತಿಕೊಳ್ಳೋಣ; ಅಧಿಕಾರದಲ್ಲಿರುವ ಪ್ರಸಕ್ತ ಸರಕಾರದ ಈ ಪಕ್ಕಾ ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಒಂದು ದೃಢ ಪ್ರತಿರೋಧ ಹೋರಾಟವನ್ನು ಬೆಳೆಸುವ ಮೂಲಕ ನಮ್ಮ ರಾಷ್ಟ್ರೀಯ ಆಸ್ತಿಗಳನ್ನು, ಇಡೀ ದೇಶವನ್ನು ಮತ್ತು ಶ್ರಮಜೀವಿ ಜನಗಳ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸುವ ಗುರಿಯನ್ನು ಇಟ್ಟುಕೊಳ್ಳೋಣ; ಏಕೆಂದರೆ

# ಪೆಗಾಸಸ್ ಪ್ರಕರಣ: ತನಿಖೆಗೆ ಸುಪ್ರಿಂ ಕೋರ್ಟಿನಿಂದ ತಜ್ಞರ ಸಮಿತಿ ನೇಮಿಸುವ ಸೂಚನೆ

ಪೆಗಾಸಸ್ ಬೇಹುಗಾರಿಕೆ ಹಗರಣದ ಕುರಿತು ಸಮಗ್ರವಾಗಿ ತನಿಖೆಯನ್ನು ಕೈಗೊಳ್ಳಲು ಸುಪ್ರೀಂ ಕೋರ್ಟ್ ಮುಂದಿನ ವಾರ ತಜ್ಞರ ಸಮಿತಿ ರಚಿಸಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ ರಮಣ ಹೇಳಿಕೆ ನೀಡಿದ್ದು, ಮುಂದಿನ ವಾರ ಮಧ್ಯಂತರ ಆದೇಶ ನೀಡುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

"ನಾವು ಮುಂದಿನ ವಾರದೊಳಗೆ ತಾಂತ್ರಿಕ ತಜ್ಞರ ತಂಡದ ಸದಸ್ಯರನ್ನು ಅಂತಿಮಗೊಳಿಸಲು ಮತ್ತು ಆದೇಶಗಳನ್ನು ಹೊರಡಿಸಲು ಸಾಧ್ಯವಾಗುತ್ತದೆ" ಎಂದು ಮುಖ್ಯ ನ್ಯಾಯಮೂರ್ತಿ ರಮಣ ಅವರು ಹೇಳಿದ್ದಾರೆ. ಕೆಲವು ತಜ್ಞರು ವೈಯಕ್ತಿಕ ಕಾರಣಗಳಿಂದ ಸಮಿತಿಯ ಭಾಗವಾಗಲು ಸಾಧ್ಯವಾಗುತ್ತಿಲ್ಲ ಎಂಬ ಅಂಶವು ಇದೆ ಎಂದು ಉಲ್ಲೇಖಿಸಿದ್ದಾರೆ.

"ನಾವು ಈ ವಾರದ ಮೊದಲು ಈ ವಿಷಯದ ಬಗ್ಗೆ ಆದೇಶವನ್ನು ರವಾನಿಸಲು ಬಯಸಿದ್ದೇವೆ ಆದರೆ ಕೆಲವು ಸದಸ್ಯರನ್ನು ನಾವು (ತಜ್ಞರು) ಸಮಿತಿಗೆ ಪರಿಗಣಿಸಲು ಯೋಚಿಸಿದ್ದೇವೆ ವೈಯಕ್ತಿಕ ಕಾರಣಗಳಿಗಾಗಿ ಅವರು ಈ ಸಮಿತಿಯ ಭಾಗವಾಗಲು ನಿರಾಕರಿಸಿದರು. ಹೀಗಾಗಿ ವಿಳಂಬವಾಗಿದೆ ಎಂದು ಅವರು ಹೇಳಿದರು.

ಇಸ್ರೇಲ್ ಮೂಲದ ಬೇಹುಗಾರಿಕಾ ತಂತ್ರಾಂಶ ಸಂಸ್ಥೆ ಎನ್‌ಎಸ್‌ಓ ತನ್ನ ಪೆಗಸಸ್ ಸ್ಪೈವೇರ್‌ಗೆ ಹೆಸರುವಾಸಿಯಾಗಿದ್ದು ಪರಿಶೀಲಿಸಿದ ಸರ್ಕಾರಗಳಿಗೆ ಮಾತ್ರ ಇದನ್ನು ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿತ್ತು. ಖಾಸಗಿ ಸಂಸ್ಥೆಗಳಿಗೆ ಮಾರಾಟ ಮಾಡುವುದಿಲ್ಲ ಎಂದು ಹೇಳಿಕೊಂಡಿತ್ತು. ಆದರೂ ಇದು ಯಾವ ಸರ್ಕಾರಗಳಿಗೆ ತನ್ನ ವಿವಾದಿತ ಉತ್ಪನ್ನವನ್ನು ಮಾರಾಟ ಮಾಡಿದೆ ಎಂಬುದನ್ನು ಬಹಿರಂಗಪಡಿಸಿಲ್ಲ.

ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು, ವಕೀಲರು, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಸಾಂವಿಧಾನಿಕ ಹುದ್ದೆಗಳಲ್ಲಿರುವವರ ಮೇಲೆ ನಿಗಾ ಇಡಲು ಭಾರತ ಸರ್ಕಾರ ಸೇರಿದಂತೆ ಜಗತ್ತಿನಾದ್ಯಂತ ವಿವಿಧ ಸರ್ಕಾರಗಳು ಪೆಗಸಸ್ ಸಾಫ್ಟ್‌ವೇರ್ ನೆರವು ಪಡೆದಿವೆ ಎಂದು ಭಾರತದ 'ದಿ ವೈರ್' ಸೇರಿದಂತೆ ವಿಶ್ವದ ಹದಿನಾರು ಅಂತಾರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳ ಒಕ್ಕೂಟ ತನಿಖಾ ವರದಿ ಪ್ರಕಟಿಸಿವೆ.

ಇಸ್ರೇಲಿನ ಪೆಗಾಸಸ್ ತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಿರುವ ಹಗರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿ ಬಹಿರಂಗವಾಗಿ ಚರ್ಚಿಸದಂತೆ ಸುಪ್ರೀಂಕೋರ್ಟ್ ಈಗಾಗಲೇ ಆದೇಶಿಸಿದೆ. ಕಳೆದ ಆಗಸ್ಟ್ 10ರಂದು ಹಿರಿಯ ಪತ್ರಕರ್ತ ಎನ್ ರಾಮ್, ಶಶಿಕುಮಾರ್, ಸಿಪಿಐ(ಎಂ) ಸಂಸದ ಜಾನ್ ಬ್ರಿತ್ತಾಸ್ ಹಾಗೂ ವಕೀಲ ಎಂಎಲ್ ಶರ್ಮಾ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್ ವಿ ರಮಣ ಮತ್ತು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ದ್ವಿಸದಸ್ಯ ಪೀಠವು ಈ ಹಿಂದೆ ವಿಚಾರಣೆ ನಡೆಸಿತ್ತು..

ಅರ್ಜಿದಾರರು ಸರಕಾರದ ಸಂಪುಟ ಕಾರ್ಯದರ್ಶಿಯಿಂದ ಒಂದು ಅಫಿಡವಿಟ್ ಅಥವ ನ್ಯಾಯಾಲಯದಿಮದ ಹಾಲಿ ನ್ಯಯಾಧೀಶರ ನೇತೃತ್ವದಲ್ಲಿ ಈ ಕುರಿತು ತನಿಖೆ ನಡೆಸಲು ಒಂದು ಸಮಿತಿಯನ್ನು ನೇಮಿಸಬೇಕು ಎಂದು ಕೇಳಿದ್ದರು.

ಸರಕಾರದ ಪರ ವಕೀಲರು ಸರಕಾರ ಈ ತಂತ್ರಾಂಶವನ್ನು ಬಳಸಿದೆಯೇ ಇಲ್ಲವೇ ಎಂದು ಸ್ಪಷ್ಟವಾಗಿ ಹೇಳಲು ಮತ್ತು ನ್ಯಾಯಾಲಯ ಹೇಳಿದಂತೆ ಒಂದು ವಿವರವಾದ ಅಫಿಡವಿಟ್ ಸಲ್ಲಿಸಲು ಹಿಂದೇಟು ಹಾಕಿದ ಮೇಲೆ ಸಪ್ಟಂಬರ್ 13ರಂದು ಇನ್ನು ಈ ಬಗ್ಗೆ ಸುಮ್ಮನೇ ಸಮಯ ಕಳೆಯುವುದು ಬೇಡ ಎಂದು ನ್ಯಾಯಪೀಠ ಟಿಪ್ಪಣಿ ಮಾಡಿತು. ಈ ಪ್ರಕರಣದಲ್ಲಿ ಸರಕಾರದ ನಿಲುವಿನ ಒಂದು ಸ್ಪಷ್ಟ ವಿಚಾರವನ್ನು ತಿಳಿಯಲೆಂದು ಒಂದು ವಿವರವಾದ ಅಫಿಡವಿಟ್ ಸಲ್ಲಿಸಲು ಸರಕಾರಕ್ಕೆ ಸಾಕಷ್ಟು ಅವಕಾಶ ಕೊಡಲಾಗಿದೆ. "ಸರಕಾರ ಒಂದು ಪ್ರತಿ–ಅಫಿಡವಿಟ್ ಸಲ್ಲಿಸುತ್ತದೆ ಎಂದು ಭಾವಿಸಿದ್ದೆವು... ನಾವು ಈಗ ಮಧ್ಯಂತರ ಆದೇಶವನ್ನು ಕೊಡುತ್ತೇವೆ" ಎಂದು ಮುಖ್ಯ ನ್ಯಾಯಾಧೀಶರು ಹೇಳಿದ್ದರು. ಹಿರಿಯ ಪತ್ರಕರ್ತರಾದ ಎನ್. ರಾಮ್ ಮತ್ತು ಶಶಿ ಕುಮಾರ್ ಅವರ ಪರ ವಕೀಲರಾದ ಕಪಿಲ್ ಸಿಬಾಲ್ ಅಫಿಡವಿಟ್ ಸಲ್ಲಿಸಲು ಸರಕಾರದ ನಕಾರ 'ನಂಬಲಸಾಧ್ಯ' ಎಂದು ಟಿಪ್ಪಣಿ ಮಾಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.




"ನೀವು ಪೆಗಾಸಸ್ ಬಳಸಿದ್ದೀರೋ–ಹೌದು ಅಥವ ಇಲ್ಲ"
ವ್ಯಂಗ್ಯಚಿತ್ರ: ಮಂಜುಲ್, ಪಸ್ಟ್ ಪೋಸ್ಟ್

# ಪಿಎಂ–ಕೇರ್ಸ್ ನಿಧಿ ಭಾರತ ಸರ್ಕಾರದಲ್ಲ! ದಿಲ್ಲಿ ಹೈಕೋರ್ಟಿಗೆ ಕೇಂದ್ರ ಸರಕಾರ ಹೇಳಿಕೆ

ಪಿಎಂ–ಕೇರ್ಸ್ ನಿಧಿ ಭಾರತ ಸರ್ಕಾರದ ಸಂಸ್ಥೆಯಲ್ಲ ಹಾಗೂ ಈ ಟ್ರಸ್ಟ್‌ಗೆ ಹರಿದು ಬರುವ ಹಣ ಕನ್ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾಗೆ ಸೇರುವುದಿಲ್ಲ ಎಂದು ಪ್ರಧಾನಿ ಕಾರ್ಯಾಲಯದ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರು ದೆಹಲಿ ಹೈಕೋರ್ಟಿಗೆ ತಿಳಿಸಿದ್ದಾರೆ.

ಭಾರತದ ಕಾನೂನಿನಡಿ ಚ್ಯಾರಿಟೇಬಲ್ ಟ್ರಸ್ಟ್ ಆಗಿರುವ ಪಿಎಂ–ಕೇರ್ಸ್ ನಿಧಿಯು ಟ್ರಸ್ಟ್ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುತ್ತದೆ ಮತ್ತು ಅದರ ಹಣವನ್ನು ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧಿಸಲಾಗುತ್ತದೆ ಎಂದಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್.ಪಟೇಲ್ ಮತ್ತು ನ್ಯಾಯಮೂರ್ತಿ ಅಮಿತ್ ಬನ್ಸಾಲ್ ಅವರ ಪೀಠದ ಮುಂದೆ ವಿಚಾರಣೆ ನಡೆದಿದೆ.

ಪ್ರಧಾನ ಮಂತ್ರಿಗಳು ಮತ್ತು ಗೃಹ, ರಕ್ಷಣಾ ಮತ್ತು ಹಣಕಾಸು ಮಂತ್ರಿಗಳ ಟ್ರಸ್ಟಿಗಳಿಂದ ಸ್ಥಾಪಿಸಲ್ಪಟ್ಟ ನಿಧಿಯನ್ನು ಸರ್ಕಾರದ ನಿಯಂತ್ರಣವಿಲ್ಲದ ನಿಧಿಯಾಗಿ ಘೋಷಿಸಲಾಗಿದೆ ಎಂದು ದೇಶದ ನಾಗರಿಕರು ಅಸಮಾಧಾನ ಹೊಂದಿದ್ದಾರೆ ಎಂದು ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ಸಂವಿಧಾನದ 12ನೇ ವಿಧಿಯನ್ವಯ ಈ ಪಿಎಂ–ಕೇರ್ಸ್ ಫಂಡ್ ಅನ್ನು ಸರಕಾರಿ ಫಂಡ್ ಎಂದು ಘೋಷಿಸಬೇಕೆಂದು ಕೋರಿ ಸಂಯಕ್ ಗಂಗ್ವಾಲ್ ಎಂಬವರು ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆಯಾಗಿ ಸರ್ಕಾರ ಈ ಹೇಳಿಕೆಯನ್ನು ನ್ಯಾಯಾಲಯದ ಮುಂದಿಟ್ಟಿದೆ. ಪ್ರಧಾನಿಯಿಂದ ಸ್ಥಾಪಿಸಲ್ಪಟ್ಟ ಹಾಗೂ ಗೃಹ, ರಕ್ಷಣಾ, ವಿತ್ತ ಸಚಿವರು ಟ್ರಸ್ಟೀಗಳಾಗಿರುವ ಈ ಫಂಡ್ ಮೇಲೆ ಸರ್ಕಾರದ ನಿಯಂತ್ರಣವಿಲ್ಲವೆಂದು ತಿಳಿದು ನಾಗರಿಕರು ಕಳವಳಗೊಂಡಿದ್ದಾರೆಂದು ಅರ್ಜಿಯಲ್ಲಿ ದೂರಲಾಗಿತ್ತು.


ತಾವು ಟ್ರಸ್ಟ್ ನಲ್ಲಿ ಗೌರವ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವುದಾಗಿ, ಅದು ಪಾರದರ್ಶಕವಾಗಿ ಕಾರ್ಯಾಚರಿಸುತ್ತಿದೆ ಹಾಗೂ ಲೆಕ್ಕಪತ್ರಗಳನ್ನು ಭಾರತದ ಸಿಎಜಿ ರಚಿಸಿರುವ ಸಮಿತಿಯ ಲೆಕ್ಕಪರಿಶೋಧಕರೊಬ್ಬರು ನೋಡಿಕೊಳ್ಳುತ್ತಿದ್ದಾರೆಂದೂ ನ್ಯಾಯಾಲಯಕ್ಕೆ ಅವರು ಹೇಳಿದರು.

"ಪಾರದರ್ಶಕತೆಗಾಗಿ ಆಡಿಟ್ ವರದಿಯನ್ನು ಟ್ರಸ್ಟ್ ನ ಅಧಿಕೃತ ವೆಬ್‌ಸೈಟಿನಲ್ಲಿ ನೀಡಲಾಗಿದ್ದು ಟ್ರಸ್ಟ್ ಹಣ ವ್ಯಯಿಸಲಾದ ಕುರಿತು ಮಾಹಿತಿಯೂ ಅದರಲ್ಲಿದೆ" ಎಂದು ಅವರು ಹೇಳಿದ್ದಾರೆ.

ಹಾಗಿದ್ದರೆ ಇದೊಂದು ಪ್ರಧಾನಿ ಮತ್ತು ಮೂರು ಪ್ರಮುಖ ಕೇಂದ್ರ ಸಚಿವರಿರುವ ಒಂದು ಖಾಸಗೀ ನಿಧಿಯೇ ಎಂಬ ಪ್ರಶ್ನೆ ಏಳುತ್ತದೆ.

ಭಾರತ ಸರಕಾರದ ಹಣಕಾಸು ಮತ್ರಾಲಯದ ರೆವಿನ್ಯೂ ಇಲಾಖೆ ತನ್ನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಎಪ್ರಿಲ್2020 ರಿಂದ ಮಾರ್ಚ್ 2021ರ ವರೆಗೆ ಪ್ರತಿ ತಿಂಗಳು ಒಂದು ದಿನದ ವೇತನವನ್ನು ಪಿಎಂ ಕೇರ್ಸ್ ಗೆ ಕೊಡಬೇಕು ಎಂದು ಸುತ್ತೋಲೆ ಕಳಿಸಿದ್ದು ಹೇಗೆ ಎಂದು ಈ ಕುರಿತು ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಟ್ವೀಟ್ ಮಾಡಿದ್ದಾರೆ. ಯಾರು ಒಂದು ದಿನದ ವೇತನವನ್ನು ಕೊಡಬಯಸುವುದಿಲ್ಲವೋ ಅವರು ಹಾಗೆಂದು ಲಿಖಿತವಾಗಿ ತಿಳಿಸಬೇಕು ಎಂದೂ ಸುತ್ತೋಲೆ ಹೇಳಿರುವುದು ಇಲ್ಲಿ ಗಮನಾರ್ಹ ಎಂದು ವೀಕ್ಷಕರು ಹೇಳುತ್ತಿದ್ದಾರೆ.

ಈ ನಡುವೆ ಕೇಂದ್ರ ಸರಕಾರ ಕೊವಿಡ್ ಸಾವುಗಳು ಸಂಭವಿಸಿದ ಕುಟುಂಬಗಳಿಗೆ 50000ರೂ. ಪರಿಹಾರ ನೀಡಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದರೂ, ಅದನ್ನು ಕೇಂದ್ರ ಸರಕಾರ ನೀಡುವುದಿಲ್ಲ, ರಾಜ್ಯ ಸರಕಾರಗಳು ಕೊಡುತ್ತವೆ ಎಂದು ಹೇಳಿರುವುದಾಗಿ ವರದಿಯಾಗಿದೆ.




ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

# ಎನ್‌ಡಿಎ ಪರೀಕ್ಷೆ ಮುಂದೂಡಲು ಸಾಧ್ಯವಿಲ್ಲ–ಮಹಿಳೆಯರ ಪ್ರವೇಶಕ್ಕೆ ನೇಮಕಾತಿ ಪ್ರಕ್ರಿಯೆ ಕೂಡಲೇ ಆರಂಭಿಸಿ: ಕೇಂದ್ರಕ್ಕೆ ಸುಪ್ರೀಂಕೋರ್ಟ್ ತಾಕೀತು

ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ)ಯ ಪರೀಕ್ಷೆಯನ್ನು ಬರೆಯಲು ಬಯಸಿರುವ ಮಹಿಳೆಯರಿಗೆ ಕೂಡಲೇ ಅವಕಾಶವನ್ನು ನೀಡಬೇಕು ಎಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿದೆ. ಮುಂದಿನ ವರ್ಷದವರೆಗೂ ಕಾಯುವಂತಿಲ್ಲ ಎಂದು ಪುನರುಚ್ಚರಿಸಿರುವ ನ್ಯಾಯಪೀಠವು ಕೂಡಲೇ ಪ್ರಕ್ರಿಯೆಗಳನ್ನು ಆರಂಭಿಸಬೇಕೆಂದು ಸೂಚನೆ ನೀಡಿದೆ.

ಮುಂದಿನ ವರ್ಷದಿಂದ ಮಹಿಳಾ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಬೇಕೆಂದು ಕೇಂದ್ರ ಸರ್ಕಾರ ಸಲ್ಲಿಸಿದ್ದ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿದೆ. ಪರೀಕ್ಷೆ ಸಂಬಂಧ ಕುಶ್ ಕಲ್ರಾ ಎಂಬುವವರು ಅರ್ಜಿ ಸಲ್ಲಿಸಿದ್ದು, ಅವರ ಪರವಾಗಿ ಹಿರಿಯ ವಕೀಲ ಚಿನ್ಮಯ್ ಪ್ರದೀಪ್ ಶರ್ಮಾ ಅವರು ನ್ಯಾಯಾಲಯದಲ್ಲಿ ಹಾಜರಿದ್ದರು.





ಅರ್ಜಿಗಳನ್ನು ಪರಿಶೀಲಿಸಿದ ನ್ಯಾಯಮೂರ್ತಿ ಎಸ್ ಕೆ ಕೌಲ್ ನೇತೃತ್ವದ ಪೀಠವು, ಮೇ 2022 ರಲ್ಲಿ ಪರೀಕ್ಷೆಗೆ ಹಾಜರಾದರೆ ಜೂನ್ 2023 ರಲ್ಲಿ ಪ್ರವೇಶಾತಿ ನಡೆಯುತ್ತದೆ. ನಾವು ಒಂದು ವರ್ಷದವರೆಗೆ ವಿಳಂಬ ಮಾಡಲು ಸಾಧ್ಯವಿಲ್ಲ. ನಾವು ಹುಡುಗಿಯರಿಗೆ ಭರವಸೆ ನೀಡಿದ್ದೇವೆ. ನಾವು ಈಗ ಆ ಭರವಸೆಯನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಅಲ್ಲದೆ, ಈ ವರ್ಷವೇ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಪರೀಕ್ಷೆ ಬರೆಯಲು ಮಹಿಳೆಯರಿಗೆ ಅವಕಾಶ ನೀಡಬೇಕು ಎಂದು ಆದೇಶಿಸಿದೆ.

ಎನ್‌ಡಿಎ ಪರೀಕ್ಷೆಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲು ಸುಪ್ರೀಂಕೋರ್ಟ್ ಈ ಹಿಂದೆ ಆದೇಶ ನೀಡಿತ್ತು. ಆದರೆ ಮಹಿಳೆಯರಿಗೆ ಅವಕಾಶ ನೀಡುವ ಕಾರಣ ಪಠ್ಯವೂ ಸೇರಿ ಪರೀಕ್ಷೆ ಮತ್ತು ತರಬೇತಿ ಮಾದರಿಯಲ್ಲಿ ಹಲವು ಬದಲಾವಣೆ ಮಾಡಿಕೊಳ್ಳಬೇಕಿದ್ದು ಇದಕ್ಕೆ ಕಾಲಾವಕಾಶ ಬೇಕಿದ್ದು ಮಹಿಳಾ ಅಭ್ಯರ್ಥಿಗಳು ಮುಂದಿನ ವರ್ಷದ ಮೇ ನಿಂದ ಪರೀಕ್ಷೆ ಬರೆಯಲು ಸರ್ಕಾರ ಸೂಚಿಸಿತ್ತು. ಇದನ್ನು ಪ್ರಶ್ನೆ ಮಾಡಿ ಹಲವು ಮಂದಿ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು.

ಸಮಸ್ಯೆಗಳು ಅರ್ಥವಾಗುತ್ತದೆ. ಆದರೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ನಿಮಗಿದೆ. ಫಲಿತಾಂಶಗಳನ್ನು ನೋಡಿ, ಯೋಜನೆ ಮುಂದುವರೆಸುವ ಕುರಿತು ನಿರ್ಧಾರ ಕೈಗೊಳ್ಳಬಹುದು. ಆಕಾಂಕ್ಷಿಗಳೇ ಪರೀಕ್ಷೆ ಬರೆಯಲು ಮುಂದೆ ಬರುತ್ತಿರುವಾಗ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಈ ಮನವಿಯನ್ನು ಪರಿಗಣಿಸುವುದು ಕಷ್ಟವಾಗುತ್ತದೆ ಎಂದು ನ್ಯಾಯಪೀಠ ತಿಳಿಸಿದೆ.

ಪರೀಕ್ಷಾರ್ಥಿಗಳ ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡರೆ ಕೇಂದ್ರ ಸರ್ಕಾರದ ಮನವಿ ಒಪ್ಪಲು ಸಾಧ್ಯವಿಲ್ಲ, ಹೀಗಾಗಿ ಸುಪ್ರೀಂಕೋರ್ಟ್ ತನ್ನ ಆದೇಶವನ್ನು ಹಿಂದೆ ಪಡೆಯಲು ಸಾಧ್ಯವಿಲ್ಲ. ಎನ್‌ಡಿಎ ತನ್ನ ಪ್ರಯತ್ನಗಳನ್ನು ಆರಂಭಿಸಲು ಎಷ್ಟು ಮಹಿಳೆಯರು ಪ್ರವೇಶ ಪಡೆದುಕೊಳ್ಳುತ್ತಾರೆ ಎಂದು ನೋಡೋಣ, ಅವಶ್ಯಕತೆ ಬಿದ್ದರೆ ಮತ್ತೊಮ್ಮೆ ವಿಚಾರಣೆ ನಡೆಸಿ ಸೂಕ್ತ ದಾರಿ ಕಂಡುಕೊಳ್ಳೋಣ ಎಂದು ಪೀಠ ನಿರ್ದೇಶನ ನೀಡಿದೆ.

# ಮೋದಿ ಕೋಟೆಯಲ್ಲಿ ಬಿರುಕು




**ಪ್ರೊ. ಪ್ರಭಾತ್ ಪಟ್ನಾಯಕ್**
**ಅನು: ಕೆ.ಎಂ. ನಾಗರಾಜ್**

**ಸಾಮಾನ್ಯವಾಗಿ, ಒಂದು ಗಂಭೀರ ಬಿಕ್ಕಟ್ಟಿನ ಅವಧಿಯಲ್ಲಿ ತನ್ನ ಪಾರಮ್ಯವನ್ನು ಕಾಪಾಡಿಕೊಳ್ಳುವ ಮಾರ್ಗವಾಗಿ ಬೂರ್ಜ್ವಾ ವರ್ಗವು ಫ್ಯಾಸಿಸ್ಟ್ ತೆರನ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತದೆ. ಭಾರತದ ಹಿರಿಯ ಬೂರ್ಜ್ವಾವರ್ಗವು ನಿಖರವಾಗಿ ಇದೇ ಮಾರ್ಗವನ್ನು ಅನುಸರಿಸಿತು ಮತ್ತು ಕಾರ್ಪೊರೇಟ್-ಹಿಂದುತ್ವ ಮೈತ್ರಿಯನ್ನು ಅಸ್ತಿತ್ವಕ್ಕೆ ತರುವಲ್ಲಿ ಮೋದಿಯವರನ್ನು ಮಧ್ಯವರ್ತಿಯಾಗಿ ಬಳಸಿಕೊಂಡಿತು. ಮೋದಿ ಸರ್ಕಾರದ ಆರೋಹಣಕ್ಕೆ ಆಧಾರವಾಗಿದ್ದ ಈ ಇಡೀ ಏರ್ಪಾಟು ಈಗ ಸಡಿಲಗೊಳ್ಳುತ್ತಿದೆ. ಹಾಗೆಂದ ಕೂಡಲೇ ಅದರ ಅರ್ಥ ಮೋದಿ ಸರ್ಕಾರವು ಅಧಿಕಾರ ಕಳೆದುಕೊಳ್ಳಲಿದೆ ಎಂದಲ್ಲ. ಮೋದಿ ಸರ್ಕಾರವು ಅಧಿಕಾರದಲ್ಲಿ ಉಳಿಯಲು ನಿರಂಕುಶ, ಅಸಂವೈಧಾನಿಕ, ವಿಭಜಕ ಮತ್ತು ದ್ವೇಷ-ಪ್ರಚೋದಕ ಕ್ರಮಗಳನ್ನು ಅವಲಂಬಿಸಬೇಕಾಗುತ್ತದೆ ಎಂಬುದೇ ಇದರ ಅರ್ಥ.**

ಮೋದಿ ಅವರು ಅಧಿಕ್ಕಾರಕ್ಕೇರಿದ ವಿದ್ಯಮಾನವು ಏಕೈಕವಾಗಿ ಹಿಂದುತ್ವದ ಬಲದಿಂದಾಗಿಯೇ ಎಂಬುದು ಉದಾರವಾದಿ ವ್ಯಾಖ್ಯಾನಕಾರರ ಅಂಬೋಣ. ಒಪ್ಪೋಣ. ಆದರೆ, ಇದ್ದಕ್ಕಿದ್ದಂತೆ ಹಿಂದುತ್ವವು ಅಷ್ಟೊಂದು ಬಲ ಪಡೆದದ್ದು ಹೇಗೆ ಎಂಬುದನ್ನು ಅವರು ವಿವರಿಸುವುದಿಲ್ಲ. ಹಿಂದುತ್ವದ ಈ ಪ್ರಾಬಲ್ಯಕ್ಕೆ ಬಾಬ್ರಿ ಮಸೀದಿಯನ್ನು ಕೆಡವಿದ ಸಾಹಸದೊಂದಿಗೆ ಸಂಬಂಧ ಕಲ್ಪಿಸುವುದಾಗಿದ್ದರೆ, ಅಧಿಕಾರ ಪಡೆಯಲು ಅದು ಕೆಡವಿದ ಘಟನೆಯ ನಂತರ ಇಪ್ಪತ್ತೆರಡು ವರ್ಷಗಳ ಕಾಲ ಕಾದಿತ್ತು ಏಕೆ ಎಂಬುದನ್ನು ಅವರು ವಿವರಿಸಬೇಕಾಗುತ್ತದೆ. ಹಾಗೆಯೇ, ಇದ್ದಕ್ಕಿದ್ದಂತೆ ಅತ್ಯಂತ ಶ್ರೀಮಂತ ರಾಜಕೀಯ ಪಕ್ಷವಾಗಿ ಬಿಜೆಪಿಯು ಹೊರಹೊಮ್ಮಿದ ವಿದ್ಯಮಾನವನ್ನು ಮತ್ತು ಭಾರತದ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿಜೆಪಿಯು ಅಗಾಧ ಬೆಂಬಲ ಪಡೆದದ್ದು ಮತ್ತು ಅದರ ಮೇಲೆ ಹಿಡಿತ ಸಾಧಿಸಿದ್ದು ಹೇಗೆ ಎಂಬುದನ್ನೂ ಅವರು ವಿವರಿಸಬೇಕಾಗುತ್ತದೆ.

ಆದರೆ, ವರ್ಗದ ಅಂಶವನ್ನು ಪರಿಶೀಲನೆಗೆ ತಂದಾಗ ಮಾತ್ರ ಅವುಗಳ ಬಗ್ಗೆ ತಕ್ಕ ಮಟ್ಟಿನ ವಿವರಣೆಯನ್ನು ಕೊಡಬಹುದು. ಅಂದರೆ, ಪರಿಸ್ಥಿತಿಯನ್ನು ವರ್ಗ ದೃಷ್ಟಿಯಲ್ಲಿ ವಿಶ್ಲೇಷಣೆ ಮಾಡಿದಾಗ ಮಾತ್ರ, ಈ ವಿದ್ಯಮಾನಗಳನ್ನು ಅರ್ಥೈಸುವುದು ಸಾಧ್ಯವಾಗುತ್ತದೆ ಮತ್ತು ಸುಲಭವೂ ಆಗುತ್ತದೆ. ಭಾರತದ ರಾಜಕೀಯ ರಂಗದಲ್ಲಿ ಧುತ್ತೆಂದು ಹಿಂದುತ್ವ ಶಕ್ತಿಗಳು ಪ್ರಬಲವಾಗಿ ಹೊರಹೊಮ್ಮುವಲ್ಲಿ ದೊಡ್ಡ ದೊಡ್ಡ ಬಂಡವಾಳಗಾರರ ಒಂದು ಗುಂಪು ನಿರ್ಣಾಯಕ ಪಾತ್ರ ವಹಿಸಿತು. ಈ ವಿದ್ಯಮಾನವು 1990ರ ದಶಕದ ಆರಂಭದಲ್ಲಿ ನಡೆಯಲಿಲ್ಲ. ಬದಲಿಗೆ, ನವ-ಉದಾರವಾದಿ ಬಂಡವಾಳಶಾಹಿಯ ಆರ್ಥಿಕ ಬಿಕ್ಕಟ್ಟನ್ನು ಯಾವುದೇ ಪ್ರತಿರೋಧಕ ಕ್ರಮಗಳ ಮೂಲಕ ನಿಯಂತ್ರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ, ಈ ಶತಮಾನದ ಮೊದಲ ದಶಕದ ನಂತರ, ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತದಲ್ಲಿ ಘಟಿಸಿದ ಈ ಒಂದು ವಿದ್ಯಮಾನವು ಕಾರ್ಪೊರೇಟ್-ಹಿಂದುತ್ವ ಮೈತ್ರಿ ಅಸ್ತಿತ್ವಕ್ಕೆ ಬರುವಲ್ಲಿ ಪರಿಣಮಿಸಿ, ದೇಶದಲ್ಲಿ ಒಂದು ದೊಡ್ಡ ಬದಲಾವಣೆಗೆ ಕಾರಣವಾಗಿದೆ.

ಈ ಪ್ರಕ್ರಿಯೆಯಲ್ಲಿ, ವಾಸ್ತವವಾಗಿ, ಮೋದಿ ಅವರು ವಹಿಸಿದ ಪಾತ್ರವು ಕೇಂದ್ರ ಸ್ಥಾನವನ್ನು ಪಡೆಯುತ್ತದೆ. ಒಂದು ಕಡೆ ಕಾರ್ಪೊರೇಟ್ ಬಂಡವಾಳ ಮತ್ತು ಮತ್ತೊಂದೆಡೆ ಆರ್‌ಎಸ್‌ಎಸ್ ನಡುವೆ ಮಧ್ಯಸ್ಥಿಕೆ ವಹಿಸಿದ ಮೋದಿಯವರು ಕಾರ್ಪೊರೇಟ್-ಹಿಂದುತ್ವ ಮೈತ್ರಿಯನ್ನು ಬೆಸೆದ ಪ್ರಭಾವಶಾಲಿ ವ್ಯಕ್ತಿಯಾಗಿ ಹೊರಹೊಮ್ಮುತ್ತಾರೆ. ಸಾಮಾನ್ಯವಾಗಿ, ಒಂದು ಗಂಭೀರ ಬಿಕ್ಕಟ್ಟಿನ ಅವಧಿಯಲ್ಲಿ ತನ್ನ ಪಾರಮ್ಯವನ್ನು ಕಾಪಾಡಿಕೊಳ್ಳುವ ಮಾರ್ಗವಾಗಿ ಬೂರ್ಜ್ವಾ ವರ್ಗವು ಫ್ಯಾಸಿಸ್ಟ್ ತೆರನ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತದೆ. ಭಾರತದ ಹಿರಿಯ ಬೂರ್ಜ್ವಾವರ್ಗವು ನಿಖರವಾಗಿ ಇದೇ ಮಾರ್ಗವನ್ನು ಅನುಸರಿಸಿತು ಮತ್ತು ಕಾರ್ಪೊರೇಟ್-ಹಿಂದುತ್ವ ಮೈತ್ರಿಯನ್ನು ಅಸ್ತಿತ್ವಕ್ಕೆ ತರುವಲ್ಲಿ ಮೋದಿಯವರನ್ನು ಮಧ್ಯವರ್ತಿಯಾಗಿ ಬಳಸಿಕೊಂಡಿತು.

1990ರ ದಶಕದ ಆರಂಭ ಮತ್ತು 2014ರ ದಶಕದ ಆರಂಭದಲ್ಲಿ ಹಿರಿ ಬೂರ್ಜ್ವಾವರ್ಗದ ದೃಷ್ಟಿಕೋನದಲ್ಲಿ ಕಂಡುಬಂದ ಬದಲಾವಣೆಯನ್ನು ಎರಡು ಪ್ರಮುಖ ಘಟನೆಗಳು ನಿರೂಪಿಸುತ್ತವೆ: 1990ರ ದಶಕದ ಆರಂಭದಲ್ಲಿ, ಟಾಟಾ ಸಮೂಹದ ಅತ್ಯುನ್ನತ ಮಟ್ಟದ ಅಧಿಕಾರಿಯೊಬ್ಬರು ಜಾತ್ಯತೀತತೆಯ ಸಮರ್ಥನೆಗಾಗಿ ಮುಂಬೈನಲ್ಲಿ ನಡೆದ ಒಂದು ಪ್ರದರ್ಶನ-ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಆದರೆ, ಈ ಶತಮಾನದ ಆದಿ ಭಾಗದಲ್ಲಿ ನಡೆದ ಗುಜರಾತ್ ಹೂಡಿಕೆದಾರರ ಶೃಂಗಸಭೆಯಲ್ಲಿ ಟಾಟಾ ಸಾಮ್ರಾಜ್ಯದ ಮುಖ್ಯಸ್ಥರು ಮೋದಿ ಅವರನ್ನು, ಗೋಧ್ರಾ ನಂತರದ ಮುಸ್ಲಿಂ ವಿರೋಧಿ ಹತ್ಯಾಕಾಂಡಕ್ಕೆ ಅವಕಾಶ ನೀಡಿದ ಆರೋಪವನ್ನು ಮೋದಿ ಹೊತ್ತಿದ್ದರೂ ಸಹ, ಪ್ರಧಾನಿಯಾಗಿ ಅನುಮೋದಿಸಿದ್ದರು. ನಂತರ ನಡೆದ ಒಂದು ಕುತೂಹಲಕಾರಿ ಸಂಗತಿಯೆಂದರೆ, ಟಾಟಾ ಸಾಮ್ರಾಜ್ಯದ ಅದೇ ಮುಖ್ಯಸ್ಥರು ನಾಗ್ಪುರಕ್ಕೆ ತೆರಳಿ ಆರ್‌ಎಸ್‌ಎಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ಅವರೊಂದಿಗೆ ಹಲವಾರು ವಿಷಯಗಳ ಬಗ್ಗೆ ಸಮಾಲೋಚನೆ ನೆಡೆಸಿದ್ದರು.

ತಮ್ಮ ಬಂಟ ಬಂಡವಾಳಗಾರರಿಗೆ ಮಾತ್ರ ಉಪಕರಿಸಿದ ಕೀರ್ತಿಗೆ ಮೋದಿ ಹೆಸರಾಗಿದ್ದಾರೆ. ಇದು ನಿಜವೇ. ಆಪ್ತರಿಗೆ ಕೊಡುಗೆಗಳ ಮಳೆಗರೆಯುವ ಮಾತು ಮೋದಿ ಒಬ್ಬರಿಗೆ ಮಾತ್ರವೇ ಅನ್ವಯವಾಗುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಇದು ಸಾಮಾನ್ಯವೇ. ಹಿರಿ ಬೂರ್ಜ್ವಾಗಳು ಮತ್ತು ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳ ನಡುವಿನ ಮೈತ್ರಿಯ ಒಂದು ವಿಶಿಷ್ಟ ಲಕ್ಷಣವೆಂದರೆ, ಹಿರಿ ಬೂರ್ಜ್ವಾ ವರ್ಗದ ಕೆಲವು ಹೊಸಬರು ಮುನ್ನೆಲೆಗೆ ಬರುವುದು. 1930ರ ದಶಕದಲ್ಲಿ ಜರ್ಮನಿ ಮತ್ತು ಜಪಾನ್ ಎರಡೂ ದೇಶಗಳಲ್ಲೂ ನಿಖರವಾಗಿ ಇದೇ ವಿದ್ಯಮಾನ ಸಂಭವಿಸಿತ್ತು. ಆದರೆ, ಈ ಹೊಸಬರು ಮುನ್ನೆಲೆಗೆ ಬಂದಾಕ್ಷಣ ಬೂರ್ಜ್ವಾವರ್ಗದ ಹಳೆಯ ತಲೆಗಳು ಮೂಲೆಗುಂಪಾಗುತ್ತವೆ ಎಂದಲ್ಲ. ಹಿರಿ ಬೂರ್ಜ್ವಾವರ್ಗದ ಸಕ್ರಿಯ ಬೆಂಬಲದೊಂದಿಗೆ ಫ್ಯಾಸಿಸ್ಟ್ ತೆರನ ಶಕ್ತಿಗಳು ರಚಿಸಿದ ಸರ್ಕಾರವು, ಈ ಕೆಲ ಹೊಸಬರಿಗೆ ವಿಶೇಷ ಅನುಕೂಲ-ಸಹಾಯಗಳ ಮಳೆಗರೆದರೂ ಸಹ, ಒಟ್ಟಾರೆಯಾಗಿ, ಇಡೀ ಬೂರ್ಜ್ವಾ ವರ್ಗದ ಪರವಾಗಿಯೇ ಕೆಲಸ ಮಾಡುತ್ತದೆ. ಈ ಅಂಶವನ್ನು ನಿರೂಪಿಸುವ ಉದಾಹರಣೆಗಳೆಂದರೆ, ಕಾರ್ಮಿಕರನ್ನು ದಮನಿಸುವ ಹೊಸ ಕಾರ್ಮಿಕ ಕಾನೂನುಗಳು ಮತ್ತು ಕೃಷಿಯನ್ನು ಕಾರ್ಪೊರೇಟ್ ಬಂಡವಾಳದ ಅತಿಕ್ರಮಣಕ್ಕೆ ತೆರೆದಿಟ್ಟಿರುವ ಹೊಸ ಕೃಷಿ ಕಾನೂನುಗಳು.

ಮೋದಿ ಸರ್ಕಾರದ ಆರೋಹಣಕ್ಕೆ ಆಧಾರವಾಗಿದ್ದ ಈ ಇಡೀ ಏರ್ಪಾಟು ಈಗ ಸಡಿಲಗೊಳ್ಳುತ್ತಿದೆ. ಹಾಗೆಂದ ಕೂಡಲೇ ಅದರ ಅರ್ಥ ಮೋದಿ ಸರ್ಕಾರವು ಅಧಿಕಾರ ಕಳೆದುಕೊಳ್ಳಲಿದೆ ಎಂದಲ್ಲ. ಅದು ಏನನ್ನು ಅರ್ಥೈಸುತ್ತದೆ ಎಂದರೆ, ಮೋದಿ ಸರ್ಕಾರವು ಅಧಿಕಾರದಲ್ಲಿ ಉಳಿಯಲು ನಿರಂಕುಶ, ಅಸಂವೈಧಾನಿಕ, ವಿಭಜಕ ಮತ್ತು ದ್ವೇಷ-ಪ್ರಚೋದಕ ಕ್ರಮಗಳನ್ನು ಅವಲಂಬಿಸಬೇಕಾಗುತ್ತದೆ. ಏಕೆಂದರೆ, ಮೋದಿ ಸರ್ಕಾರದ ಆರೋಹಣಕ್ಕೆ ಆಧಾರವಾಗಿದ್ದ ಮತ್ತು ಅದಕ್ಕೆ ಒಂದು ಮಟ್ಟಿನ ಸ್ಥಿರತೆಯನ್ನು ಒದಗಿಸಿದ ಈ ಮೂಲ ಏರ್ಪಾಟೇ ಕಳಚಿ ಬೀಳಲು ಆರಂಭಿಸಿದೆ.


ಮೋದಿ ಏರ್ಪಾಟು ಸಡಿಲಗೊಳ್ಳುತ್ತಿದೆ ಎಂದು ಹೇಳುವಲ್ಲಿ ಎರಡು ಸ್ಪಷ್ಟ ಕಾರಣಗಳಿವೆ. ಮೂರು ಕುಖ್ಯಾತ ಕೃಷಿ ಕಾನೂನುಗಳ ವಿರುದ್ಧ ರೈತರು ನಡೆಸುತ್ತಿರುವ ಬೃಹತ್ ಚಳುವಳಿಯೇ ಮೊದಲನೆಯದು. ನಾವು ಈಗಾಗಲೇ ಗಮನಿಸಿರುವಂತೆ, ಈ ಕಾನೂನುಗಳು ಕಾರ್ಪೊರೇಟ್-ಹಿಂದುತ್ವ ಮೈತ್ರಿಯ ಕಾರ್ಯಸೂಚಿಗೆ ಅನುಗುಣವಾಗಿವೆ. ಹಾಗಾಗಿ, ಈ ಕಾನೂನುಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸಿದ್ದು ಆಶ್ಚರ್ಯವೇನಲ್ಲ. ಅದರೆ, ಸರ್ಕಾರಕ್ಕೆ ಸಖೇದಾಶ್ಚರ್ಯ ಉಂಟು ಮಾಡಿದ್ದು ಏನೆಂದರೆ, ಈ ಕಾನೂನುಗಳಿಗೆ ರೈತರು ಒಡ್ಡಿದ ಪ್ರತಿರೋಧದ ಅಗಾಧತೆ. ಈ ಚಳುವಳಿಯನ್ನು ಮುರಿಯಲು ತನ್ನ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನು ಬಿಜೆಪಿಯು ನಿರ್ಲಜ್ಜವಾಗಿ ಪ್ರಯೋಗಿಸಿತು. ಆದರೂ ದಯನೀಯವಾಗಿ ವಿಫಲವಾಯಿತು. ಇದು, ಕಾರ್ಪೊರೇಟ್-ಹಿಂದುತ್ವ ಮೈತ್ರಿಗೆ ತಾಗಿದ ಒಂದು ಭಾರಿ ಆಘಾತವೇ.

ಎರಡನೆಯ ಕಾರಣವೆಂದರೆ, ನಿರ್ದಿಷ್ಟ ಕಾರ್ಪೊರೇಟ್ ಸಂಸ್ಥೆಗಳ ಬಗ್ಗೆ ಹಿಂದುತ್ವದ ಕೆಲವು ಪ್ರಭಾವಿ ವ್ಯಕ್ತಿಗಳು ಪ್ರದರ್ಶಿಸಿದ ಬಹಿರಂಗ ಹಗೆತನವು ಈ ಮೈತ್ರಿಯನ್ನು ಬಾಳಗೊಡುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಮೊದಲು, ಮೋದಿ ಸರ್ಕಾರದ ಹಿರಿಯ ಸಚಿವ ಮತ್ತು ಕೆಲ ಕಾಲ ಹಣಕಾಸು ಸಚಿವರೂ ಆಗಿ ಕಾರ್ಯನಿರ್ವಹಿಸಿದ ಪಿಯೂಷ್ ಗೋಯೆಲ್ ಅವರು ಟಾಟಾ ಸಂಸ್ಥೆಗಳ ಮೇಲೆ ಬಹಿರಂಗವಾಗಿ ಹರಿಹಾಯ್ದರು. ತದನಂತರ, ಇನ್ಫೋಸಿಸ್‌ನ ತಾಂತ್ರಿಕ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ಕಾಣಿಸಿಕೊಂಡ ಕೆಲವು ಲೋಪ ದೋಷಗಳ ಸಂಬಂಧವಾಗಿ ಆರ್‌ಎಸ್‌ಎಸ್‌ನ ಮುಖವಾಣಿ 'ಪಾಂಚಜನ್ಯ' ಪತ್ರಿಕೆಯು ಇನ್ಫೋಸಿಸ್ ಸಂಸ್ಥೆಯನ್ನು ವಾಚಾಮಗೋಚರವಾಗಿ ನಿಂದಿಸಿತು. ಸೆಪ್ಟೆಂಬರ್ 15 ರೊಳಗೆ ಈ ಲೋಪ ದೋಷಗಳನ್ನು ಸರಿಪಡಿಸುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಮೊದಲೇ ಇನ್ಫೋಸಿಸ್ ಸಂಸ್ಥೆಗೆ ಆದೇಶಿದ್ದರು, ಆದರೆ, ಆ ಗಡುವು ತೀರುವ ಮುನ್ನವೇ 'ಪಾಂಚಜನ್ಯ' ಪತ್ರಿಕೆಯು ಇನ್ಫೋಸಿಸ್‌ಅನ್ನು "ರಾಷ್ಟ್ರ ವಿರೋಧಿ" ಎಂದು ಕರೆದು, ಅದನ್ನು ಎಡಪಂಥೀಯರು ಮತ್ತು ಟುಕ್ಡೆ ಟುಕ್ಡೆ ಗ್ಯಾಂಗ್‌ನೊಂದಿಗೆ ಇರಿಸಿತು, ಯಾವ ಮುಚ್ಚು ಮರೆಯೂ ಇಲ್ಲದೆ! ಆರ್‌ಎಸ್‌ಎಸ್‌ನ ಕಾರ್ಯಕರ್ತರಲ್ಲಿ ಕೆಲವರ ಶಬ್ದ ಭಂಡಾರವು ಸೀಮಿತವಾದದ್ದು ಎಂದೇ ಒಪ್ಪಿಕೊಳ್ಳೋಣ. ಆದರೂ, ಅಂತರರಾಷ್ಟ್ರೀಯ ಖ್ಯಾತಿ ಪಡೆದ ಇನ್ಫೋಸಿಸ್‌ನಂಥಹ ಒಂದು ಕಂಪನಿಯ ವಿರುದ್ಧ ಬಳಸಿದ ಭಾಷೆಯು ಬಹಳ ಗಡುಸಾಗಿದೆ. ಆರ್‌ಎಸ್‌ಎಸ್‌ನ ಒಬ್ಬ ವಕ್ತಾರರು, ತಮ್ಮ ಸಂಘಟನೆಯನ್ನು 'ಪಾಂಚಜನ್ಯ' ಪತ್ರಿಕೆಯ ದಾಳಿಯಿಂದ ದೂರವಿಟ್ಟುಕೊಳ್ಳಲು ಪ್ರಯತ್ನಿಸಿದರು, ಆದರೆ ಆ ಪ್ರಯತ್ನದಲ್ಲಿ ಯಾವುದೇ ಪ್ರಾಮಾಣಿಕತೆ ಇರಲಿಲ್ಲ. ಅಷ್ಟೇ ಅಲ್ಲ, ಮತ್ತೂ ಕೆಲವು ಆರ್‌ಎಸ್‌ಎಸ್ ನಾಯಕಮಣಿಗಳು ಈ ದಾಳಿಗೆ ಗಾಳಿ ಹಾಕಿದವು.

ಕಾರ್ಪೊರೇಟ್- ಹಿಂದುತ್ವ ಮೈತ್ರಿಯಲ್ಲಿ ಬಿರುಕು ಕಾಣಿಸಿಕೊಳ್ಳಲಾರಂಭಿಸಿದೆ. ಮುಂಬರುವ ತಿಂಗಳುಗಳಲ್ಲಿ ಈ ಬಿರುಕು ಅಗಲವಾಗಲಿದೆ. ಅದಕ್ಕೆ ಕಾರಣವೆಂದರೆ, ಹಿಂದುತ್ವ ಶಕ್ತಿಗಳು ಅರ್ಥಶಾಸ್ತ್ರದಲ್ಲಿ ಮುಗ್ಧರೇ. ಅವರು ತಮ್ಮ ಕಾರ್ಪೊರೇಟ್ ಸ್ನೇಹಿತರು ಮತ್ತು ಬ್ರೆಟನ್ ವುಡ್ಸ್ (ವಿಶ್ವ ಬ್ಯಾಂಕ್, ಐಎಂಎಫ್ ಇತ್ಯಾದಿ) ಸಂಸ್ಥೆಗಳು ಹೇಳಿದ್ದನ್ನು ಸಲೀಸಾಗಿ ನಂಬಿದ್ದರು. ಈ ಸಂಸ್ಥೆಗಳು ಹೇಳುತ್ತಿದ್ದುದು ಕಾರ್ಯರೂಪಕ್ಕೆ ಬರುತ್ತಿಲ್ಲ ಎಂಬುದನ್ನು ಅವರು ಈಗ ಅರಿಯುತ್ತಿದ್ದಾರೆ. ತಮ್ಮ ಈ ಪರಿಸ್ಥಿತಿಗೆ ತಾವು ಸ್ವೀಕರಿಸಿದ ಸಿದ್ಧಾಂತದ ವಿಚಾರಹೀನತೆ ಕಾರಣವೆಂದು ಅರ್ಥಮಾಡಿಕೊಳ್ಳುವುದರ ಬದಲಿಗೆ ಕೆಲವು ಕಾರ್ಪೊರೇಟ್ ಸಂಸ್ಥೆಗಳ ದುರುದ್ದೇಶವೇ ಕಾರಣವೆಂದು ಭಾವಿಸುತ್ತಾರೆ.

ಉದಾಹರಣೆಗೆ, ಕಾರ್ಪೊರೇಟ್ ಬಂಡವಾಳಕ್ಕೆ ಹೆಚ್ಚು ರಿಯಾಯಿತಿಗಳನ್ನು ನೀಡಿದಾಗ, ಸರ್ಕಾರವು ಸಂಪ್ರದಾಯಶರಣ ವಿತ್ತೀಯ ನೀತಿಯನ್ನು ಅನುಸರಿಸುತ್ತಿದ್ದರೂ ಸಹ, ಅರ್ಥವ್ಯವಸ್ಥೆಯು ಪುನರುಜ್ಜೀವನಗೊಳ್ಳುತ್ತದೆ ಎಂದು ಅವರಿಗೆ ಹೇಳಲಾಗಿದೆ. ತೆರಿಗೆ ಕೊಡುಗೆಗಳು ಮತ್ತು ಕಾರ್ಮಿಕ-ವಿರೋಧಿ ಮತ್ತು ರೈತ-ವಿರೋಧಿ ಕಾನೂನುಗಳ ಮೂಲಕ ಬಂಡವಾಳಗಾರರ "ಸಹಜ ಹುಮ್ಮಸ್ಸನ್ನು" ಉದ್ದೀಪಿಸಿದರೆ, ಹೂಡಿಕೆಗಳು ಹೂವಿನಂತೆ ಅರಳುತ್ತವೆ ಎಂದು ಅವರಿಗೆ ಹೇಳಲಾಗಿದೆ. ಅವರಿಗೆ ಹೇಳದಿರುವುದು ಏನೆಂದರೆ, ಬಂಡವಾಳಕ್ಕೆ ಎಷ್ಟೇ ರಿಯಾಯಿತಿಗಳನ್ನು ನೀಡಿದರೂ ಸಹ, ಒಟ್ಟು ಬೇಡಿಕೆಯು ವಿಸ್ತಾರಗೊಳ್ಳದಿದ್ದರೆ ಬಂಡವಾಳಗಾರರು ಹೊಸದಾಗಿ ಹೂಡಿಕೆ ಮಾಡುವುದಿಲ್ಲ, ಮತ್ತು, ಹೊಸ ಹೂಡಿಕೆಗಳು ಇಲ್ಲದಿದ್ದರೆ ಅರ್ಥವ್ಯವಸ್ಥೆಯು ಪುನರುಜ್ಜೀವಗೊಳ್ಳುವುದಿಲ್ಲ ಎಂಬುದನ್ನು ಮತ್ತು ವಿತ್ತೀಯ ಕೊರತೆಯ ಮೂಲಕವೋ ಅಥವಾ ಬಂಡವಾಳಗಾರರ ಮೇಲೆ ತೆರಿಗೆ ಹಾಕುವ ಮೂಲಕವೋ ಒದಗಿಸಿಕೊಂಡ ಆದಾಯವನ್ನು ಬಳಸಿಕೊಂಡು ಸರ್ಕಾರದ ಖರ್ಚು-ವೆಚ್ಚಗಳನ್ನು ಹೆಚ್ಚಿಸಿಕೊಳ್ಳದಿದ್ದರೆ, ಒಟ್ಟಾರೆ ಬೇಡಿಕೆಯು ವಿಸ್ತಾರಗೊಳ್ಳುವುದಿಲ್ಲ ಎಂಬುದನ್ನು.

ಪುಟ 14 ನೋಡಿ




ನಿರ್ದಿಷ್ಟ ಕಾರ್ಪೊರೇಟ್ ಸಂಸ್ಥೆಗಳ ಬಗ್ಗೆ ಹಿಂದುತ್ವದ ಕೆಲವು ಪ್ರಭಾವಿ ವ್ಯಕ್ತಿಗಳು ಪ್ರದರ್ಶಿಸಿದ ಬಹಿರಂಗ ಹಗೆತನವು ಈ ಮೈತ್ರಿಯನ್ನು ಬಾಳಗೊಡುವುದಿಲ್ಲ ಎಂಬುದನ್ನು ಸೂಚಿಸುತ್ತದೆ... ಆರೆಸ್ಸೆಸ್‌ನ 'ಪಾಂಚಜನ್ಯ' ಪತ್ರಿಕೆಯು ಇನ್ಫೋಸಿಸ್‌ಅನ್ನು "ರಾಷ್ಟ್ರ ವಿರೋಧಿ" ಎಂದು ಕರೆದು, ಅದನ್ನು ಎಡಪಂಥೀಯರು ಮತ್ತು ಟುಕ್ಡೆ ಟುಕ್ಡೆ ಗ್ಯಾಂಗ್‌ನೊಂದಿಗೆ ಇರಿಸಿತು, ಯಾವ ಮುಚ್ಚು ಮರೆಯೂ ಇಲ್ಲದೆ! ಆದರೆ ಮೋದಿ ಈ ಬಗ್ಗೆ ಚಕಾರ ಎತ್ತಿಲ್ಲ.

**ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್**

# ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ, ಒಕ್ಕೂಟ ವ್ಯವಸ್ಥೆ ಕಗ್ಗೊಲೆಗೆ ಮುಂದಾದ ಕೇಂದ್ರ ಸರಕಾರ: ಪದ್ಮಶ್ರೀ ಡಾ. ಜಿ.ಎನ್ ದೇವಿ



ನಗರದ ಸಾಹಿತ್ಯ ಭವನದಲ್ಲಿ ಶುಕ್ರವಾರ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಜಿಲ್ಲಾ ಸಮಿತಿಗಳು ಹಮ್ಮಿಕೊಂಡಿದ್ದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ದುಂಡು ಮೇಜಿನ ಸಭೆ ಯಲ್ಲಿ ಎಂದು ಖ್ಯಾತ ಭಾಷಾ ಶಾಸ್ತ್ರಜ್ಞರು, ಪದ್ಮಶ್ರೀ ಡಾ. ಗಣೇಶ ಎನ್ ದೇವಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಸಂವಿಧಾನದ ಶೆಡ್ಯೂಲ್ 7 ರಲ್ಲಿ ಶಿಕ್ಷಣ ಬರುವುದರಿಂದ ಶಿಕ್ಷಣಕ್ಕೆ ಸಂಬಂಧಿಸಿದ ನೀತಿ ನಿರೂಪಣೆಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಾಡಲು ಅವಕಾಶವಿದೆ. ಆದರೆ ಎನ್.ಇ.ಪಿ ಯಡಿ ರಾಷ್ಟ್ರೀಯ ಶಿಕ್ಷಾ ಆಯೋಗ ರಚನೆ ಮಾಡುವುದರ ಮೂಲಕ ರಾಜ್ಯಗಳಿಗೆ ಇರುವ ಶಿಕ್ಷಣ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಪಾಶ್ಚಿಮಾತ್ಯ ಶಿಕ್ಷಣದ ನಿಯಂತ್ರಣ ಮತ್ತು ಪ್ರಾಚೀನ ಶಿಕ್ಷಣ ವ್ಯವಸ್ಥೆಯನ್ನು ಸನಾತನ ಧರ್ಮದ ಆಧಾರದಲ್ಲಿ ರಾಷ್ಟ್ರಕಟ್ಟುವ ಗುರಿಯನ್ನು ಹೊಂದಿದೆ. ಸನಾತನ ಧರ್ಮ ಎಂದರೆ ಮನುಸ್ಮೃತಿ ಆಧಾರದಲ್ಲಿ ಮಹಿಳೆಯರು ಹಾಗೂ ಶೋಷಿತ ಜನಾಂಗಗಳಿಗೆ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸುವ ಹುನ್ನಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಾಶ್ಚಿಮಾತ್ಯ ಜ್ಞಾನವನ್ನು ವಿರೋಧಿಸುವ ಬಿಜೆಪಿ ಶಾಸಕರು ಸಚಿವರ ಬಹುತೇಕ ಮಕ್ಕಳು ವಿದೇಶಗಳಲ್ಲಿ ಓದುತ್ತಿದ್ದಾರೆ. ಇದು ಕೇವಲ ಬಡವರ ಮಕ್ಕಳನ್ನು ವಿಜ್ಞಾನ ಮತ್ತು ವೈಚಾರಿಕ ಶಿಕ್ಷಣದಿಂದ ದೂರ ಮಾಡುವ ಕುತಂತ್ರವಾಗಿದೆ ಎಂದು ಹರಿಹಾಯ್ದರು.

ಶಿಕ್ಷಣ ತಜ್ಞ ಶಂಕರ ಹಲಗತ್ತಿ ಮಾತನಾಡಿ, ಒಕ್ಕೂಟ ಸರಕಾರವು ಜಾರಿ ಮಾಡುತ್ತಿರುವ ಎನ್.ಇ.ಪಿಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಕೌಶಲ್ಯಾಭಿವೃದ್ಧಿ ಕಲಿಸುವ ಘೋಷಣೆಯ ಹಿಂದೆ ಬಹುರಾಷ್ಟ್ರೀಯ ಕಾರ್ಪೋರೇಟ್ ಕಂಪೆನಿಗಳಿಗೆ ಕೇವಲ ಕಾರ್ಮಿಕರನ್ನು ಸೃಷ್ಟಿಸುವ ನೀತಿ ಹೊಂದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸರಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮಾತೃ ಭಾಷೆಯಲ್ಲಿ ಕಲಿಸಬೇಕು ಎನ್ನುವ ಈ ಕಾಯಿದೆಯು ಖಾಸಗಿ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಕಲಿಸಬಹುದು ಎಂದು ಸೂಚಿಸುತ್ತಿರುವುದರ ಕುಟಿಲತೆಯನ್ನು ಅರಿಯಬೇಕು ಎಂದರು.

ಕವಿವಿ ನಿವೃತ್ತ ಕುಲ ಸಚಿವರಾದ ಡಾ. ಕೆ.ಆರ್ ದುರ್ಗಾದಾಸ್ ಮಾತನಾಡಿ, ರಾಷ್ಟ್ರದ ಚುಕ್ಕಾಣಿ ಹಿಡಿದಿರುವ ಒಕ್ಕೂಟ ಸರಕಾರವು, ಕೇವಲ ಒಂದು ಪಕ್ಷದ ವಕ್ತಾರನಾಗಿ ಕೆಲಸ ಮಾಡುತ್ತಿದೆಯೆ ವಿನಃ, ದೇಶದ ಸರ್ವ ಜನರನ್ನು ಸಮಾನವಾಗಿ ನೋಡಲು ವಿಷಯದಿಂದ ಹಿಂದೆ ಸರಿದಿದೆ ಎಂದರು.

ಆಳುವವರ ಗುರಿಗೆ ತಕ್ಕಂತೆ ಮಕ್ಕಳನ್ನು ಬಳಸಿಕೊಳ್ಳಲು ಎನ್.ಇ.ಪಿ ಮೂಲಕ ಯೋಜನೆ ರೂಪಿಸಿರುವರು ಎಂದು ಹೇಳಿದರು.

ದುಂಡು ಮೇಜಿನ ಸಭೆಯ ಅಧ್ಯಕ್ಷತೆಯನ್ನು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ವಹಿಸಿದ್ದರು. ಸಭೆಯಲ್ಲಿ ಸಾಮಾಜಿಕ ಕಾರ್ಯಕರ್ತರಾದ ಶಾರದಾ ದಾಬಡೆ, ಶಿಕ್ಷಕರ ಸಂಘಟನೆಯ ರಾಷ್ಟ್ರೀಯ ಮುಖಂಡ ಬಸವರಾಜ ಗುರಿಕಾರ, ವೈದ್ಯ ಗೋಪಾಲ ದಾಬಡೆ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಕೆ ವಾಸುದೇವರೆಡ್ಡಿ, ಎಐಎಲ್.ಯು ಮುಖಂಡ ಕೆ.ಎಚ್ ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು. ಹಿರಿಯ ಸಾಹಿತಿ ಎಸ್ ನಾಗಕಲಾಲ್, ಸಿಐಟಿಯು ಕಾರ್ಯದರ್ಶಿ ಮಹೇಶ ಪತ್ತಾರ, ಎ.ಎಂ ಖಾನ್, ಡಾ. ಆರ್.ಎನ್ ಪಾಟೀಲ, ಕೀರ್ತಿವತಿ, ರಾಜೇಶ್ವರಿ ಜೋಷಿ, ಬಿ.ಎನ್ ಪೂಜಾರಿ, ಎಂ.ವಿ ಗಡಾದ ಮುಂತಾದವರು ಉಪಸ್ಥಿತರಿದ್ದರು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮುಖಂಡರಾದ ಬಸವರಾಜ ಸಾರಥಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಗಣೇಶ ರಾಠೋಡ ವಂದಿಸಿದರು.

ಪುಟ 13 ರಿಂದ

# ಮೋದಿ ಕೋಟೆಯಲ್ಲಿ ಬಿರುಕು

ಮೋದಿ ಸರ್ಕಾರದ ಶತ ಪ್ರಯತ್ನಗಳ ಹೊರತಾಗಿಯೂ, ಆರ್ಥಿಕ ವಿಷಯಗಳ ಬಗ್ಗೆ ಅದಕ್ಕಿರುವ ಜ್ಞಾನದ ಕೊರತೆಯಿಂದಾಗಿ, ಅರ್ಥವ್ಯವಸ್ಥೆಯು ಸತತವಾಗಿ ನಿತ್ರಾಣಗೊಳ್ಳುತ್ತಿದೆ. ಆದರೆ, ಹಿಂದುತ್ವ ಶಕ್ತಿಗಳ ಪ್ರಕಾರ, ಬೆಳವಣಿಗೆಯ ಸಾಮರ್ಥ್ಯ-ಸಾಧ್ಯತೆಯುಳ್ಳ ಅರ್ಥವ್ಯವಸ್ಥೆಯು ಸೊರಗಲು ಭಾರತದ ಕಾರ್ಪೊರೇಟ್ ವಲಯದ (ಅವರ ನೆಚ್ಚಿನ ಬೆರಳೆಣಿಕೆಯವುಗಳನ್ನು ಹೊರತುಪಡಿಸಿ) ದುಷ್ಟ ಪ್ರವೃತ್ತಿಯೇ ಕಾರಣ. ಅವು ಬೇರೆಡೆ ಹೂಡಿಕೆ ಮಾಡುತ್ತವೆ (ಅಲ್ಲಿ ಒಟ್ಟು ಬೇಡಿಕೆ ಬೆಳೆಯುತ್ತಿರಬಹುದು). ಆದರೆ, ಭಾರತದಲ್ಲಿ ಅಲ್ಲ. ಹಾಗಾಗಿ, ಇದು ರಾಷ್ಟ್ರ ವಿರೋಧಿ ಕೃತ್ಯವೇ! ಬಂಡವಾಳದ ಸಹಜ ನಡವಳಿಕೆಯನ್ನು, ಅದರ ಸಹಜ ಕಾರ್ಯವಿಧಾನವನ್ನು ಒಂದು ವಿಕೃತಿ ಎಂದೇ ಬಗೆಯಲಾಗಿದೆ!

ಹಿಂದುತ್ವ ಮತ್ತು ಕಾರ್ಪೊರೇಟ್ ಬಂಡವಾಳದ ನಡುವಿನ ಬಿರುಕು ಅಗಲವಾಗಲಿದೆ. ಹೆದರಿಕೆ-ಬೆದರಿಕೆಗಳ ಮೂಲಕ ಬಂಡವಾಳವು ಹೂಡಿಕೆ ಮಾಡುವುದಿಲ್ಲ. ತದ್ವಿರುದ್ಧವಾಗಿ, ಅದು ಇನ್ನೂ ಹೆಚ್ಚಿನ ಹುರುಪಿನಿಂದ ವಿಶ್ವದ ಬೇರೆಡೆ ಲಾಭದಾಯಕ ಹೂಡಿಕೆಯ ಸಾಧ್ಯತೆಗಳಿವೆಯೇ ಎಂಬುದನ್ನು ಅನ್ವೇಷಿಸಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಬಂಡವಾಳವು ತನ್ನ ಪ್ರಯತ್ನಗಳನ್ನು ಹೆಚ್ಚಿಸಿದಷ್ಟೂ, ಆರ್‌ಎಸ್‌ಎಸ್ ಮತ್ತು ಬಿಜೆಪಿ, ಕಾರ್ಪೊರೇಟ್ ಬಂಡವಾಳವನ್ನು ರಾಷ್ಟ್ರ ವಿರೋಧಿ ಎಂದು ಕರೆದು ಅದರ ಮೇಲೆ ದಾಳಿ ಮಾಡಲಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಟುಕ್ಡೆ ಟುಕ್ಡೆ ಗ್ಯಾಂಗ್ ಹೊಸ ಹೊಸ ಅನುಯಾಯಿಗಳನ್ನು ಪಡೆಯುತ್ತಿದೆ!

ಈ ಇಡೀ ವಿದ್ಯಮಾನದಲ್ಲಿ ಒಂದು ಗಮನಾರ್ಹವಾದ ಸಂಗತಿ ಎಂದರೆ, ಮೋದಿ ಅವರು ಪರೋಕ್ಷವಾಗಿಯೂ ಸಹ, ಪಿಯೂಷ್ ಗೋಯೆಲ್ ವಿರುದ್ಧವಾಗಲಿ ಅಥವಾ 'ಪಾಂಚಜನ್ಯ'ದಲ್ಲಿ ಬರೆದ ಅಂಕಣಕಾರನ ವಿರುದ್ಧವಾಗಲಿ ಚಕಾರ ಎತ್ತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಜರ್ಮನಿಯಲ್ಲಿ ದೊಡ್ಡ ದೊಡ್ಡ ಉದ್ಯಮಗಳೊಂದಿಗೆ ಮೈತ್ರಿಯನ್ನು ಸಂಯೋಜಿಸಿಕೊಳ್ಳುವ ಸಲುವಾಗಿ ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಸ್ವಂತ ಬೆಂಬಲಿಗರ ರಕ್ತವನ್ನೇ ಹರಿಸಿದರು. ಅದು "ಉದ್ದನೆಯ ಚಾಕುಗಳ ರಾತ್ರಿ" ಎಂದು ಕುಖ್ಯಾತವಾಗಿದೆ.

ಈ ವಿದ್ಯಮಾನವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳು ಮತ್ತು ಕಾರ್ಪೊರೇಟ್ ಬಂಡವಾಳದ ನಡುವಿನ ಮೈತ್ರಿಯು ಯಶಸ್ವಿಯಾಗಲು ಎರಡು ಷರತ್ತುಗಳನ್ನು ಪಾಲಿಸುವುದು ಅಗತ್ಯವಾಗುತ್ತದೆ. ಮೊದಲನೆಯದು, ಅಂತಹ ಮೈತ್ರಿಯ ಮೂಲಕ ಅಸ್ತಿತ್ವಕ್ಕೆ ಬರುವ ಆಡಳಿತವು, ಮೊದಲಿಗೆ ಅಂತಹ ಮೈತ್ರಿಯು ಅಸ್ತಿತ್ವಕ್ಕೆ ಬರಲು ಕಾರಣವಾದ ಬಿಕ್ಕಟ್ಟನ್ನು ಪರಿಹರಿಸುವಷ್ಟು ಸಮರ್ಥವಾಗಿರಬೇಕು. ಎರಡನೆಯದು, ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳು ಮತ್ತು ಕಾರ್ಪೊರೇಟ್ ಬಂಡವಾಳದ ವಿಭಾಗಗಳ ನಡುವೆ ಬಾಯಿ-ತೀಟೆಯ ಬಂಡವಾಳಶಾಹಿ-ವಿರೋಧದಂತಹ ಅಂಶಗಳ ಆಧಾರದ ಮೇಲೂ ಸಹ ಯಾವುದೇ ಸಂಘರ್ಷ ಇರಬಾರದು. ಭಾರತದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಯಾವತ್ತೂ ದೊಡ್ಡ ಉದ್ಯಮ-ವಿರೋಧಿಯಾಗಿರಲಿಲ್ಲ. ಆದ್ದರಿಂದ, ಬಂಡವಾಳಶಾಹಿಯ ಬಗ್ಗೆ ಸೈದ್ಧಾಂತಿಕ ವಿರೋಧದ ಪ್ರಶ್ನೆಯೇ ಏಳುವುದಿಲ್ಲ. ಬಂಡವಾಳವು ಜಾಗತೀಕರಣಗೊಂಡಿರುವಾಗ ಮತ್ತು ಪ್ರಭುತ್ವವು ರಾಷ್ಟ್ರ-ಪ್ರಭುತ್ವವಾಗಿಯೇ ಉಳಿದಿರುವಾಗ, ಅವುಗಳ ನಡುವೆ ಇರುವ ವೈರುಧ್ಯದಿಂದಾಗಿ ಪ್ರಭುತ್ವದ ಖರ್ಚು-ವೆಚ್ಚಗಳನ್ನು ಹೆಚ್ಚಿಸಿಕೊಂಡು ಅರ್ಥವ್ಯವಸ್ಥೆಯನ್ನು ಬಿಕ್ಕಟ್ಟಿನಿಂದ ಹೊರ ತರುವುದು ಕಷ್ಟಕರವಾಗುವುದರಿಂದ, ಮೊದಲನೆಯ ಷರತ್ತನ್ನು ಪಾಲಿಸಲಾಗುವುದಿಲ್ಲ. ಅಂದರೆ, ಪ್ರಭುತ್ವವು ಬಿಕ್ಕಟ್ಟನ್ನು ಪರಿಹರಿಸುವಷ್ಟು ಸಮರ್ಥವಾಗಿಲ್ಲ.

ಹಾಗಾದರೆ, ಪ್ರಭುತ್ವದ ಖರ್ಚು-ವೆಚ್ಚಗಳಿಗಾಗಿ "ನಗದೀಕರಣ" ಯೋಜನೆಯ ಮೂಲಕ ಹಣ ಒದಗಿಸಿಕೊಳ್ಳುವ ಕಾರ್ಯಕ್ರಮದ ಕತೆ ಏನು? ಕಾರ್ಪೊರೇಟ್-ಹಿಂದುತ್ವ ಮೈತ್ರಿಯೊಳಗಿನ ಬಿರುಕನ್ನು ಸರಿಪಡಿಸಬಹುದಾದ ಅರ್ಥವ್ಯವಸ್ಥೆಯ ಪುನರುಜ್ಜೀವನಕ್ಕೆ ಅದು ಕಾರಣವಾಗುವ ಸಂಭಾವ್ಯತೆ ಇಲ್ಲವೇ? ನಗದೀಕರಣ ಯೋಜನೆಯು ಒಂದು ಅಸಹ್ಯಕರ ಕ್ರಮ ಮಾತ್ರವಲ್ಲ, ನಾಲ್ಕು ವರ್ಷಗಳ ಅವಧಿಯಲ್ಲಿ 6 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡುವುದು ಸಾಧ್ಯವಾದರೂ ಸಹ, ಆ ಮೊತ್ತವು ಪ್ರತಿ ವರ್ಷಕ್ಕೆ ಜಿಡಿಪಿಯ 1%ಗಿಂತಲೂ ಕಡಿಮೆ ಇರುತ್ತದೆ. ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಸಾಲದು ಎನ್ನುವಂತೆ, ಅರ್ಥವ್ಯವಸ್ಥೆಯಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಲಾರದಷ್ಟು ಅತ್ಯಲ್ಪವಾಗಿದೆ ಈ ಹಣದ ಮೊತ್ತ.

## ಎಲ್ಲ ಅಧಿಕಾರಿಗಳನ್ನು ಅಮಾನತ್ತು ಮಾಡಿ ಕಾನೂನು ಕ್ರಮ ಕೈಗೊಳ್ಳಲು ಆಗ್ರಹ

ಕೊಪ್ಪಳ ಜಿಲ್ಲೆಯ ಮಿಯಾಪುರ ಗ್ರಾಮದಲ್ಲಿ ಎರಡು ವರ್ಷದ ಮಗುವೊಂದು ದೇವಸ್ಥಾನ ಪ್ರವೇಶಿಸಿದ್ದಕ್ಕೆ ಸವರ್ಣಿಯರು ರೂ. 25000 ದಂಡ ವಿಧಿಸಿದ ಅತ್ಯಂತ ಅಮಾನವೀಯ ಪ್ರಕರಣವು ನಡೆದಿದ್ದು ವಿವೇಕವುಳ್ಳವರೆಲ್ಲರೂ ತೀವ್ರವಾಗಿ ಖಂಡಿಸಬೇಕಿದೆ. ಇದೊಂದು ಮಾನವೀಯ ಮೌಲ್ಯಗಳಿಗೆ ಕಳಂಕ ತರುವಂತಹ ನಡವಳಿಕೆಯು ಈ ಗ್ರಾಮದ ಸವರ್ಣಿಯರಿಂದ ನಡೆದಿದೆ. ಇಡೀ ಪ್ರಕರಣವು ಸಂವಿಧಾನ ವಿರೋಧಿಯಾಗಿದೆ. ಮಗುವನ್ನೂ ಜಾತಿ ತಾರತಮ್ಯದ ನೆಲೆಯಲ್ಲಿಯೇ ನೋಡುವ ಕ್ರೂರ ಮನುಷ್ಯರು ಇವರಾಗಿದ್ದಾರೆ. ಭಾರತದ ನೆಲದ ಗುಣವೇ ಜಾತ್ಯಾತೀತದ್ದಾಗಿದೆ. ಆದರೆ ಪುರೋಹಿತಶಾಹಿಗಳ ಮನುಸ್ಮತಿಯು ಈ ನೆಲದ ಗುಣವನ್ನು ನಾಶ ಮಾಡಿ ಪೌರೋಹಿತ್ಯದ ಮನುಸ್ಮತಿ ಸಿದ್ಧಾಂತವನ್ನು ಕಸಿ ಮಾಡಲು ಪ್ರಯತ್ನಿಸುತಿದೆ. ಇವರ ಷಡ್ಯಂತ್ರಕ್ಕೆ ಶೂದ್ರ ಹಿಂದುಳಿದ ಸಮುದಾಯವು ಬಲಿ ಬೀಳುತಿದೆ. ಆದ್ದರಿಂದಲೇ ಮತ್ತೆ ಮತ್ತೆ ಜಾತಿ ಹೆಸರಿನಲ್ಲಿ ದಬ್ಬಾಳಿಕೆ ದೌರ್ಜನ್ಯಗಳು ಹೆಚ್ಚುತ್ತಿವೆ. ಈ ಸಂವಿಧಾನ ವಿರೋಧಿ ಚಟುವಟಿಕೆಗಳನ್ನು ನಿಯಂತ್ರಿಸುವ ಕುಂಚಿತ್ತು ರಾಜಕೀಯ ಇಚ್ಛೆಯು ಬಿಜೆಪಿ ಸರಕಾರಕ್ಕೆ ಇಲ್ಲವಾಗಿದೆ. ಜನತೆಯ ದೈವಿಕ ಭಾವುಕ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ದೇವಸ್ಥಾನ ನಿರ್ಮಾಣಕ್ಕೆ ಉತ್ತೇಜನ ಕೊಡುತ್ತಿರುವುದು ಸರಕಾರವೇ ಆಗಿದೆ. ಈ ಪ್ರಕರಣದಲ್ಲೂ ಸರಕಾರವು ತಪ್ಪಿತಸ್ಥರ ಬಗ್ಗೆ ಬಹಳ ಮೃದು ಧೋರಣೆ ಹೊಂದಿದೆ ಎನ್ನುವುದಕ್ಕೆ ಇಡೀ ಪ್ರಕರಣದ ಅಂತ್ಯ ಗಮನಿಸಬೇಕು. ಮಗು ದೇವಾಲಯ ಪ್ರವೇಶಿಸಿದ್ದಕ್ಕೆ ದಂಡ ವಿಧಿಸಿದ ಸವರ್ಣಿಯರ ಮೇಲೆ ಏನಾದರೂ ಕಾನೂನು ಕ್ರಮ ಕೈಗೊಂಡಿದ್ದಾರೆಯೆ? ಇಲ್ಲ. ಎಸ್ಸಿ ಎಸ್ಟಿ ಕಾಯ್ದೆಯಡಿ ಕೇಸು ದಾಖಲಿಸಿ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟಬೇಕಿತ್ತು. ಸರಕಾರ ಹಾಗೆ ಮಾಡಿಲ್ಲ. ಇದು ಸರಕಾರದ ಮನುಸ್ಮತಿ ಪರವಾದ ಮತ್ತು ಸಂವಿಧಾನ ವಿರೋಧಿ ಧೋರಣೆ ಎಂಬುದು ಅನಾವರಣಗೊಂಡಂತೆಯೇ ಸರಿ. ಸರಕಾರದ ಇಂತಹ ದಲಿತ, ಹಿಂದುಳಿದ ಮತ್ತು ಮಹಿಳಾ ವಿರೋಧಿ ಧೋರಣೆ ಕಾರಣವಾಗಿ ರಾಜ್ಯದಲ್ಲಿ ದಲಿತರ ಮತ್ತು ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಗಳು ಹೆಚ್ಚುತ್ತಿವೆ.

ಇಡೀ ಪ್ರಕರಣದ ದಿಕ್ಕುತಪ್ಪಿಸಿದ ಮತ್ತು ಆರೋಪಿಗಳನ್ನು ಜಾತಿ ನಿಂದನೆ ಪ್ರಕರಣದಡಿ ಬಂಧಿಸಲಾರದ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಅಮಾನತ್ತು ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು. ಹಾಗು ದಂಡ ವಿಧಿಸಿದ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಎಲ್ಲರ ಮೇಲೂ ಜಾತಿ ನಿಂದನೆ ಕೇಸು ದಾಖಲಿಸಿ ಜೈಲಿಗಟ್ಟಬೇಕು. ರಾಜ್ಯದಲ್ಲಿ ಹೆಚ್ಚುತ್ತಿರುವ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರಕಾರ ತನ್ನ ಬದ್ಧತೆ ವ್ಯಕ್ತಿಸಬೇಕು ಎಂದು ಆಗ್ರಹಿಸುತ್ತೇವೆ.

ಕಾ.ಸುಧಾಮ ಧನ್ನಿ, ಸಂಚಾಲಕರು, ದಲಿತ ಹಕ್ಕುಗಳ ಸಮಿತಿ

ಕಾ ಕೆ ನೀಲಾ, ಉಪಾಧ್ಯಕ್ಷ, ಜೆಎಂಎಸ್, ರಾಜ್ಯ ಸಮಿತಿ

ಕಾ ಜಗದೇವಿ ನೂಲಕರ್, ಸದಸ್ಯರು ದಲಿತ ಹಕ್ಕುಗಳ ಸಮಿತಿ

ಕಾ ಪಾಂಡುರಂಗ ಮಾವಿನಕರ್, ಸಹಸಂಚಾಲಕರು, ದಲಿತ ಹಕ್ಕುಗಳ ಸಮಿತಿ

ಕಾ. ಶಹನಾಜ್ ಅಖ್ತರ್, ಜೆಎಂಎಸ್.




# ಔಕಸ್ (AUKUS): ಶೀತಸಮರ 2.0 ದ ಹೊಸ ರಂಪ

**"ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ಭದ್ರತೆ ಮತ್ತು ಸ್ಥಿರತೆ"ಯನ್ನು ಕಾಪಾಡಲು ಔಕಸ್ (AUKUS) ಎಂಬ ಹೊಸ ಭದ್ರತಾ ಕೂಟದ ಘೋಷಣೆಯಾಗಿದೆ. ಫ್ರಾನ್ಸ್ ಈ ಘೋಷಣೆಯಿಂದ ಕುಪಿತಗೊಂಡಿದ್ದು, ವಿದೇಶ ಸಚಿವ ಸೇರಿದಂತೆ ಅದರ ವಕ್ತಾರರು ಸಾಮಾನ್ಯವಾಗಿ ರಾಜತಾಂತ್ರಿಕ ಹೇಳಿಕೆಗಳಲ್ಲಿ ಬಳಸದ ಅತ್ಯಂತ ಕಟುವಾದ ಭಾಷೆಯಲ್ಲಿ ಟೀಕಿಸಿದ್ದಾರೆ. ಇದರ ವಿರುದ್ಧ ಪ್ರತಿಭಟನೆಯ ಕ್ರಮವಾಗಿ ಫ್ರಾನ್ಸ್ ಯು.ಎಸ್. ಮತ್ತು ಆಸ್ಟ್ರೇಲಿಯಾಗಳಿಂದ ತನ್ನ ರಾಯಭಾರಿಗಳನ್ನು ವಾಪಸು ಕರೆಸಿಕೊಂಡಿದೆ. ಈ ಬೆಳವಣಿಗೆ ಭಾರತ, ಜಪಾನ್ ಗಳಿಗೂ ಆಶ್ಚರ್ಯ ತಂದಿದೆ. ಅದರಲ್ಲೂ 'ಇಂಡೋ–ಪೆಸಿಫಿಕ್ ಭದ್ರತೆ'ಗೆಂದೇ ಕಟ್ಟಲಾದ ಭಾರೀ ಪ್ರಚಾರ ಪಡೆದ, ಯು.ಎಸ್ ನಲ್ಲಿ ಮೊದಲ ಬಾರಿಗೆ ನಡೆಯಲಿರುವ (ಭಾರತ, ಯು.ಎಸ್, ಆಸ್ಟ್ರೇಲಿಯ, ಜಪಾನ್ ಗಳಿರುವ) "ಕ್ವಾಡ್‌ನ ದೈಹಿಕ ಶೃಂಗಸಭೆಯ ಕೆಲವು ದಿನಗಳ ಮೊದಲು ಈ ಘೋಷಣೆ, "ಕ್ವಾಡ್" ನಲ್ಲಿ ಯು.ಎಸ್. ಗೆ ವಿಶ್ವಾಸವಿಲ್ಲವೆಂದು ಹೇಳಿದಂತಾಗಿದೆ. ಭಾರತದಲ್ಲಿ ಭಾರೀ ಪ್ರಚಾರ ಪಡೆದಿದ್ದ "ಕ್ವಾಡ್" ಬಹಳ ಮಟ್ಟಿಗೆ ಅರ್ಥ ಕಳೆದುಕೊಂಡಂತಾಗಿದೆ. ಮೋದಿ ಸರಕಾರ ಮತ್ತು ಬಿಜೆಪಿ ಕೊಚ್ಚಿಕೊಳ್ಳುತ್ತಿದ್ದ ಯು.ಎಸ್ ಜತೆಗಿನ "ಘನಿಷ್ಠ ವ್ಯೂಹಾತ್ಮಕ ಸಂಬಂಧ" ಟೊಳ್ಳು ಎಂದು ಸಾಬೀತಾಗಿದೆ.**

**ಜಗದ ಸುತ್ತ**

**ವಸಂತರಾಜ ಎನ್.ಕೆ.**

ಸೆಪ್ಟೆಂಬರ್ 15 ರಂದು ಔಕಸ್ (AUKUS) ಎಂಬ ಹೊಸ ಭದ್ರತಾ ಕೂಟದ ಘೋಷಣೆಯನ್ನು ಯು.ಎಸ್. ಅಧ್ಯಕ್ಷ ಬಿಡೆನ್, ಯು.ಕೆ. ಪ್ರಧಾನಿ ಬೊರಿಸ್ ಜಾನ್ಸನ್ ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮೊರಿಸನ್ ಜಂಟಿಯಾಗಿ ಆಶ್ಚರ್ಯಕರ ಘೋಷಣೆಯನ್ನು ಮಾಡಿದರು. ಇದು "ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ಭದ್ರತೆ ಮತ್ತು ಸ್ಥಿರತೆ"ಯನ್ನು ಕಾಪಾಡಲು "ಹೊಸ ವರ್ಧಿಸಿದ ತ್ರಿಪಕ್ಷೀಯ ಭದ್ರತಾ ಪಾಲುದಾರಿಕೆ' ಎಂದು ಅವರು ಹೇಳಿದ್ದಾರೆ. ಚೀನಾವನ್ನು ನಿರ್ದಿಷ್ಟವಾಗಿ ಉಲ್ಲೇಖಿಸದಿದ್ದರೂ ಅದರ ವಿರುದ್ಧ ಇದು ಇನ್ನೊಂದು ಮಿಲಿಟರಿ ಕೂಟವೆಂದು ವ್ಯಾಪಕವಾಗಿ ಭಾವಿಸಲಾಗಿದೆ. ಬಿಬಿಸಿ ಮತ್ತು ಹೆಚ್ಚಿನ ಮಾಧ್ಯಮಗಳು ಇದನ್ನು ಇನ್ನೊಂದು ಚೀನಾ–ವಿರೋಧಿ ಕೂಟವೆಂದು ಕರೆದಿವೆ. ಚೀನಾ ಸಹ ಇದನ್ನು ತನ್ನ ವಿರುದ್ಧ ಮಿಲಿಟರಿ ಒತ್ತಡ ಹಾಕುವ "ಹಳೆಯ ಸವಕಲಾದ ಶೀತಸಮರದ ಮನೋಭಾವ ಮತ್ತು ಸಂಕುಚಿತ ವಿಶ್ವ–ರಾಜಕೀಯ ಗ್ರಹಿಕೆ" ಎಂದು ಟೀಕಿಸಿದೆ.

**ಫ್ರಾನ್ಸ್ ಪ್ರತಿಕ್ರಿಯೆ: "ಬೆನ್ನಿನಲ್ಲಿ ಚೂರಿ ಇರಿತ" "ಮಿತ್ರದ್ರೋಹ"**

ಇದರ ಜತೆಗೆ ಆಸ್ಟ್ರೇಲಿಯಾಕ್ಕೆ ಯು.ಎಸ್. ಮತ್ತು ಯು.ಕೆ ತಂತ್ರಜ್ಞಾನದ ಮತ್ತು ಜಂಟಿಯಾಗಿ ತಯಾರಿಸಿದ ಅಣು–ಚಾಲಿತ ಸಬ್ ಮರೀನ್ ಗಳ ಒಂದು ಪಡೆಯನ್ನು ಪೂರೈಸುವ ಒಪ್ಪಂದದ ಘೋಷಣೆಯನ್ನೂ ಮಾಡಲಾಯಿತು.. ಇದು ಇನ್ನಷ್ಟು ಆಶ್ಚರ್ಯಕರ ಘೋಷಣೆಯೆಂದು ಭಾವಿಸಲಾಗಿದೆ. ಏಕೆಂದರೆ ಇದರ ಪರಿಣಾಮವಾಗಿ ಆಸ್ಟ್ರೇಲಿಯಾ 2016ರಲ್ಲಿ ಫ್ರಾನ್ಸ್ ಜೊತೆಗೆ ಡಿಸೇಲ್–ವಿದ್ಯುತ್ ಮಾಡಿಕೊಂಡಿದ್ದ ಸಬ್ ಮರೀನ್ ಗಳ ಪಡೆಯ ಖರೀದಿಯ ಒಪ್ಪಂದವನ್ನು ರದ್ದು ಮಾಡಿದೆ. ಈ ಸಬ್ ಮರೀನ್ ಗಳ ಪಡೆಯ ಬೆಲೆ 90 ಶತಕೋಟಿ ಡಾಲರುಗಳು ಎಂದು ಹೇಳಲಾಗಿದೆ. ಅಣು–ಚಾಲಿತವಾಗಿದ್ದು 33 ವರ್ಷಗಳ ಕಾಲ ಯಾವುದೇ ಇಂಧನ–ಪೂರೈಕೆಯಿಲ್ಲದೆ ಚಲಿಸಬಹುದಾದ ಯು.ಎಸ್–ಯುಕೆ ಸಬ್ ಮರೀನ್ ಇದಕ್ಕಿಂತ ಗಮನಾರ್ಹವಾಗಿ ಹೆಚ್ಚು ದುಬಾರಿಯಾಗಿರುತ್ತದೆ ಎನ್ನಲಾಗಿದೆ.

ಫ್ರಾನ್ಸ್ ಈ ಘೋಷಣೆಯಿಂದ ಕುಪಿತಗೊಂಡಿದ್ದು, ವಿದೇಶ ಸಚಿವ ಸೇರಿದಂತೆ ಅದರ ವಕ್ತಾರರು ಸಾಮಾನ್ಯವಾಗಿ ರಾಜತಾಂತ್ರಿಕ ಹೇಳಿಕೆಗಳಲ್ಲಿ ಬಳಸದ ಅತ್ಯಂತ ಕಟುವಾದ ಭಾಷೆಯಲ್ಲಿ ಟೀಕಿಸಿದ್ದಾರೆ. ಫ್ರೆಂಚ್ ಸಬ್ ಮರೀನ್ ಗಳ ಪಡೆಯ ಖರೀದಿಯ ಒಪ್ಪಂದವನ್ನು ರದ್ದು ಮಾಡಿದ್ದು "ಬೆನ್ನಿನಲ್ಲಿ ಚೂರಿ ಇರಿತ" "ಮಿತ್ರದ್ರೋಹ", "ಸುಳ್ಳು, ಇಬ್ಬಗೆ ನಡವಳಿಕೆ, ಮಹಾ ವಿಶ್ವಾಸಘಾತ, ಮತ್ತು ತಿರಸ್ಕಾರ" ಎಂದು ಫ್ರೆಂಚ್ ವಕ್ತಾರರು ಟೀಕಿಸಿದ್ದಾರೆ. ಇದರ ವಿರುದ್ಧ ಪ್ರತಿಭಟನೆಯ ಕ್ರಮವಾಗಿ ಫ್ರಾನ್ಸ್ ಯು.ಎಸ್ ಮತ್ತು ಆಸ್ಟ್ರೇಲಿಯಾ ಗಳಿಂದ ತನ್ನ ರಾಯಭಾರಿಗಳನ್ನು ವಾಪಸು ಕರೆಸಿಕೊಂಡಿದೆ. ಫ್ರಾನ್ಸ್ ಮಾತ್ರವಲ್ಲದೆ, ಇಡೀ ಪ್ರಕ್ರಿಯೆಯಲ್ಲಿ ಯುರೋ ಕೂಟ ಮತ್ತು ಜಿ–7 ದೇಶಗಳೊಂದಿಗೆ ಪರಾಮರ್ಶೆ ಮಾಡದ್ದು ಆಶ್ಚರ್ಯ, ಕೋಪ, ಆತಂಕ ಹುಟ್ಟಿಸಿದೆ. ಔಕಸ್ (AUKUS) ಒಪ್ಪಂದದ ಮಾತುಕತೆ ಜಿ–7 ಸಭೆಯ ತೆರೆಮರೆಯಲ್ಲಿಯೇ ನಡೆಯಿತು ಎಂಬ ವರದಿ ಇನ್ನಷ್ಟು ಕೋಪ ಹುಟ್ಟಿಸಿದೆ.

**ಕ್ವಾಡ್, ಭಾರತ, ಜಪಾನ್ ಗೆ ಶೋಕ್?**

ಈ ಬೆಳವಣಿಗೆ ಯುರೋ ಕೂಟದ ದೇಶಗಳು ಮಾತ್ರವಲ್ಲದೆ ಭಾರತ, ಜಪಾನ್ ಗಳಿಗೂ ಆಶ್ಚರ್ಯ ತಂದಿದೆ. ಅದರಲ್ಲೂ ಇಂಡೋ–ಪೆಸಿಫಿಕ್ ಭದ್ರತೆಗೆಂದೇ (ಅಥವಾ ಚಿನಾ–ವಿರೋಧೀ ಕೂಟ) ಕಟ್ಟಲಾದ ಭಾರೀ ಪ್ರಚಾರ ಪಡೆದ "ಕ್ವಾಡ್" (ಭಾರತ, ಯು.ಎಸ್, ಆಸ್ಟ್ರೇಲಿಯ, ಜಪಾನ್) ಗಳಿರುವ ಯು.ಎಸ್ ನಲ್ಲಿ ಮೊದಲ ಬಾರಿಗೆ ನಡೆಯಲಿರುವ ದೈಹಿಕ ಶೃಂಗಸಭೆಯ ಕೆಲವು ದಿನಗಳ ಮೊದಲು ಈ ಘೋಷಣೆ, "ಕ್ವಾಡ್" ನಲ್ಲಿ ಯು.ಎಸ್ ಗೆ ವಿಶ್ವಾಸವಿಲ್ಲವೆಂದು ಹೇಳಿದಂತಾಗಿದೆ. ಆ ಮೂಲಕ ಭಾರತ, ಜಪಾನ್ ಗಳನ್ನು ಯು.ಎಸ್ ಲೆಕ್ಕಿಸುವುದಿಲ್ಲವೆಂದು ಸೂಚಿಸಿ ಅವುಗಳಿಗೆ ಅವಮಾನ ಮಾಡಿದಂತಾಗಿದೆ. ಭಾರತದಲ್ಲಿ ಭಾರೀ ಪ್ರಚಾರ ಪಡೆದಿದ್ದ "ಕ್ವಾಡ್" ಬಹಳ ಮಟ್ಟಿಗೆ ಅರ್ಥ ಕಳೆದುಕೊಂಡಂತಾಗಿದೆ. ಮೋದಿ ಸರಕಾರ ಮತ್ತು ಬಿಜೆಪಿ ಕೊಚ್ಚಿಕೊಳ್ಳುತ್ತಿದ್ದ ಯು.ಎಸ್ ಜತೆಗಿನ "ಘನಿಷ್ಠ ವ್ಯೂಹಾತ್ಮಕ ಸಂಬಂಧ" ಟೊಳ್ಳು ಎಂದು ಸಾಬೀತಾಗಿದೆ. ಇದು ಸಾಲದೆಂಬಂತೆ ಯು.ಎಸ್. ನಲ್ಲಿ ಕ್ವಾಡ್ ಸಭೆಯ ಜತೆಗೆ ಇಟ್ಟುಕೊಂಡಿದ್ದ ಭಾರತ, ಆಸ್ಟ್ರೇಲಿಯಾ, ಫ್ರಾನ್ಸ್ "ಇಂಡೊ–ಪೆಸಿಫಿಕ್ ತ್ರಿಪಕ್ಷೀಯ ಸಭೆ"ಯನ್ನು ಫ್ರಾನ್ಸ್ ರದ್ದು ಮಾಡಿದೆ. ಭಾರತ ಈ ಮಾಜಿ–ಹಾಲಿ ಸಾಮ್ರಾಜ್ಯಶಾಹಿ ದೇಶಗಳ ತಿಕ್ಕಾಟದ ಮಧ್ಯ ಭಾರತ ಸಿಕ್ಕು ಬಡವಾಗಿದೆ.




ಬಿಡೆನ್ ಅಫ್ಘಾನಿಸ್ತಾನದಿಂದ ಯು.ಎಸ್ ಮಿಲಿಟರಿ ಹಿಂತೆಗೆತದ ನಂತರ, ಇದು ಭಾರತ ಉಪಖಂಡ ಮತ್ತು ಏಶ್ಯಾದಲ್ಲಿ ಶಾಂತಿ ಕದಡಬಲ್ಲ ಮತ್ತು ಅಭದ್ರತೆಯನ್ನು ಹೆಚ್ಚಿಸಬಲ್ಲ ಪ್ರಮುಖ ಬೆಳವಣಿಗೆ. ಈಗಾಗಲೇ ಬಿಡೆನ್ ಟ್ರಂಪ್ ಆರಂಭಿಸಿದ ಚೀನಾ–ವಿರೋಧೀ ಕ್ರಮಗಳನ್ನು ಇನ್ನಷ್ಟು ತೀವ್ರವಾಗಿ ಮುಂದೊಯ್ಯುವ, ಚೀನಾದ ವಿರುದ್ಧ ಆಕ್ರಾಮಕ ನೀತಿಗಳನ್ನು ಹರಿಯಬಿಡುವ ಮತ್ತು ಚೀನಾ ಈ ಕಾಲಘಟ್ಟದಲ್ಲಿ ಪ್ರಮುಖ ವೈರಿ ಎಂದು ಸ್ಪಷ್ಟ ಪಡಿಸುವ ಮೂಲಕ, ಶೀತಸಮರ 2.0 ನ್ನು ಹೆಚ್ಚು ಕಡಿಮೆ ಈಗಾಗಲೇ ಘೋಷಿಸಿದ್ದಾರೆ. ಈಗಾಗಲೇ ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ "ಆಕ್ರಾಮಕ ಚೀನಾವನ್ನು ತಡೆ ಹಿಡಿಯುವ" ಯು.ಎಸ್ ಹೇಳುವ "ಭದ್ರತೆ ಮತ್ತು ಸ್ಥಿರತೆ"ಯನ್ನು ಕಾಪಾಡಲು (ಈಗಾಗಲೇ ವಿವರಿಸಿರುವ) 4 ದೇಶಗಳ "ಕ್ವಾಡ್" ಭದ್ರತಾ ಕೂಟ ಇದೆ. ಇದಕ್ಕಿಂತ ಮೊದಲು ಸ್ಥಾಪಿಸಿದ 5 ದೇಶಗಳ (ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲ್ಯಾಂಡ್, ಯು.ಕೆ, ಯು.ಎಸ್) "ಫೈವ್ ಐಸ್" (Five Eyes) ಜಾಗತಿಕವಾಗಿ ಬೇಹುಗಾರಿಕೆ ಮಾಹಿತಿಯ ಜಾಲವೂ ಇದೆ. ಹಾಗಾದರೆ **ತರಾತುರಿಯಲ್ಲಿ ಔಕಸ್ (AUKUS) ಘೋಷಣೆ ಯಾಕೆ?**




ಈಗಾಗಲೇ ಹೇಳಿದ ಹಾಗೆ "ಕ್ವಾಡ್" ಕೂಟ ಚೀನಾದ ವಿರುದ್ಧ ಪರಿಣಾಮಕಾರಿಯಾಗಲಿಕ್ಕಿಲ್ಲ ಎಂಬ ಸಂಶಯ ಯು.ಎಸ್. ಗೆ ಇದೆ. ಅಲ್ಲದೆ ಅದು ಪರಿಣಾಮಕಾರಿ ಆಗಬೇಕಾದರೆ ಚೀನಾದ ವಿರುದ್ಧ ಹರಿಯಬಿಡಬೇಕಾದ ಅತ್ಯಂತ ಉನ್ನತ ತಂತ್ರಜ್ಞಾನದ ಅಣ್ವಸ್ತ್ರ ಸೇರಿದಂತೆ ಶಸ್ತ್ರಾಸ್ತ್ರ ಮತ್ತು ಸಮುಚ್ಚಯಗಳನ್ನು ಭಾರತ ಮತ್ತು ಜಪಾನಿನ ಜತೆ ಹಂಚಿಕೊಳ್ಳಬೇಕು. ಇದನ್ನು ಹಂಚಿಕೊಳ್ಳುವಷ್ಟು ವಿಶ್ವಾಸ ಭಾರತ ಮತ್ತು ಜಪಾನಿನ ಮೇಲೆ ಯು.ಎಸ್ ಗೆ ಇಲ್ಲ. ಇವೆರಡೂ ದೇಶಗಳ ಹಿತಾಸಕ್ತಿ ಮತ್ತು ರಾಜಕೀಯ/ಸಾಮಾಜಿಕ ಪರಿಸ್ಥಿತಿಯಿಂದಾಗಿ ಇವು ಚೀನಾದ ವಿರುದ್ಧ ತನ್ನ ಆಕ್ರಾಮಕ ಕ್ರಮಗಳಲ್ಲಿ ಭಾಗವಹಿಸುವುದು ಮತ್ತು ತನ್ನ ಮಿಲಿಟರಿ–ರಾಜಕೀಯ ಕ್ರಮಗಳನ್ನು ಚಾಚೂ ತಪ್ಪದೆ ಬೆಂಬಲಿಸುವುದು ಸಾಧ್ಯವಾಗಲಿಕ್ಕಿಲ್ಲ ಎಂಬುದು ಯು.ಎಸ್. ನ ಗ್ರಹಿಕೆ, ಅಫ್ಘಾನಿಸ್ತಾನದ ರಾಜಕೀಯ ಭವಿಷ್ಯದ ಮಾತುಕತೆಗಳಲ್ಲಿ, ಮತ್ತು ಆ ದೇಶದಿಂದ ಮಿಲಿಟರಿ ಹಿಂತೆಗೆತದ ನಿರ್ಣಯದಲ್ಲಿ "ಘನಿಷ್ಠ ವ್ಯೂಹಾತ್ಮಕ ಸಂಬಂಧ" ಇರುವ ಭಾರತವನ್ನು ಯು.ಎಸ್ ಪೂರ್ಣವಾಗಿ ಕಡೆಗಣಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ನಾಟೋ, ಯುರೋಕೂಟ ಕ್ಕೂ ನಿರ್ಲಕ್ಷ**

ಇವೆಲ್ಲದರ ಜತೆ ಯು.ಕೆ ಮತ್ತು ಯು.ಎಸ್. ಮಿಲಿಟರಿ ಉದ್ಯಮದ ವ್ಯಾವಹಾರಿಕ ಹಿತಾಸಕ್ತಿಗಳು ಸಹ ಇದರಲ್ಲಿ ದೊಡ್ಡ ಪಾತ್ರ ವಹಿಸಿವೆ ಎಂದು ಹೇಳಲಾಗಿದೆ. ಯು.ಕೆ. ಮಿಲಿಟರಿ ಉದ್ಯಮಕ್ಕೆ ಇದು ದೊಡ್ಡ ವ್ಯವಹಾರ. ಯು.ಕೆ. ಪ್ರಧಾನಿ ಈ ಘೋಷಣೆಯ ಟೀಕೆಗೆ ಉತ್ತರಿಸುತ್ತಾ, ದೇಶದಲ್ಲಿ ಇದು ಹಲವು ವರ್ಷಗಳ ಕಾಲ ಸಾವಿರಾರು ಜನರಿಗೆ ಉತ್ತಮ ಗುಣಮಟ್ಟದ ಉದ್ಯೋಗ ಕೊಡಲಿದೆ ಎಂದರು. ಅದೇ ರೀತಿಯಲ್ಲಿ ನಾಟೋ ಕೂಟವನ್ನು ಪೂರ್ವಕ್ಕೆ ಅದರ ಗಡಿಯವರೆಗೆ ವಿಸ್ತರಿಸಿ ರಶ್ಯಾವನ್ನು ಸುತ್ತುವರೆದು ಅದರ ಅಪಾಯ ಗಮನಾರ್ಹವಾಗಿ ಕಡಿಮೆಯಾಗಿದೆ ಎಂಬುದು ಯು.ಎಸ್ ಗ್ರಹಿಕೆ. ಆದ್ದರಿಂದ ನಾಟೋ ಕೂಟದ ಮೂಲಕ ರಶ್ಯಾ ಮತ್ತು ಕ್ವಾಡ್ ಇತ್ಯಾದಿ ಕೂಟದ ಮೂಲಕ ಚೀನಾದ ಮೇಲೆ ಎರಡೂ ಕಡೆ ಒಂದೇ ಸಮಯದಲ್ಲಿ ಮಿಲಿಟರಿ ಆಕ್ರಾಮಕತೆಯ ಸಾಧುವಲ್ಲ, ಅಗತ್ಯವೂ ಇಲ್ಲ. ಬಂಡವಾಳಶಾಹಿ ರಶ್ಯಾಕ್ಕಿಂತ ಸಮಾಜವಾದಿ ಚೀನಾ ದೊಡ್ಡ ಮತ್ತು ನಿಜವಾದ ವೈರಿ. ಆದ್ದರಿಂದ ಚೀನಾದ ಮೇಲೆ ಎಲ್ಲ ಮಿಲಿಟರಿ ಆಕ್ರಾಮಕತೆಯನ್ನು ಕೇಂದ್ರೀಕರಿಸಬೇಕು. ಇತ್ತೀಚಿನ ನಾಟೋ ಶೃಂಗಸಭೆಯಲ್ಲಿ ಸಹ ಬಿಡೆನ್ ಒತ್ತಡದ ಮೇರೆಗೆ ಮೊತ್ತ ಮೊದಲ ಬಾರಿಗೆ ಚೀನಾ ನಾಟೋ ಕೂಟದ ವೈರಿ ಎಂದು ಹೇಳಲಾಯಿತು ಎಂದು ಇಲ್ಲಿ ಗಮನಿಸಬೇಕು.

ಇದಲ್ಲದೆ ಬ್ರೆಕ್ಸಿಟ್ ನಂತರ ಯು.ಎಸ್–ಯುಕೆ ಇನ್ನಷ್ಟು ಹೆಚ್ಚು ಹತ್ತಿರ ಬಂದಿದ್ದು ಯು.ಎಸ್ ನ ಜಾಗತಿಕ ವ್ಯೂಹಾತ್ಮಕ ಲೆಕ್ಕಾಚಾರದಲ್ಲಿ ಮಹತ್ವ ಕಳೆದುಕೊಂಡಿರುವ ಯುರೋ ಕೂಟದ ದೇಶಗಳನ್ನು ಉದ್ದೇಶ ಪೂರ್ವಕವಾಗಿ ಕಡೆಗಣಿಸುತ್ತಿವೆ. ಮಾತ್ರವಲ್ಲದೆ ಚೀನಾದ ಜತೆ ಸಂಘರ್ಷದ ಸಂಬಂಧ ಹೊಂದುವ ಕುರಿತು ಯುರೋ ಕೂಟಕ್ಕೆ ಯು.ಎಸ್ ಜತೆ ಗಂಭೀರ ಭಿನ್ನಾಭಿಪ್ರಾಯವಿದೆ. ಚೀನಾದ ಜತೆ ಸಹಕಾರದಿಂದ ಅದರ 'ಆಕ್ರಾಮಕತೆ, ಸರ್ವಾಧಿಕಾರಿ ವ್ಯವಸ್ಥೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಸಹನೀಯ ಮಿತಿಯೊಳಗೆ ತರಬಹುದು, ಮತ್ತು ಅದರ ಜತೆ ಪೈಪೋಟಿ ಮಾಡಬೇಕೆ ವಿನಹ ಸಂಘರ್ಷವಲ್ಲ ಎಂಬುದು ಯುರೋ ಕೂಟದ ಸ್ಥೂಲ ಅಭಿಪ್ರಾಯ. ಇದು ಯು.ಎಸ್ ಗೆ ಅಪಥ್ಯ. ಹಾಗಾಗಿ ಅದು ಔಕಸ್ (AUKUS) ರಚಿಸುವ ಕುರಿತು ಯುರೋ ಕೂಟದ ಜತೆಗಾಗಲಿ, ಸಬ್ ಮರೀನ್ ವ್ಯವಹಾರದ ಕುರಿತು ಫ್ರಾನ್ಸ್ ನ ಜತೆಗಾಗಲಿ ಪರಾಮರ್ಶೆ ಮಾಡಲಿಲ್ಲ. ಅವನ್ನು ಉದ್ದೇಶ ಪೂರ್ವಕವಾಗಿ ಕಡೆಗಣಿಸಲಾಯಿತು.

**ಶೀತಸಮರ 2.0 ದ ಹೊಸ ರಂಪಕ್ಕೆ ಪ್ರತಿರೋಧದ ಸಾಧ್ಯತೆ**

ಔಕಸ್ (AUKUS) ರಚಿಸುವ ಯು.ಎಸ್ ನ ಈ ಶೀತಸಮರ 2.0 ದ ಹೊಸ ರಂಪ ಅಥವಾ ಆಕ್ರಾಮಕ ಕ್ರಮ ಏಶ್ಯಾ ಮತ್ತು ಅಂತಿಮವಾಗಿ ಇಡೀ ವಿನಾಶಕಾರಿ ಯುದ್ಧದತ್ತ ಎಳೆಯುವ ಎಲ್ಲ ಸಾಧ್ಯತೆಗಳಿವೆ. ಫ್ರಾನ್ಸ್, ಯುರೋಕೂಟ, ಭಾರತ, ಜಪಾನ್ ಗಳನ್ನು ನೋಯಿಸುವ, ಕಡೆಗಣಿಸುವ, ಅವಮಾನಿಸುವ ಈ ಕ್ರಮ ಅದರಿಂದಾಗಿ ಗಂಭೀರ ವೈಫಲ್ಯ ಕಾಣುವ ಅಥವಾ ಯು.ಎಸ್ ಗೆ ಬ್ಯೂಮರಾಂಗ್ ಆಗುವ ಸಾಧ್ಯತೆ ಸಹ ಇದೆ. ಯುರೋ ಕೂಟ ತನ್ನ ಭದ್ರತೆಗೆ ತನ್ನದೇ ವ್ಯವಸ್ಥೆ ಹೊಂದಬೇಕೆಂದು ಫ್ರಾನ್ಸ್ ಈಗಾಗಲೇ ವಾದಿಸುತ್ತಿದೆ. ಚೀನಾ ಸಹ ಇದರ ವಿರುದ್ಧ ಪ್ರತಿತಂತ್ರಗಳನ್ನು ಹೂಡಬಹುದು.

ಕೊನೆಯದಾಗಿ ಈ ವಿನಾಶಕಾರಿ ಕ್ರಮದ ಪರಿಣಾಮಗಳು ಗೋಚರಿಸಲಾರಂಭಿಸಿದಾಗ ಅದರ ವಿರುದ್ಧ ಔಕಸ್ ದೇಶಗಳಲ್ಲೇ ಮತ್ತು ಜಾಗತಿಕವಾಗಿ ಶಾಂತಿ ಚಳುವಳಿಯಿಂದ ತೀವ್ರ ವಿರೋಧ–ಪ್ರತಿರೋಧ ಏಳಬಹುದು. ಆಸ್ಟ್ರೇಲಿಯ 1973ರಲ್ಲಿ ಅಣ್ವಸ್ತ್ರ ಪ್ರಸರಣ ನಿಷೇಧ ಮತ್ತು 1985ರಲ್ಲಿ ದಕ್ಷಿಣ ಪೆಸಿಫಿಕ್ ಅಣ್ವಸ್ತ್ರ–ಮುಕ್ತ ವಲಯ ಒಪ್ಪಂದಗಳಿಗೆ ಸಹಿ ಹಾಕಿದೆ. ಇವೆರಡರ ಪ್ರಕಾರ ಅಣ್ವಸ್ತ್ರಗಳನ್ನು ಅದಕ್ಕೆ ಸಂಬಂಧಿಸಿದ ಯಾವುದೇ ಸಾಮಗ್ರಿಗಳನ್ನು ಅದು ತನ್ನ ದೇಶದಲ್ಲಿ ಮತ್ತು ದಕ್ಷಿಣ ಪೆಸಿಫಿಕ್ ಪ್ರದೇಶಧಲ್ಲಿ ಹೊಂದುವಂತಿಲ್ಲ. ಅದು ಈಗ ಖರೀದಿಸುತ್ತಿರುವ ಅಣುಶಕ್ತಿ–ಚಾಲಿತ ಸಬ ಮೇರಿನ್ ಅಣ್ವಸ್ತ್ರ ಕ್ಷಿಪಣಿಗಳನ್ನು ಎಸೆಯುವ ಸಾಮರ್ಥ್ಯ ಹೊಂದಿದೆ. ಇದಲ್ಲದೆ ಆಸ್ಟ್ರೇಲಿಯ ಎರಡನೇ ಅತಿ ದೊಡ್ಡ ಯುರೇನಿಯಂ ನಿಕ್ಷೇಪಗಳನ್ನು ಹೊಂದಿದ್ದು, ಅದನ್ನು ಅಣ್ವಸ್ತ್ರಗಳ ತಯಾರಿಯ ಹೊಸ್ತಿಲಲ್ಲಿ ಇರುವ ದೇಶವೆಂದು ಪರಿಗಣಿಸಲಾಗಿದೆ. ಅದು ಯುರೇನಿಯಂ ನ್ನು ಯು.ಎಸ್ ಮತ್ತು ಯು.ಕೆಗಳಿಗೆ ರಫ್ತು ಮಾಡುತ್ತದೆ. ಇವೆಲ್ಲ ಸೇರಿ ಔಕಸ್ (AUKUS) ಈ ಎರಡು ಒಪ್ಪಂದಗಳ ಉಲ್ಲಂಘನೆಯೆಂದೇ ಜಾಗತಿಕ ಶಾಂತಿ ಚಳುವಳಿ ಪರಿಗಣಿಸಲಾಗಿದೆ. ಆಗಲೇ ಯು.ಕೆ ಲೇಬರ್ ನಾಯಕ ಕೊರ್ಬಿನ್, ಡೆಮೊಕ್ರಾಟಿಕ್ ಪಕ್ಷದ ಎಡಪಂಥೀಯರು ಈ ಕ್ರಮದ ವಿರುದ್ಧ ತೀವ್ರ ಟೀಕೆ ಮಾಡಿದ್ದಾರೆ.

JANASHAKTHI KANNADA VARA PATRIKE September 27-October 3, 2021 Price: Rs. 10/- Date of Publication: 24 September 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21






# ಸಿಪಿಐ(ಎಂ) ವತಿಯಿಂದ ಬೃಹತ್ ವಿಧಾನಸೌಧ ಚಲೋ

ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು, ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ರೂ.ಗಳ ಪರಿಹಾರ, ತ್ವರಿತ ಮತ್ತು ಉಚಿತ ಸಾರ್ವತ್ರಿಕ ಲಸಿಕೆಗಾಗಿ, ರೈತ ವಿರೋಧಿ ಶಾಸನಗಳು ಮತ್ತು ಕಾರ್ಮಿಕ ವಿರೋಧಿ ಸಂಹಿತೆಯಗಳನ್ನು ರದ್ದುಪಡಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಪಕ್ಷದ ವತಿಯಿಂದ ನಗರದಲ್ಲಿ ಬೃಹತ್ ವಿಧಾನಸೌಧ ಚಲೋ ಮೂಲಕ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸಿಪಿಐ(ಎಂ) ಪಕ್ಷದ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾದ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಜನತೆ ಅದರಲ್ಲೂ ಹೆಚ್ಚಾಗಿ ಮಹಿಳೆಯರು ಭಾಗಿಯಾಗಿ ಸರ್ಕಾರದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಅಸಂಘಟಿತ ಕಾರ್ಮಿಕರ ದೊಡ್ಡ ಪ್ರಮಾಣದಲ್ಲಿದ್ದು ಅವರು ಅರ್ಜಿ ಸಲ್ಲಿಸಿದ ಎಲ್ಲರಿಗೂ ಕೂಡಲೇ ಪರಿಹಾರಗಳನ್ನು ಬಿಡುಗಡೆ ಮಾಡಬೇಕು ಮತ್ತು ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆಯ ಅರ್ಜಿ ಸಲ್ಲಿಕೆ ಕಾಲಾವಧಿ ವಿಸ್ತರಿಸಬೇಕೆಂದು ಸಿಪಿಐ(ಎಂ) ಪಕ್ಷವು ಆಗ್ರಹಿಸಿದೆ.

ಕೋವಿಡ್ ಸಾಂಕ್ರಾಮಿಕದ ಸಂಕಷ್ಟದಲ್ಲಿ ಜನತೆ ಇರುವಾಗ ಲಸಿಕೆ ಪೂರೈಕೆಯನ್ನು ಉಚಿತವಾಗಿ ತ್ವರಿತವಾಗಿ ಮತ್ತು ಸಾರ್ವತ್ರಿಕವಾಗಿ ಒದಗಿಸದೆ ಜನತೆಯು ಲಸಿಕೆಗಾಗಿ ಪರದಾಡುವ ಪರಿಸ್ಥಿತಿಯನ್ನು ಕೇಂದ್ರ ಬಿಜೆಪಿ ಸರ್ಕಾರವು ಸೃಷ್ಟಿಸಿದೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ಮಧ್ಯಪ್ರವೇಶ ಹಾಗೂ ವಿರೋಧ ಪಕ್ಷಗಳ ಒತ್ತಾಯದ ಮೇರೆಗೆ ಉಚಿತ ಲಸಿಕೆಯ ಯೋಜನೆಯನ್ನು ಕೇಂದ್ರ ಬಿಜೆಪಿ ಸರ್ಕಾರವು ತಡವಾಗಿ ಆರಂಭಿಸಿದೆ. ಈಗಲೂ ಎಲ್ಲರಿಗೂ ಲಸಿಕೆ ದೊರೆಯುತ್ತಿಲ್ಲ ಎಂಬುದು ವಾಸ್ತವ ಅಂಶವಾಗಿದೆ. ಎಂದು ಸಿಪಿಐ(ಎಂ) ಪಕ್ಷವು ಪ್ರತಿಭಟನೆಯಲ್ಲಿ ಆಗ್ರಹಿಸಲಾಗಿದೆ.

ಕೋವಿಡ್ ಲಾಕ್‌ಡೌನ್ ಪರಿಹಾರಕ್ಕಾಗಿ ಜನತೆಯು ನಡೆಸಿದ ಹೋರಾಟದ ಪರಿಣಾಮವಾಗಿ ಪ್ರಸಕ್ತ ವರ್ಷದಲ್ಲಿ 11 ವೃತ್ತಿಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ 2000 ರೂ.ಗಳ ಪರಿಹಾರವನ್ನು ರಾಜ್ಯ ಸರ್ಕಾರವು ಪ್ರಕಟಿಸಿದೆ. ಅರ್ಜಿ ಸಲ್ಲಿಸಿ ಎರಡು ತಿಂಗಳಾದರೂ ಇದುವರೆಗೆ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಿಲ್ಲ. ಲಾಕ್‌ಡೌನ್ ಪರಿಣಾಮದಿಂದಾಗಿ ಈಗಲೂ ಆರ್ಥಿಕತೆ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿಲ್ಲ.

ಇಂತಹ ಸಂದರ್ಭದಲ್ಲಿ ಕೇಂದ್ರ ಬಿಜೆಪಿ ಸರ್ಕಾರವು ಜನತೆಯ ಆಸ್ತಿಯನ್ನು ಆರು ಕಾಸು ಮೂರು ಕಾಸಿಗೆ ಮಾರಾಟ ಮಾಡಲು ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆಯನ್ನು ಪ್ರಕಟಿಸಿದೆ. ಸಂವಿಧಾನಿಕ ಸಂಸ್ಥೆಗಳನ್ನು ಕಡೆಗಣಿಸಿ ಪಲ್ಲಟಗೊಳಿಸಲು ಮುಂದಾಗಿದೆ. ಜನತೆಯ ನೆರವಿಗೆ ಧಾವಿಸುತ್ತಿಲ್ಲ. ಆದರೆ ಬಿಜೆಪಿ ಸರ್ಕಾರಗಳು ತಮ್ಮ ಹಿಂದಿನ ಕೋಮುವಾದಿ ಧೃವೀಕರಣಕ್ಕೆ ನಿರಂತರ ಯತ್ನವನ್ನು ಮಾಡುತ್ತಾ ಬಂದಿವೆ.

ರೈತ ವಿರೋಧಿ ಶಾಸನಗಳ ವಿರುದ್ಧ ರೈತರು 2020ರ ನವೆಂಬರ್ 26ರಿಂದ ನಡೆಸುತ್ತಿರುವ ಹೋರಾಟಕ್ಕೆ ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತಿಲ್ಲ. ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ರೂಪಿಸಿ ಜಾರಿಗೊಳಿಸಲು ಕೇಂದ್ರ ಬಿಜೆಪಿ ಸರ್ಕಾರ ಮುಂದಾಗಿದೆ. ಅದರ ವಿರುದ್ಧದ ಕಾರ್ಮಿಕರ ಹೋರಾಟಗಳನ್ನು ಮನಗಾಣುತ್ತಿಲ್ಲ. ರಾಷ್ಟ್ರದ ಶಿಕ್ಷಣ ವ್ಯವಸ್ಥೆಯನ್ನು ತ್ವರಿತವಾಗಿ ವ್ಯಾಪಾರೀಕರಣ, ವಾಣಿಜ್ಯೀಕರಣಕ್ಕೆ ಅನುವುಗೊಳಿಸಲು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೇಂದ್ರ ಬಿಜೆಪಿ ಸರ್ಕಾರವು ಏಕಪಕ್ಷೀಯವಾಗಿ ರೂಪಿಸಿ ರಾಜ್ಯ ಬಿಜೆಪಿ ಸರ್ಕಾರವು ಅದರ ಜಾರಿಗೆ ಮುಂದಾಗಿದೆ.

ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ರಾಷ್ಟ್ರ, ರಾಜ್ಯದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ಪರ್ಯಾಯ ನೀತಿಗಳ ಬೇಡಿಕೆಗಳಿಗಾಗಿ ಸಿಪಿಐ(ಎಂ) ಪಕ್ಷವು ರಾಷ್ಟ್ರವ್ಯಾಪಿ ಪ್ರಚಾರಾಂದೋಲನವನ್ನು ನಿರಂತರವಾಗಿ ಹಮ್ಮಿಕೊಂಡಿದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದ್ದಾರೆ.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಎನ್.ಉಮೇಶ್, ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ, ಮುಖಂಡರಾದ ಗೌರಮ್ಮ, ಟಿ. ಲೀಲಾವತಿ, ಹೆಚ್.ಎನ್. ಗೋಪಾಲಗೌಡ, ಎನ್. ವೆಂಕಟಚಲಯ್ಯ, ಬಿ.ಎನ್. ಮಂಜುನಾಥ್, ಸಿ. ಚಂದ್ರಶೇಖರ್, ಬಿ. ರಾಜಶೇಖರ ಮೂರ್ತಿ, ಸೆಲ್ವಿ, ಮತ್ತಿತರ ಮುಖಂಡರು ಭಾಗವಹಿಸಿದ್ದರು.

# ಮಂಡಳಿಯ ಭ್ರಷ್ಟತೆ ಖಂಡಿಸಿ–ಸಮರ್ಪಕ ನೆರವಿಗಾಗಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕಟ್ಟಡ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವ ಉದ್ದೇಶದಿಂದ ರಚಿಸಲಾದ ಕಲ್ಯಾಣ ಮಂಡಳಿಯಲ್ಲಿನ ಹಲವು ಯೋಜನೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆರೋಪಗಳನ್ನು ಸಮಗ್ರವಾಗಿ ತನಿಖೆ ಕೈಗೊಳ್ಳಬೇಕು ಹಾಗೂ ಕಟ್ಟಡ ಕಾರ್ಮಿಕರಿಗೆ ಸಮರ್ಪಕವಾಗಿ ಯಾವುದೇ ಲೋಪ ಮತ್ತು ವಿಳಂಬವಿಲ್ಲದೆ ಒದಗಿಸಬೇಕೆಂದು ಕಟ್ಟಡ ಕಾರ್ಮಿಕರ ಜಂಟಿ ವೇದಿಕೆಯು ಒಂದು ಪ್ರತಿಭಟನೆಯನ್ನು ಹಮ್ಮಿಕೊಂಡಿತು.

ಮಂಡಳಿಯು ಕಾರ್ಮಿಕರಿಗೆ ಅಗತ್ಯವಿಲ್ಲದ ಟೆಂಡರ್ ಆಧಾರಿತ ಕಾರ್ಯಕ್ರಮಗಳನ್ನು ಕಾನೂನು, ನಿಯಮಾವಳಿ ಮೀರಿ ಜಾರಿಗೆ ತರುತ್ತಿದೆ. ಇದರಿಂದ ಮಂಡಳಿಯ ಹಣ ಕಾರ್ಮಿಕರಿಗೆ ಸಿಗುವ ಬದಲು, ಮಂತ್ರಿಗಳು, ಅಧಿಕಾರಿಗಳ ಬಂಗಲೆ ಸೇರುತ್ತಿದೆ. ಕಲ್ಯಾಣ ಮಂಡಳಿ ಹಣವನ್ನು ಕಾರ್ಮಿಕರಿಗೆ ಬಳಕೆ ಮಾಡಬೇಕು ಎಂದು ಆಗ್ರಹಿಸಿ ಕಾರ್ಮಿಕರು ಆಗ್ರಹಿಸಿದರು.

ಲಾಕ್‌ಡೌನ್ ಪರಿಹಾರವಾಗಿ ಸರಕಾರ ಘೋಷಿಸಿದ ರೂ.3000/– ಪರಿಹಾರ ಹಣ ಆರು ತಿಂಗಳು ಕಳೆದರೂ ಬಹುಪಾಲು ಕಾರ್ಮಿಕರಿಗೆ ವರ್ಗಾವಣೆಯಾಗಿಲ್ಲ ಎಂದ ಗಂಭೀರ ಆರೋಪಗಳಿವೆ. ಕಾರ್ಮಿಕರಲ್ಲದವರು ಕಟ್ಟಡ ಕಾರ್ಮಿಕರೆಂದು ನೋಂದಣಿಯನ್ನು ತಡೆಯುವ ನಿಟ್ಟಿನಲ್ಲಿ ತಡೆ ಹಿಡಿಯಲಾಗಿದ್ದ ಆನ್‌ಲೈನ್ ನೋಂದಣಿ ನಿಂತಿದೆ. ಆದರೆ, ಅದನ್ನು ಆರಂಭ ಮಾಡದೆ ಇರುವುದರಿಂದ ನಿಜವಾದ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ಸಮರ್ಪಕವಾಗಿ ಈ ಬಗ್ಗೆ ಉತ್ತರಿಸುತ್ತಿಲ್ಲ.

ಈಗಾಗಲೇ ಶಾಲಾ ಕಾಲೇಜುಗಳು ಪ್ರಾರಂಭವಾಗಿದೆ. ಈ ವರ್ಷದ ಶೈಕ್ಷಣಿಕ ಧನಸಹಾಯಕ್ಕೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯೂ ಆರಂಭಿಸದೆ ಇರುವುದು ಖಂಡನೀಯ. ಎಂದಿನಂತೆ ಶಾಲಾ–ಕಾಲೇಜುಗಳು ಆರಂಭಗೊಳ್ಳುತ್ತಿದ್ದಂತೆಯೇ ಶೈಕ್ಷಣಿಕ ಧನಸಹಾಯಕ್ಕೆ ಅರ್ಜಿ ಸಲ್ಲಿಸಲಾಗುತ್ತಿತ್ತು. ಆದರೆ ಸರ್ಕಾರ ಈ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಕಾರ್ಮಿಕರು ಆರೋಪಿಸಿದರು.

ಕೋವಿಡ್‌ನಿಂದ ಮೃತಪಟ್ಟ ಕಾರ್ಮಿಕರಿಗೆ ರೂ.2 ಲಕ್ಷ ಪರಿಹಾರ ನೀಡುವುದಾಗಿ ಘೋಷಣೆ ಮಾಡಿತ್ತು. ಆದರೆ ಇದುವರೆಗೂ ಯಾವೊಬ್ಬ ಕಾರ್ಮಿಕರಿಗೂ ಪರಿಹಾರದ ಮೊತ್ತ ಬಿಡುಗಡೆಯಾಗಿಲ್ಲ ಎಂದರು.

ಕಲ್ಯಾಣ ಮಂಡಳಿಯುಲ್ಲಿ ಭ್ರಷ್ಟಾಚಾರವೇ ಅಡಗಿದೆ. ಕಾರ್ಮಿಕರಿಗೆ ಆಹಾರ ಕಿಟ್ ವಿತರಣೆ ಸಂದರ್ಭದಲ್ಲಿ 21 ಲಕ್ಷ ಕಿಟ್‌ಗಳಿಗೆ 600 ರೂಪಾಯಿ ಬೆಲೆ ಬಾಳುವ ವಸ್ತುಗಳಿಗೆ 938 ರೂಪಾಯಿ ಹಣ ವ್ಯಯಿಸಿದೆ. ಅಲ್ಲದೆ, ಟೂಲ್ ಕಿಟ್, ಸುರಕ್ಷಾ ಕಿಟ್, ಬೂಸ್ಟಪ್ ಕಿಟ್‌ಯಲ್ಲಿಯೂ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಅಲ್ಲದೆ, ಕಂಪ್ಯೂಟರ್, ಟಿವಿ, ಐಷಾರಾಮಿ ಕಾರು ಖರೀದಿ ಮಾಡಲಾಗಿದ್ದು, ಇವೆಲ್ಲವನ್ನೂ ಅತ್ಯಂತ ದುಬಾರಿ ಬೆಲೆಗೆ ಅದೂ ಕಾರ್ಮಿಕರ ಹಣವನ್ನು ಅದಕ್ಕೆ ವ್ಯಯಿಸಿರುವುದನ್ನು ಪ್ರತಿಭಟನಾಕಾರರು ಖಂಡಿಸಿದರು ಮತ್ತು ಮಂಡಳಿಯು ಕೈಗೊಂಡಿರುವ ಎಲ್ಲತರದ ವ್ಯವಹಾರಗಳನ್ನು ತನಿಖೆಗೆ ಒಳಪಡಿಸಿ ಅಗತ್ಯಕ್ಕಿಂತ ಹೆಚ್ಚಿನ ಹಣವನ್ನು ಹಾಗೂ ದುಂದುವೆಚ್ಚ ಮಾಡಿರುವ ಕ್ರಮವನ್ನು ಬಯಲಿಗೆಳೆಯಬೇಕು, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದ್ದಾರೆ.

ಮಂಡಳಿಯಿಂದ ಈಗಾಗಲೇ ಕಟ್ಟಡ ಕಾರ್ಮಿಕರಿಗೆ ಸುಮಾರು 19 ಸವಲತ್ತುಗಳನ್ನು ನೀಡಲಿದೆ ಎಂದು ಹೇಳಲಾಗುತ್ತಿದೆ. ಆದರೆ ಅದರಲ್ಲಿ ಸುಮಾರು 9 ಸೌಲಭ್ಯಗಳನ್ನು ಇದುವರೆಗೂ ಯಾವೊಬ್ಬ ಕಾರ್ಮಿಕರು ಪಡೆಯಲು ಸಾಧ್ಯವಾಗಿಲ್ಲ. ಇವುಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.



ಪ್ರತಿಭಟನೆಯಲ್ಲಿ ಸಿಐಟಿಯು,ಐಎನ್‌ಟಿಯುಸಿ, ಎನ್‌ಸಿಎಲ್, ಎಐಟಿಯುಸಿ, ಎಐಯುಟಿಯುಸಿ, ಎಐಸಿಸಿಟಿಯು, ಹೆಚ್‌ಎಂಎಸ್, ಟಿಯುಸಿಸಿ ಸಂಘಟನೆಯ ಕಾರ್ಮಿಕರು ಭಾಗವಹಿಸಿದ್ದರು.

**ಮಳೆಯನ್ನು ಲೆಕ್ಕಿಸದೆ ಪ್ರತಿಭಟನೆ:**

ಫ್ರೀಡಂ ಪಾರ್ಕ್‌ನಲ್ಲಿ ಕಾರ್ಮಿಕರು ಜಮಾವಣೆಯಾಗುತ್ತಿದ್ದಂತೆ ಜಿಟಿ ಜಿಟಿ ಆರಂಭವಾದ ಮಳೆ ನಂತರದಲ್ಲಿ ಜೋರಾಗಿ ಸುರಿಯಲಾರಂಭಿಸಿತು. ಆದರೆ ಮಳೆಯನ್ನೂ ಲೆಕ್ಕಿಸದೆ ಕಾರ್ಮಿಕರು ಪ್ರತಿಭಟನೆಯನ್ನು ನಡೆಸಿದರು. ಚೇರ್‌ಗಳನ್ನು ಹಿಡಿದುಕೊಂಡು ತಲೆಗೆ ರಕ್ಷಣೆ ಪಡೆಯುತ್ತಿದ್ದ ದೃಶ್ಯ ನೋಡುಗರನ್ನು ಸೆಳೆಯಿತು.

ಕಲ್ಯಾಣ ಮಂಡಳಿ ಕಾರ್ಯದರ್ಶಿ ಶ್ರೀ ಅಕ್ರಂಪಾಷಾ, ಹೆಚ್ಚುವರಿ ಕಾರ್ಮಿಕ ಆಯುಕ್ತರಾದ ಶ್ರೀ ನರಸಿಂಹಮೂರ್ತಿ ಹಾಗೂ ಜಂಟಿ ಕಾರ್ಮಿಕ ಆಯುಕ್ತರಾದ ಶ್ರೀ ರವಿಕುಮಾರ್ ಸರ್ಕಾರದ ಪರವಾಗಿ ಮನವಿ ಸ್ವೀಕರಿಸಿದರು ಮತ್ತು ಸೆಪ್ಟೆಂಬರ್ 30 ರಂದು ಸಮನ್ವಯ ಸಮಿತಿ ಮುಖಂಡರೊಂದಿಗೆ ಅಧಿಕೃತ ಸಭೆಯನ್ನು ಕಾರ್ಮಿಕ ಸಚಿವರು ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗಳ ಉಪಸ್ಥಿತಿಯಲ್ಲಿ ನಡೆಸುವುದಾಗಿ ಭರವಸೆ ನೀಡಿದರು. ಒಂದೆರಡು ದಿನಗಳಲ್ಲಿ ಸಮನ್ವಯ ಸಮಿತಿ ಮುಖಂಡರನ್ನು ಮುಖ್ಯಮಂತ್ರಿ ಗಳೊಂದಿಗೆ ನೇರ ಭೇಟಿ ಮಾಡಿಸುವುದಾಗಿ ಪಶ್ಚಿಮ ವಲಯ ಪೊಲೀಸ್ ಆಯುಕ್ತರಾದ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸುರಿಯುವ ಮಳೆಯಲ್ಲೂ ಚದುರದೇ ಭಾಗವಹಿಸಿದ್ದ ಕಾರ್ಮಿಕರು ಹೋರಾಟ ಅಂತ್ಯಗೊಳಿಸಿದರು.

**JANASHAKTHI KANNADA VARA PATRIKE:** Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
**Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **NITYANANDASWAMI**